ಬೆಂಗಳೂರು
ನಗರ ವಿಶ್ವವಿದ್ಯಾನಿಲಯ

**BENGALURU**
**CITY UNIVERSITY**

Office of the Registrar, Central College Campus, Dr. B.R. Ambedkar Veedhi, Bengaluru – 560 001.
PhNo.080-22131385, E-mail: registrar@bcu.ac.in

ಸಂ:ಬಿಸಿಯು/ಎಸ್‌ವೈಎನ್/ಸಿಂಡಿಕೇಟ್–25/319 /2023–24 ದಿನಾಂಕ:06.03.2025

ಗೆ,
ಮಾನ್ಯ ಸಿಂಡಿಕೇಟ್ ಸದಸ್ಯರು,
ಬೆಂಗಳೂರು ನಗರ ವಿಶ್ವವಿದ್ಯಾನಿಲಯ,
ಬೆಂಗಳೂರು–560001

ಮಾನ್ಯರೆ,

ವಿಷಯ: ದಿನಾಂಕ: 28.02.2024 ರಂದು ಜರುಗಿದ ಸಿಂಡಿಕೇಟ್ 25ನೇ ಸಾಮಾನ್ಯ ಸಭೆಯ ನಡವಳಿಗಳು.

****

ದಿನಾಂಕ: 28.02.024 ರಂದು ಪೂರ್ವಾಹ್ನ 11.30 ಗಂಟೆಗೆ ಜರುಗಿದ ಸಿಂಡಿಕೇಟ್ 25ನೇ ಸಾಮಾನ್ಯ ಸಭೆಯ ನಡವಳಿಗಳನ್ನು ಮಾನ್ಯ ಕುಲಪತಿಗಳು ಅನುಮೋದಿಸಿದಂತೆ, ಬೆಂಗಳೂರು ವಿಶ್ವವಿದ್ಯಾಲಯದ ಪರಿನಿಯಮಾವಳಿ 5.16 ರನ್ವಯ ಕಳುಹಿಸುತ್ತಿದ್ದೇನೆ.

ನಡವಳಿಗಳನ್ನು ರವಾನಿಸಿದ ದಿನಾಂಕದಿಂದ ಏಳು ದಿನಗಳೊಳಗಾಗಿ ಸಭೆಯಲ್ಲಿ ಹಾಜರಿದ್ದ ಸದಸ್ಯರು, ನಡವಳಿಗಳ ಬಗ್ಗೆ ಯಾವುದೇ ಆಕ್ಷೇಪಣೆಯನ್ನು ಕಳುಹಿಸದಿದ್ದಲ್ಲಿ, ಮೇಲೆ ಹೇಳಿದ ಪರಿನಿಯಮಾವಳಿಗಳ ಅನುಸಾರ ಅವುಗಳನ್ನು ಸ್ಥಿರೀಕರಿಸಲಾಗಿದೆ ಎಂದು ಪರಿಗಣಿಸಲಾಗುವುದು.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಕುಲಸಚಿವರು

ಅಡಕ: ಮೇಲಿನಂತೆ

ಪ್ರತಿಗಳು:

1. ರಾಜ್ಯಪಾಲರ ವಿಶೇಷ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು – 560 001.
2. ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ), ಕರ್ನಾಟಕ ಸರ್ಕಾರ, ಬೆಂಗಳೂರು
3. ಕುಲಪತಿಗಳು, ಕುಲಸಚಿವರು, ಕುಲಸಚಿವರು (ಮೌಲ್ಯಮಾಪನ), ವಿತ್ತಾಧಿಕಾರಿಗಳ ಆಪ್ತ ಕಾರ್ಯದರ್ಶಿಗಳಿಗೆ, ಬೆಂ.ನ.ವಿ.

ಬೆಂಗಳೂರು ನಗರ ವಿಶ್ವವಿದ್ಯಾನಿಲಯ **BENGALURU CITY UNIVERSITY**

Office of the Registrar, Central College Campus, Dr. B.R. Ambedkar Veedhi, Bengaluru – 560 001.
Ph.No.080-22131385, E-mail: registrar@bcu.ac.in

ಸಂಖ್ಯೆ:ಬಿಸಿಯು/ಸಿಂಡಿಕೇಟ್/25ನೇ ಸಾಮಾನ್ಯ/319 /2023–24 ದಿನಾಂಕ: 06.03.2024

ದಿನಾಂಕ 28.02.204 ರಂದು ಬೋರ್ಡ್‌ರೂಮ್, ಜ್ಞಾನಜ್ಯೋತಿ ಸಭಾಂಗಣ, ಅರಮನೆ ರಸ್ತೆ, ಬೆಂಗಳೂರು – 560 001 ಇಲ್ಲಿ ಜರುಗಿದ 25ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು.

**ಸಭೆಯಲ್ಲಿ ಉಪಸ್ಥಿತರಿದ್ದ ಸದಸ್ಯರು:**

| | | |
|---|---|---|
| 1. | ಪ್ರೊ. ಲಿಂಗರಾಜ ಗಾಂಧಿ<br>ಕುಲಪತಿಗಳು, | ಸಭಾಧ್ಯಕ್ಷರು |
| 2. | ಡಾ. ಎಸ್. ಹರಿಪ್ರಸಾದ್ | ಸದಸ್ಯರು |
| 3. | ಶ್ರೀ ಎಂ. ವಿ. ರಂಗಪ್ಪ | ಸದಸ್ಯರು |
| 4. | ಶ್ರೀ. ಸಮರ್ಥ ಮುನಿರಾಜು | ಸದಸ್ಯರು |
| 5. | ಡಾ. ಸಿ. ಎಂ. ನವೀನ್‌ಕುಮಾರ್ | ಸದಸ್ಯರು |
| 6. | ಶ್ರೀ. ರಮೇಶ್ ನಾರಾಯಣ್ ರಾವ್ | ಸದಸ್ಯರು |
| 7. | ಡಾ. ಪ್ರೇಮ | ಸದಸ್ಯರು |
| 8. | ಡಾ. ಪಂಕಜ್ ಚೌಧರಿ | ಸದಸ್ಯರು |
| 9. | ಡಾ. ಪಿ. ಆರ್. ಚೇತನಾ | ಸದಸ್ಯರು |
| 10. | ಶ್ರೀ ತ್ರಿಮೂರ್ತಿ ಬಿ<br>ಸಹಾಯಕ ನಿರ್ದೇಶಕ<br>(ಆಯುಕ್ತರು ಸಾರ್ವಜನಿಕ ಶಿಕ್ಷಣ ಪರವಾಗಿ) | ಸದಸ್ಯರು |
| 11. | ಡಾ. ಆನಂದ ಕುಮಾರ್ ಸಿ. ಎಸ್<br>ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 12. | ಶ್ರೀ ಜವರೇಗೌಡ ಟಿ, ಕೆ.ಎ.ಎಸ್<br>ಕುಲಸಚಿವರು | ಸದಸ್ಯ ಕಾರ್ಯದರ್ಶಿಗಳು |

ಸಭೆಯ ಪ್ರಾರಂಭದಲ್ಲಿ ಕುಲಸಚಿವರು ಎಲ್ಲ ಸದಸ್ಯರನ್ನು ಸ್ವಾಗತಿಸಿ, ಸಭೆಯನ್ನು ಉದ್ದೇಶಿಸಿ ಪ್ರಸ್ತಾವಿಕವಾಗಿ ಮಾತನಾಡಿ ಸಭೆಗೆ ಚಾಲನೆ ನೀಡಲು ಮಾನ್ಯ ಸಭಾಧ್ಯಕ್ಷರನ್ನು ವಿನಂತಿಸಿದರು.

ಕುಲಪತಿಗಳು ಎಲ್ಲ ಸದಸ್ಯರನ್ನು ಮತ್ತೊಮ್ಮೆ ಸ್ವಾಗತಿಸಿ ಕಳೆದ ಸಿಂಡಿಕೇಟ್ ಸಭೆಯಿಂದ ಇಲ್ಲಿಯವರೆಗೆ ವಿಶ್ವವಿದ್ಯಾನಿಲಯದಲ್ಲಿ ಜರುಗಿದ ವಿವಿಧ ಚಟುವಟಿಕೆಗಳ ಕುರಿತು ಸಭೆಗೆ ಮಾಹಿತಿ ನೀಡಿದರು.

1. ದಿನಾಂಕ 24.11.2023 ರಂದು ಕರ್ನಾಟಕ ರಾಜ್ಯೋತ್ಸವವನ್ನು ಜ್ಞಾನಜ್ಯೋತಿ ಸಭಾಂಗಣದಲ್ಲಿ ಆಚರಿಸಲಾಯಿತು. ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರು, ಹೆಸರಾಂತ ಕವಿಗಳು, ನಾಟಕಕಾರರು, ಕೇಂದ್ರ ಸಾಹಿತ್ಯ ಅಕಾಡೆಮಿಯ ವಿಶ್ರಾಂತ ಅಧ್ಯಕ್ಷರೂ ಆಗಿರುವ ನಾಡೋಜ ಡಾ. ಚಂದ್ರಶೇಖರ ಕಂಬಾರರವರು ಸಮಾರಂಭದ ಉದ್ಘಾಟನೆ ಮಾಡಿದರು. ಜನಪ್ರಿಯ ಚಲನಚಿತ್ರ ಗೀತ ಸಾಹಿತಿಗಳು ಹಾಗೂ ಸಂಗೀತ ಸಂಯೋಜಕರಾದ ಕವಿರತ್ನ ಡಾ. ವಿ. ನಾಗೇಂದ್ರ ಪ್ರಸಾದ್ ರವರು ಮುಖ್ಯ ಅತಿಥಿಗಳಾಗಿ ಆಗಮಿಸಿದರು. ಇದೇ ಸಂದರ್ಭದಲ್ಲಿ ಟಿ.ವಿ. ಮನರಂಜನಾ ಕಾರ್ಯಕ್ರಮಗಳ ಬಾಲ ಕಲಾವಿದರಾದ ವನ್ಶಿಕಾ ಅಂಜನಿ ಕಶ್ಯಪ್ ಮತ್ತು ಮಹಿತ.ವಿ. ರವರಿಗೆ ಪ್ರತಿಭಾ ಪುರಸ್ಕಾರ ನೀಡಿ ಸನ್ಮಾನಿಸಲಾಯಿತು.

2. 26.11.2023 ರಂದು ವಿಶ್ವವಿದ್ಯಾನಿಲಯದಲ್ಲಿ ಸಂವಿಧಾನ ದಿನಾಚರಣೆಯನ್ನು ಆಚರಿಸಲಾಯಿತು. ಉಪಸ್ಥಿತರಿದ್ದ ವಿದ್ಯಾರ್ಥಿ, ಸಿಬ್ಬಂದಿ, ಅಧ್ಯಾಪಕರುಗಳಿಗೆ ಸಂವಿಧಾನದ ಪೀಠಿಕೆಯನ್ನು ಬೋಧಿಸಲಾಯಿತು.

3. 01.12.2023 ರಂದು ಭಾರತ ಸರ್ಕಾರದ ಯುವಜನ ವ್ಯವಹಾರ ಹಾಗೂ ಕ್ರೀಡಾ ಸಚಿವಾಲಯ, ನೆಹರು ಯುವ ಕೇಂದ್ರ ಸಂಘಟನೆ, ರಾಜ್ಯ ಎನ್.ಎಸ್.ಎಸ್. ಕೋಶಗಳ ಸಹಯೋಗದಲ್ಲಿ, ರಾಜ್ಯ ಯುವ ಉತ್ಸವದ ಉದ್ಘಾಟನಾ ಸಮಾರಂಭ ಜ್ಞಾನಜ್ಯೋತಿ ಸಭಾಂಗಣದಲ್ಲಿ ಜರುಗಿತು. ಕೇಂದ್ರ ಸರ್ಕಾರದ ರಸಾಯನಿಕ, ರಸಗೊಬ್ಬರ, ನವೀಕರಿಸಬಹುದಾದ ಇಂಧನ ಖಾತೆ ರಾಜ್ಯ ಸಚಿವರಾದ ಶ್ರೀ ಭಗವಂತ ಖೂಬ ರವರು ಉದ್ಘಾಟನೆ ಮಾಡಿದರು.

4. ದಿನಾಂಕ 6.12.2023ರಂದು ಡಾ. ಬಿ.ಆರ್. ಅಂಬೇಡ್ಕರ್ ರವರ ಪರಿನಿರ್ವಾಣ ದಿನವನ್ನು ಆಚರಿಸಲಾಯಿತು.

5. ದಿನಾಂಕ 07.12.2023 ರಂದು ರಾಜ್ಯ ಶಿಕ್ಷಣ ನೀತಿ ಆಯೋಗದ ವಿನಂತಿಯ ಮೇರೆಗೆ, ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಗೊಳಿಸುವಲ್ಲಿ ಸವಾಲುಗಳ ಕುರಿತು ಬೆಂಗಳೂರು ವಲಯದ ಹತ್ತು ವಿಶ್ವವಿದ್ಯಾನಿಲಯಗಳ ಕುಲಪತಿಗಳು, ವಿಶ್ರಾಂತ ಕುಲಪತಿಗಳ ಸಂಘದ ಪ್ರತಿನಿಧಿಗಳು, ಪ್ರತಿ ವಿಶ್ವವಿದ್ಯಾನಿಲಯದ ಆಯ್ದ ಪ್ರಾಂಶುಪಾಲರುಗಳು, ವಿಶ್ವವಿದ್ಯಾಲಯಗಳ ಅಧ್ಯಾಪಕರ ಸಂಘ, ಸರ್ಕಾರಿ ಕಾಲೇಜು ಅಧ್ಯಾಪಕರ ಸಂಘ, ಖಾಸಗಿ ಕಾಲೇಜುಗಳ ಅಧ್ಯಾಪಕರ ಸಂಘದ ಪದಾಧಿಕಾರಿಗಳ, ವಿದ್ಯಾರ್ಥಿ ಸಂಘಟನೆಗಳ ಪ್ರತಿನಿಧಿಗಳ ಸಭೆಯಯನ್ನು ಜ್ಞಾನಜ್ಯೋತಿ ಸಭಾಂಗಣದ ಸೆಮಿನಾರ್ ಹಾಲ್ ನಲ್ಲಿ ಜರುಗಿತು. ಈ ಸಭೆಯಲ್ಲಿ, ರಾಜ್ಯ ಶಿಕ್ಷಣ ನೀತಿ ಆಯೋಗ ಸರ್ಕಾರಕ್ಕೆ ಸಲ್ಲಿಸಬೇಕಾಗಿರುವ ಮಧ್ಯಂತರ ವರದಿ ಕುರಿತು ಸಭೆಯಲ್ಲಿ ಹಾಜರಿದ್ದ ಪ್ರತಿನಿಧಿಗಳಿಂದ ಅಭಿಪ್ರಾಯಗಳನ್ನು ಸಂಗ್ರಹಿಸಲಾಯಿತು. ರಾಜ್ಯ ಶಿಕ್ಷಣ ನೀತಿ ಆಯೋಗದ ಅಧ್ಯಕ್ಷರಾದ ಪ್ರೊ. ಸುಖದೇವ್ ಥೋರಟ್ ರವರು ಆನ್ ಲೈನ್ ನಲ್ಲಿ ಉಪಸ್ಥಿತರಿದ್ದು ಪ್ರಾಸ್ತಾವಿಕವಾಗಿ ಮಾತನಾಡಿದರು. ಆಯೋಗದ ಸದಸ್ಯರು ಹಾಗೂ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿಗಳಾದ ಪ್ರೊ. ಎಸ್. ಜಾಫೆಟ್ ರವರು ಸಭೆಯನ್ನು ನಿರ್ವಹಿಸಿದರು.

6. ದಿನಾಂಕ 8.12.2023ರಂದು ವಿಶ್ವವಿದ್ಯಾನಿಲಯದ ರಾಜ್ಯ ಶಾಸ್ತ್ರ ವಿಭಾಗ ಮತ್ತು ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗಗಳು ಆಯೋಜಿಸಿದ ಕಾರ್ಯಕ್ರಮದಲ್ಲಿ "Freedom of Speech and Expression in Contemporary India" ವಿಷಯ ಕುರಿತು ಶ್ರೀ ಆಕಾರ ಪಟೇಲ್, ಆಮ್ನೆಸ್ಟಿ ಇಂಟರ್ ನ್ಯಾಷನಲ್ ಇನ್ ಇಂಡಿಯಾ ಸಂಸ್ಥೆಯ ಮುಖ್ಯಸ್ಥರು ಉಪನ್ಯಾಸ ನೀಡಿದರು.

7. ದಿನಾಂಕ 19.12.2023 ರಂದು ವಿಶ್ವವಿದ್ಯಾನಿಲಯದ 5ನೇ ಅಂತರ ಮಹಾವಿದ್ಯಾಲಯಗಳ ಕ್ರೀಡಾಕೂಟದ ಉದ್ಘಾಟನೆಯನ್ನು ನಗರದ ಕಂಠೀರವ ಕ್ರೀಡಾಂಗಣದಲ್ಲಿ ಜರುಗಿಸಲಾಯಿತು.

8. ಕನ್ನಡ ಅಧ್ಯಯನ ವಿಭಾಗದ ವತಿಯಿಂದ ದಿನಾಂಕ 29.12.2023ರಂದು ರಾಷ್ಟ್ರಕವಿ ಕುವೆಂಪು ರವರ 119ನೇ ಜನ್ಮ ದಿನಾಚರಣೆ ಪ್ರಯುಕ್ತ "ವಿಶ್ವಮಾನವ ದಿನಾಚರಣೆ" ಯನ್ನು ಆಚರಿಸಲಾಯಿತು. ಹಂಪಿ

ಕನ್ನಡ ವಿಶ್ವವಿದ್ಯಾನಿಲಯದ ನಿವೃತ್ತ ಪ್ರಾಧ್ಯಾಪಕರು ಹಾಗೂ ಕುಪ್ಪಳ್ಳಿಯ ಕುವೆಂಪು ಕನ್ನಡ ಅಧ್ಯಯನ ಕೇಂದ್ರದ ಮಾಜಿ ನಿರ್ದೇಶಕರಾದ ಡಾ. ಕೆ.ಸಿ. ಶಿವಾರೆಡ್ಡಿ ರವರು ಮುಖ್ಯ ಅತಿಥಿಗಳಾಗಿ ಆಗಮಿಸಿ ಉಪನ್ಯಾಸ ನೀಡಿದರು.

9. ವಿಶ್ವವಿದ್ಯಾನಿಲಯದಲ್ಲಿ ಮುಂಬಡ್ತಿ ಹೊಂದಲು ಅರ್ಹತೆ ಹೊಂದಿರುವ ಸಹಾಯಕರಿಗೆ ಅಧೀಕ್ಷಕರು ಮತ್ತು ಅಧೀಕ್ಷಕರಿಗೆ ಸಹಾಯಕ ಕುಲಸಚಿವರ ಹುದ್ದೆಗೆ ದಿನಾಂಕ 01.01.2024ರಂದು ಪದೋನ್ನತಿ ನೀಡಲಾಗಿದೆ. ಅಧ್ಯಾಪಕರ ಪದೋನ್ನತಿಯ ಪ್ರಕ್ರಿಯೆ ಪ್ರಗತಿಯಲ್ಲಿದ್ದು ಅತ್ಯಂತ ಶೀಘ್ರದಲ್ಲಿ ಪದೋನ್ನತಿ ನೀಡಲು ಅಗತ್ಯ ಸಿದ್ಧತೆಮಾಡಿಕೊಳ್ಳಲಾಗಿದೆ.

10. ದಿನಾಂಕ 11.01.2024 ರಂದು ವಿಶ್ವವಿದ್ಯಾನಿಲಯದ ಪ್ರಾಣಿಶಾಸ್ತ್ರ ವಿಭಾಗದ ವತಿಯಿಂದ "Unravelling Life Science through Technology" ವಿಷಯದ ಒಂದು ದಿವಸದ ಸಿಂಪೋಸಿಯಂ ಆಯೋಜಿಸಲಾಗಿತ್ತು.

11. ದಿನಾಂಕ 12.01.2023 ರಂದು ಬಹುಶಿಸ್ತೀಯ ಮಹಿಳಾ ಘಟಕ ಕಾಲೇಜಿನಲ್ಲಿ ರಾಷ್ಟ್ರೀಯ ಯುವ ದಿನಾಚರಣೆಯನ್ನು ಆಚರಿಸಲಾಯಿತು.

12. ವೃತ್ತಿನಿರತ ಉದ್ಯೋಗಿಗಳ ಅನುಕೂಲಕ್ಕಾಗಿ ಜಪಾನ್ ಭಾಷೆಯ ಡಿಪ್ಲೋಮ ಕೋರ್ಸ್‌ನ್ನು ಪ್ರಾರಂಭಿಸಲಾಯಿತು.

13. ದಿನಾಂಕ 12.01.1023 ರಂದು ಗ್ರಂಥಾಲಯ ಸಲಹಾ ಸಮಿತಿ ಸಭೆಯನ್ನು ಜರುಗಿಸಲಾಯಿತು. ಈ ಸಭೆಯ ನಡವಳಿಗಳನ್ನು ಪ್ರಸ್ತುತ ಸಿಂಡಿಕೇಟ್ ಸಭೆಯ ಮುಂದೆ ಮಂಡಿಸಲಾಗಿದೆ.

14. ದಿನಾಂಕ 22.01.2024ರಂದು ಯು.ಕೆ. ದೇಶದ ಔಬರ್ನ್ ವಿಶ್ವವಿದ್ಯಾನಿಲಯದ ಶೈಕ್ಷಣಿಕ ತಜ್ಞರ ತಂಡ ಬೆಂಗಳೂರು ನಗರ ವಿಶ್ವವಿದ್ಯಾನಿಲಯಕ್ಕೆ ಭೇಟಿ ನೀಡಿ ಅಧ್ಯಾಪಕರು ಮತ್ತು ಅಧಿಕಾರಿಗಳೊಂದಿಗೆ ವ್ಯಾಸಂಗ ಕ್ರಮಗಳು ಮತ್ತು ಪರಸ್ಪರ ಸಹಯೋಗ ಕುರಿತು ಚರ್ಚಿಸಿದರು.

15. ದಿನಾಂಕ 25.01.2024ರಂದು ರಾಷ್ಟ್ರೀಯ ಮತದಾರರ ದಿನವನ್ನು ಆಚರಿಸಲಾಯಿತು.

16. ದಿನಾಂಕ 26.01.2024ರಂದು ಗಣರಾಜ್ಯೋತ್ಸವವನ್ನು ಆಚರಿಸಲಾಯಿತು. ಸಮಾರಂಭದಲ್ಲಿ, ವಿದ್ಯಾರ್ಥಿಗಳು, ಅಧಿಕಾರಿಗಳು, ಶಿಕ್ಷಕರು ಮತ್ತು ಸಿಬ್ಬಂದಿಗಳು ಭಾಗವಹಿಸಿದ್ದರು.

17. ದಿನಾಂಕ. 30.01.2024 ರಂದು "ಹುತಾತ್ಮರ ದಿನಾಚರಣೆ" ಆಚರಿಸಲಾಯಿತು. ಅದೇ ದಿವಸ ವಿಶ್ವವಿದ್ಯಾನಿಲಯದ ಹಿಂದುಳಿದ ಮತ್ತು ಅಲ್ಪಸಂಖ್ಯಾತ ವರ್ಗಗಳ ವಿದ್ಯಾರ್ಥಿ ಕೋಶದಿಂದ "ವೃತ್ತಿ ನಿರ್ವಹಣೆ" ಕುರಿತು ಒಂದು ದಿವಸದ ಸಿಂಪೋಸಿಯಂ ಜರುಗಿಸಲಾಯಿತು.

18. ದಿನಾಂಕ 31.01.2024 ರಂದು ರಾಜ್ಯಶಾಸ್ತ್ರ, ಸಮಾಜಕಾರ್ಯ, ಇತಿಹಾಸ ಮತ್ತು ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗಗಳಿಂದ "ಮಾನವ ಹಕ್ಕುಗಳು ಮತ್ತು ಮಾಧ್ಯಮ" ಕುರಿತು ಉಪನ್ಯಾಸ ಏರ್ಪಡಿಸಲಾಗಿತ್ತು. ಶ್ರೀ ವೆಂಕಟೇಶ ನಾಯಕ, ನಿರ್ದೇಶಕರು, ಕಾಮನ್‌ವೆಲ್ತ್ ಹ್ಯೂಮನ್ ರೈಟ್ಸ್ ಇನಿಶಿಯೇಟಿವ್ ಉಪನ್ಯಾಸ ನೀಡಿದರು.

19. 13.1.2024ರಂದು ಸಸ್ಯಶಾಸ್ತ್ರ ವಿಭಾಗದ ವತಿಯಿಂದ 'Challenges and New Vistas in Botany" ಕುರಿತು ಸಿಂಪೋಸಿಯಂ ಆಯೋಜಿಸಲಾಗಿತ್ತು. ಖ್ಯಾತ ವಿಜ್ಞಾನಿಗಳು, ಅಧ್ಯಾಪಕರು ಇದರಲ್ಲಿ ಭಾಗವಹಿಸಿದರು.

20. ಬೆಂಗಳೂರು ನಗರ ವಿಶ್ವವಿದ್ಯಾನಿಲಯ ಹಾಗೂ ಬರ್ಮಿಂಗ್‌ಹ್ಯಾಮ್ ನಗರ ವಿಶ್ವವಿದ್ಯಾಲಯಗಳ ಜಂಟಿ ಸಹಭಾಗಿತ್ವದಲ್ಲಿ ಪ್ರಾರಂಭಗೊಂಡಿರುವ "NET CARBON ZERO HUB" ಸಂಶೋಧನಾ ಯೋಜನೆಯ ಭಾಗವಾಗಿ 'Dual Transition of Net Zero Carbon and Digital Transformation' ವಿಷಯದ ಮೇಲೆ ಫೆಬ್ರವರಿ ತಿಂಗಳ 16 ಮತ್ತು 17 ರಂದು ಎರಡು ದಿವಸಗಳ

ಅಂತರ್ ರಾಷ್ಟ್ರೀಯ ವಿಚಾರ ಸಮ್ಮೇಳನವನ್ನು ವಿಶ್ವವಿದ್ಯಾನಿಲಯದ ಜ್ಞಾನಜ್ಯೋತಿ ಸಭಾಂಗಣದಲ್ಲಿ ಜರುಗಿಸಲಾಯಿತು. ರಾಜ್ಯದ ಉನ್ನತ ಶಿಕ್ಷಣ ಸಚಿವರಾದ ಸನ್ಮಾನ್ಯ ಡಾ. ಎಂ.ಸಿ. ಸುಧಾಕರ ರವರು ಮುಖ್ಯ ಅತಿಥಿಗಳಾಗಿ ಆಗಮಿಸಿ ಸಮ್ಮೇಳನವನ್ನು ಉದ್ಘಾಟಿಸಿದರು. ಹಿರೋ ಸೈಕಲ್ಸ್ ಸಂಸ್ಥೆಯ ಕಾರ್ಯನಿರ್ವಾಹಕ ನಿರ್ದೇಶಕರಾದ ಡಾ. ಪ್ರೇಮಕುಮಾರ (ಆನ್‌ಲೈನ್‌ನಲ್ಲಿ), ಕರ್ನಾಟಕ ವಾಣಿಜ್ಯ ಮಂಡಳಿಯ ಅಧ್ಯಕ್ಷರಾದ ಶ್ರೀ ರಮೇಶಚಂದ್ರ ಲಾಹೋಟಿ, ಬರ್ಮಿಂಗ್ ಹ್ಯಾಮ್ ಸಿಟಿ ವಿಶ್ವವಿದ್ಯಾನಿಲಯದ ಡಾ. ಅಲೆಕ್ಸ್ ಡಿ ರಾಯ್ಬರ್ ಹಾಗೂ ಡಾ. ಶಿಶಾಂಕ್, ವೋಲ್ವರ್‌ಹ್ಯಾಂಪ್ಟನ್ ವಿಶ್ವವಿದ್ಯಾನಿಲಯದ ಡಾ. ಸುರೇಶ್ ರೇಣುಕಪ್ಪ ಹಾಗೂ ಡಾ. ಸುಭಾಷಿಣಿ ಸುರೇಶ್, ಅವರಲ್ಲದೆ ಶ್ರೀ ಉಮೇಶ್ ರಾವ್, ನಿವಿಯಾ ಲಾಜಿಸ್ಟಿಕ್, ಡಾ ಸುರೇಶ್ ಬಾಬು, ವಾಸುಕಿ ಗ್ರೂಪ್ ಆಫ್ ಕಂಪನೀಸ್, ಶ್ರೀ ಪ್ರವೀಣ್ ಹುನ್‌ಗುಂದ್, ಐಎಎಫ್, ರೂರಲ್ ಡೆವಲಪ್‌ಮೆಂಟ್ ಮತ್ತು ಪಂಚಾಯತ್ ರಾಜ್ ಇಲಾಖೆ, ಶ್ರೀ ಸುಂದರೇಸನ್ ಜಗದೀಸನ್, ಅಧ್ಯಕ್ಷರು, ಫಿಲಿಪ್ಸ್, ಡಾ. ರಿಡೋನೆ ಸಾರಕ್, ಯುನಿವರ್ಸಿಟಿ ಆಫ್ ಲಿಂಕನ್, ಯು.ಕೆ, ಶ್ರೀ. ಸಂಗಮೇಶ್ ವಡಗಾವೆ, ಸ್ಕೈರಾಕೆಟ್ ಇನೋವೇಷನ್ಸ್, ಯು.ಕೆ, ಶ್ರೀ. ಲೂಕ್ ಸಿಬ್ರೈಟ್, ಕೋಲಾಸ್ ರೇಲ್ ಲಿಮಿಟೆಡ್, ಯು.ಕೆ, ಶ್ರೀ. ನಾಗರಾಜು ಯಾಬತ್ತಿ, TERI, ಬೆಂಗಳೂರು, ಶ್ರೀ ಚಂದ್ರಶೇಖರ್ ಸುಬ್ಬರಾವ್, ಯುನಿವರ್ಸಿಟಿ ಆಫ್ ವೋಲ್ವರ್‌ಹ್ಯಾಂಪ್ಟನ್, ಯು.ಕೆ, ಪ್ರೊ. ಮೈಕಲ್ ಫುಲೆನ್, ಯುನಿವರ್ಸಿಟಿ ಆಫ್ ವೋಲ್ವರ್‌ಹ್ಯಾಂಪ್ಟನ್, ಯು.ಕೆ, ಶ್ರೀ ನರಸಿಂಹ ಮೂರ್ತಿ, ಆಟೋಲಿವ್–ಇಂಡಿಯಾ, ಲತಾ. ಸಿ, ಕಾಂಟಿನೆಂಟಲ್ ಅಟೋಮೋಟಿವ್ಸ್, ಶ್ರೀ ಶ್ರೀನಿವಾಸಲು, ಐಎಫ್‌ಎಸ್, ಕಮಿಷನರ್–ಆಯುಷ್, ಕೆ.ಜಿ. ಚಂದ್ರಶೇಖರ್, ಕಾರ್ಯನಿರ್ವಾಹಕ ನಿರ್ದೇಶಕರು ಕೆ.ಎಸ್.ಹೆಚ್.ಇ.ಸಿ., ಮುಂತಾದವರು ವೈಯಕ್ತಿಕವಾಗಿ ಮತ್ತು ಕೆಲವರು ಆನ್‌ಲೈನ್ ಮುಖಾಂತರ ಭಾಗವಹಿಸಿದರು. ದಿನಾಂಕ 17.2.2024 ರಂದು ಜರುಗಿದ ಸಮಾರೋಪ ಸಮಾರಂಭದಲ್ಲಿ, ಖ್ಯಾತ ಟೋಯಟ ಕಂಪನಿಯ ಉಪಾಧ್ಯಕ್ಷರಾದ ಶ್ರೀ ಸಂತೋಷ ರಾವ್ ರವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಎರಡೂ ವಿಶ್ವವಿದ್ಯಾನಿಲಯಗಳ, ದೇಶ–ವಿದೇಶಗಳ ವಿಶ್ವವಿದ್ಯಾನಿಲಯಗಳ ಅಧ್ಯಾಪಕರು, ವಿದ್ವಾಂಸರು, ಕೈಗಾರಿಕೆಗಳ ತಜ್ಞರು, ಸಂಶೋಧಕರು, ನೀತಿ ನಿರೂಪಕರು, ಎನ್.ಜಿ.ಓ.ಗಳ ಪ್ರತಿನಿಧಿಗಳು ಈ ಅಂತರ್ ರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಿದರು. ಒಟ್ಟು 7 ಟೆಕ್ನಿಕಲ್ ಸೆಷನ್ ಗಳಲ್ಲಿ ಒಟ್ಟು 125 ಸಂಶೋಧನಾ ಲೇಖನಗಳನ್ನು ಮಂಡಿಸಲಾಯಿತು.

21. ದಿನಾಂಕ 21.02.2024ರಂದು ಅಮೇರಿಕ ದೇಶದ ಬ್ರಿಡ್ಜ ವಾಟರ್ ಸ್ಟೇಟ್ ಯುನಿವರ್ಸಿಟಿಯ ಶಿಕ್ಷಣ ತಜ್ಞರ ತಂಡ ವಿಶ್ವವಿದ್ಯಾನಿಲಯಕ್ಕೆ ಭೇಟಿ ನೀಡಿ ಪ್ರಾಧ್ಯಾಪಕರು ಮತ್ತು ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿತು. ನಮ್ಮ ವಿಶ್ವವಿದ್ಯಾನಿಲಯದ ವ್ಯಾಸಂಗ ಕ್ರಮವನ್ನು ಅರಿತುಕೊಳ್ಳುವ ಹಾಗೂ ಎರಡೂ ವಿಶ್ವವಿದ್ಯಾನಿಲಯಗಳು ಶೈಕ್ಷಣಿಕ ಮತ್ತು ಸಂಶೋಧನಾ ವಲಯದಲ್ಲಿ ಪರಸ್ಪರ ಹೊಂದಬಹುದಾದ ಸಹಯೋಗಗಳ ಕುರಿತು ಚರ್ಚೆ ನಡೆಸಿತು.

22. ದಿನಾಂಕ 22.02.2024ರಂದು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು ರಾಜ್ಯದ ಎಲ್ಲ ವಿಶ್ವವಿದ್ಯಾನಿಲಯಗಳ ಪಿ.ಹೆಚ್.ಡಿ. ಪ್ರವೇಶಗಳಿಗೆ ಏಕ ರೂಪದ ಕೇಂದ್ರೀಕೃತ ಪ್ರವೇಶ ಪರೀಕ್ಷೆಗಳನ್ನು ನಡೆಸಲು ಹಾಗೂ ಸಂಶೋಧನಾ ವಿದ್ಯಾರ್ಥಿಗಳ ಹಂಚಿಕೆ ಕುರಿತು ನಿಯಮಾವಳಿಗಳನ್ನು ಸಿದ್ಧಪಡಿಸಲು ರಚಿಸಿದ ಸಮಿತಿಯ ಸಭೆಯಲ್ಲಿ ಪಾಲ್ಗೊಂಡು ವಿಚಾರಗಳನ್ನು ಪ್ರಸ್ತಾಪಿಸಲಾಯಿತು. ಅದೇ ದಿವಸ ಕೇಂದ್ರೀಯ ಖರೀದಿ ಸಭೆಯನ್ನು ಜರುಗಿಸಿ ಅಗತ್ಯವಾಗಿ ಖರೀದಿಸಬೇಕಾದ ಕಂಪ್ಯೂಟರ್ ಮತ್ತು ಉಪಕರಣಗಳು ಕುರಿತು ಶಿಫಾರಸ್ಸುಗಳನ್ನು ಮಾಡಲಾಯಿತು.

23. ದಿನಾಂಕ 23 ಮತ್ತು 24 ಫೆಬ್ರವರಿ 2024 ರಂದು ವಿಶ್ವವಿದ್ಯಾನಿಲಯದ ಜ್ಞಾನಜ್ಯೋತಿ ಸಭಾಂಗಣದಲ್ಲಿ, ಜಾಗತಿಕ ಭಾಷಾ ಕೇಂದ್ರದ ವತಿಯಿಂದ ಅಂತರಾಷ್ಟ್ರೀಯ ಭಾಷಾ ಮೇಳ–2024 ಆಯೋಜಿಸಲಾಗಿತ್ತು. ಅಂತರಾಷ್ಟ್ರೀಯ ಖ್ಯಾತಿಯ ಕಲಾ ತಜ್ಞೆ ಡಾ. ಚೂಡಾಮಣಿ ನಂದಗೋಪಾಲ್, ಮುಖ್ಯ ಅತಿಥಿಗಳಾಗಿ ಆಗಮಿಸಿ ಕಲೆ ಮತ್ತು ಪ್ರಕೃತಿ ಕುರಿತು ಜಾಗತಿಕ ಮಟ್ಟದಲ್ಲಿ ಬೆಳೆದುಬಂದ ವಿವರಗಳನ್ನು ವಿವರಿಸಿದರು. ಫ್ರಾನ್ಸ್ ಮತ್ತು ಇಟಲಿ ದೇಶಗಳ ಗೌರವಾನ್ವಿತ ಕೌನ್ಸಿಲ್ ಜನರಲ್ ಆದ ಶ್ರೀ ಥೇರಿ ಬರ್ಥಲೋಟ್ ಮತ್ತು ಶ್ರೀ ಅಲ್ಫಾನ್ಸೊ ಟಾಗ್ಲಿಯಾಫೇರಿ, ಜಾಗತಿಕ ಭಾಷೆಗಳ ವಿಭಾಗದ ಸಂಸ್ಥಾಪಕ ಮುಖ್ಯಸ್ಥರಾಗಿದ್ದ ಡಾ. ಸುಮನ ವೆಂಕಟೇಶ್ ಸಮಾರಂಭದಲ್ಲಿ ಅತಿಥಿಗಳಾಗಿ

ಭಾಗವಹಿಸಿದರು. ಎರಡು ದಿವಸಗಳ ಸಮಾರಂಭದಲ್ಲಿ ಖ್ಯಾತ ಪರಿಸರವಾದಿ ಚಿತ್ರ ನಿರ್ಮಾಪಕ, ನಿರ್ದೇಶಕ ಹಾಗೂ ನಟ ಶ್ರೀ ಸುರೇಶ ಹೆಬ್ಳಿಕರ್, ಹಿನ್ನೆಲೆಗಾಯಕಿ, ಡಾ. ಪ್ರಿಯದರ್ಶಿನಿ, ಕಾನೂನು ಪ್ರಾಧ್ಯಾಪಕ ಡಾ. ಟಿ.ಆರ್. ಸುಬ್ರಮಣ್ಯ, ನೃತ್ಯಶಾಸ್ತ್ರದ ಸಂಶೋಧಕಿ ಡಾ ವಿದ್ಯಾ ರಾವ್, ಚಿತ್ರಕಲಾ ಪರಿಷತ್ತಿನ ಕಲಾ ಪ್ರಾಧ್ಯಾಪಕ ಡಾ. ರಾಘವೇಂದ್ರ ರಾವ್ ಕುಲ್ಕರ್ಣಿ ಮತ್ತು ರಂಗ ಕಲಾವಿದ ಡಾ. ಬಾಬು ಹಿರಣ್ಣಯ್ಯ ಭಾಗವಹಿಸಿದರು. ಕುಲಪತಿಗಳಾದ ಪ್ರೊ. ಲಿಂಗರಾಜಾ ಗಾಂಧಿ ಅಧ್ಯಕ್ಷತೆ ವಹಿಸಿದ್ದರು. ಕುಲಸಚಿವರಾದ ಶ್ರೀ ಜವರೇಗೌಡ ಉಪಸ್ಥಿತರಿದ್ದರು. ಜಾಗತಿಕ ಭಾಷಾ ಕೇಂದ್ರದ ಅಧ್ಯಕ್ಷರಾದ ಡಾ. ಜ್ಯೋತಿ ವೆಂಕಟೇಶ್ ರವರು ಕಾರ್ಯಕ್ರಮವನ್ನು ನಿರ್ವಹಿಸಿದರು.

24. ದಿನಾಂಕ 26.2.2024ರಂದು ಹಣಕಾಸು ಸಮಿತಿ ಸಭೆ ಜರುಗಿಸಿ, ವಿಶ್ವವಿದ್ಯಾನಿಲಯದ 2024–25ನೇ ಸಾಲಿನ ಆಯವ್ಯಯ ಅಂದಾಜು ಪತ್ರವನ್ನು ಅನುಮೋದನೆಗೆ ಶಿಫಾರಸ್ಸು ಮಾಡಿರುತ್ತದೆ. ಅದರಂತೆ, 2020–21 ಮತ್ತು 2021–22ನೇ ಸಾಲಿನ ಲೆಕ್ಕಪರಿಶೋಧನಾ ವರದಿಗಳನ್ನು ಪರಿಶೀಲಿಸಿ ಅನುಮೋದನೆ ನೀಡಿದ್ದು ಅವುಗಳನ್ನು ನಿನ್ನೆ ದಿನಾಂಕ 27.2.2024 ರಂದು ಜರುಗಿನ ವಿದ್ಯಾವಿಷಯಕ ಪರಿಷತ್ತಿನ ಸಭೆಯಲ್ಲಿ ಮಂಡಿಸಿ ಪ್ರಸ್ತುತ ಸಭೆಯಲ್ಲಿ ಪರಿಶೀಲನೆ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

25. 2023–24ನೇ ಸಾಲಿನ ಖೇಲೋ ಇಂಡಿಯಾ ವಿಶ್ವವಿದ್ಯಾನಿಲಯಗಳ ಪಂದ್ಯಾಟದಲ್ಲಿ ನಮ್ಮ ವಿಶ್ವವಿದ್ಯಾನಿಲಯದ ಹಾಕಿ ಪುರಷರ ತಂಡ ಸತತವಾಗಿ ಎರಡು ಬಾರಿ ರಾಷ್ಟ್ರೀಯ ಚಾಂಪಿಯನ್ ಆಗಿದ್ದು, ಈ ಸಲ ದ್ವಿತೀಯ ಸ್ಥಾನ ಗಳಿಸಿ ಬೆಳ್ಳಿ ಪದಕ ಪಡೆದಿದ್ದಾರೆ. ಅಲ್ಲದೆ ಅಖಿಲ ಭಾರತ ವಿಶ್ವವಿದ್ಯಾನಿಲಯಗಳ ಪಾಂದ್ಯಾಟದಲ್ಲಿ 3ನೇ ಸ್ಥಾನ ಪಡೆದು ರಜತ ಪದಕ ಪಡೆದಿದೆ. ಇದು ಎಲ್ಲರೂ ಹೆಮ್ಮೆ ಹಾಗೂ ಸಂತೋಷ ಪಡುವ ಸಾಧನೆ.

ನಂತರ ಸದಸ್ಯ ಕಾರ್ಯದರ್ಶಿಗಳಾದ ಕುಲಸಚಿವರಿಗೆ ಕಾರ್ಯಸೂಚಿಯನ್ನು ಮಂಡಿಸಲು ತಿಳಿಸಿದರು.

ವಿಷಯ ಸಂಖ್ಯೆ: 01

ವಿಷಯ: ದಿನಾಂಕ 23.11.2023 ರಂದು ಜರುಗಿದ ಸಿಂಡಿಕೇಟ್ 24ನೇ ಸಾಮಾನ್ಯ ಸಭೆಯ ದೃಢೀಕೃತ ನಡವಳಿಗಳ ಮೇಲೆ ಕೈಗೊಂಡ ಅನುಪಾಲನಾ ವರದಿ

*ಸಿಂಡಿಕೇಟ್ ತೀರ್ಮಾನ:*

**ದಿನಾಂಕ 23.11.2023 ರಂದು ಜರುಗಿದ ಸಿಂಡಿಕೇಟ್ 24ನೇ ಸಾಮಾನ್ಯ ಸಭೆಯ ದೃಢೀಕೃತ ನಡವಳಿಗಳ ಮೇಲೆ ಕೈಗೊಂಡ ಅನುಪಾಲನಾ ವರದಿಗೆ ಅನುಮೋದನೆ ನೀಡಿತು.**

**ಸದಸ್ಯರಾದ ಶ್ರೀ ಎಂ. ವಿ. ರಂಗಪ್ಪನವರು ಶಿಕ್ಷಣ ಸಂಸ್ಥೆಗಳಿಗೆ ಆಸ್ತಿ ತೆರಿಗೆ ರಿಯಾಯಿತಿ ಇರುವ ಕುರಿತಂತೆ ವಿಚಾರಿಸಲು ಸೂಚಿಸಲಾಗಿ, ಕುಲಸಚಿವರು ತಾವು ಈಗಾಗಲೇ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಿಗಳನ್ನು ಭೇಟಿಯಾಗಿ ಚರ್ಚಿಸಿರುವುದಾಗಿ ತಿಳಿಸಿದರು.**

ವಿಷಯ ಸಂಖ್ಯೆ: 2

ವಿಷಯ: ಬೆಂಗಳೂರು ನಗರ ವಿಶ್ವವಿದ್ಯಾನಿಲಯದ 3ನೇ ಘಟಿಕೋತ್ಸವದ ಆಯೋಜನೆ, ಮುಖ್ಯ ಅತಿಥಿಗಳ ಆಹ್ವಾನ ಮತ್ತು ಗೌರವ ಡಾಕ್ಟರೇಟ್ ಪದವಿ ಪ್ರಧಾನ ಮಾಡುವ ಕುರಿತಂತೆ ಅಗತ್ಯ ಪ್ರಕ್ರಿಯೆಗಳನ್ನು ಪ್ರಾರಂಭಿಸುವ ಕುರಿತು.

ಉಲ್ಲೇಖ:
1. ಕರ್ನಾಟಕ ಸರ್ಕಾರದ ಪತ್ರ ಸಂಖ್ಯೆ: ಇಡಿ/398/ಯುಆರ್‌ಸಿ/2014(3) ದಿನಾಂಕ: 19.02.2015.
2. ಕರ್ನಾಟಕ ರಾಜ್ಯಪಾಲರ ಸಚಿವಾಲಯದ ಸುತ್ತೋಲೆ ಸಂಖ್ಯೆ GS/02/GUM/2016 ದಿನಾಂಕ: 18.02.2016.
3. ಕರ್ನಾಟಕ ರಾಜ್ಯಪಾಲರ ಸಚಿವಾಲಯದ ಸುತ್ತೋಲೆ ಸಂಖ್ಯೆ GS/03/GUM/2020 ದಿನಾಂಕ: 11.02.2020.

***ಪರಮಾರ್ಶಕ ಟಿಪ್ಪಣಿ:***

ಬೆಂಗಳೂರು ನಗರ ವಿಶ್ವವಿದ್ಯಾನಿಲಯದಲ್ಲಿ 2020-21ನೇ ಸಾಲಿನಲ್ಲಿ ಪದವಿ ವ್ಯಾಸಂಗಕ್ಕೆ ಪ್ರವೇಶ ಪಡೆದು 2022-23 ರಲ್ಲಿ ಉತ್ತೀರ್ಣರಾಗಿ ಪದವಿ ಪಡೆಯಲು ಅರ್ಹತೆ ಹೊಂದಿದ ಮತ್ತು 2021-22ನೇ ಸಾಲಿನಲ್ಲಿ ಸ್ನಾತಕೋತ್ತರ ಪದವಿ ವ್ಯಾಸಂಗಕ್ಕೆ ಪ್ರವೇಶ ಪಡೆದು 2022-23 ರಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಪದವಿ ಪ್ರಧಾನ ಮಾಡಲು ವಿಶ್ವವಿದ್ಯಾನಿಲಯದ 3ನೇ ಘಟಿಕೋತ್ಸವವನ್ನು ಆಯೋಜಿಸಬೇಕಾಗಿದೆ.

ಈ ಕುರಿತು ಕೆಳಕಂಡ ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳುವ ವಿಷಯವನ್ನು ಸಿಂಡಿಕೇಟ್ ಸಭೆಯ ಮುಂದೆ ಪ್ರಸ್ತಾಪಿಸಲಾಗಿದೆ.

ಘಟಿಕೋತ್ಸವಕ್ಕೆ ಮುಖ್ಯ ಅತಿಥಿಗಳನ್ನು ಆಮಂತ್ರಿಸುವ ಹಾಗೂ ಗೌರವ ಡಾಕ್ಟರೇಟ್ ಪದವಿ ಪ್ರಧಾನ ಮಾಡುವ ಕುರಿತಂತೆ ಕರ್ನಾಟಕ ರಾಜ್ಯಪಾಲರ ಸಚಿವಾಲಯ ಹೊರಡಿಸಿದ ಸುತ್ತೋಲೆಗಳ ವಿವರ ಕೆಳಗಿನಂತಿದೆ:

I. ಸುತ್ತೋಲೆ ಸಂಖ್ಯೆ: GS/03/GUM/2020 dated: 11.02.2020 ರಂತೆ ಘಟಿಕೋತ್ಸವದ ಮುಖ್ಯ ಅತಿಥಿಗಳ ಆಹ್ವಾನಕ್ಕೆ ಸಂಬಂಧಿಸಿದ ಸೂಚನೆಗಳ:

1. The Universities are to submit complete proposals along with prospective dates convenient to the proposed Chief Guests for the Convocation so as to avoid multiple correspondences with this Secretariat.
2. The University Nomination to the Expert Scrutiny Committee to be submitted along with the Convocation Proposals.
3. The Universities are to refrain from inviting VVIPs like Hon'ble President of India, Hon'ble Prime Minister of India, Hon'ble Vice President of India etc., without prior permission of Hon'ble Governor and Chancellor. The dignitaries may be invited on occasions like Silver / Golden Jubilee Celebrations or any other special occasion of the University depending on significance of the programme.
4. The Universities are advised to invite Scholars like Senior Scientists / Educationists etc., as Chief Guests to the Convocations, who can inspire and guide the University and its students in the field of Education.

ಮೇಲಿನ ಸೂಚನೆಗಳ ಪ್ರಕಾರ ಮೂರು ಜನ ಮುಖ್ಯ ಅತಿಥಿಗಳ ಹೆಸರುಗಳನ್ನು ಸಿಂಡಿಕೇಟ್ ಸಭೆಯ ಅನುಮೋದಿಸಿ ಮುಂದಿನ ಕ್ರಮಕ್ಕಾಗಿ ಘನತೆವೆತ್ತ ರಾಜ್ಯಪಾಲರಿಗೆ ಸಲ್ಲಿಸಬೇಕಾಗುತ್ತದೆ.

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000 ಪ್ರಕರಣ 69(1) ಪ್ರಕಾರ ಖ್ಯಾತ ವ್ಯಕ್ತಿಗಳಿಗೆ ವಾರ್ಷಿಕ ಘಟಿಕೋತ್ಸವದಲ್ಲಿ ಗೌರವ ಪದವಿ ಅಥವಾ ಶೈಕ್ಷಣಿಕ ವಿಶೇಷ ಪುರಸ್ಕಾರಗಳನ್ನು ನೀಡುವುದಕ್ಕಾಗಿ ಕುಲಾಧಿಪತಿಗಳಿಗೆ ಶಿಫಾರಸ್ಸು ಮಾಡಲು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಭೆಗೆ ಅವಕಾಶವಿರುತ್ತದೆ. ಈ ಸಂಬಂಧ ಸಾಹಿತ್ಯ, ತತ್ವಶಾಸ್ತ್ರ, ಕಲೆ, ಸಂಗೀತ, ಚಿತ್ರಕಲೆ ಅಥವಾ ಇನ್ನಾವುದಾದರೂ ವಿಷಯಗಳಲ್ಲಿ ಅಪ್ರತಿಮ ಸೇವೆ ಸಲ್ಲಿಸಿ ಖ್ಯಾತರಾದವರುಗಳಿಗೆ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ 2000 ಪ್ರಕರಣ 69(2) ರ ಪ್ರಕಾರ ಗೌರವ ಪದವಿಯನ್ನು ಪ್ರಧಾನ ಮಾಡಲು ಅವಕಾಶವಿದೆ. ವಿಜ್ಞಾನ, ತಂತ್ರಜ್ಞಾನ ಯೋಜನೆ, ವೈಜ್ಞಾನಿಕ ಮತ್ತು ತಂತ್ರಜ್ಞಾನ ಸಂಸ್ಥೆಗಳನ್ನು ಅಭಿವೃದ್ಧಿಪಡಿಸಿ ಹೆಸರು ಮಾಡಿರುವ ಮೇಧಾವಿಗಳಿಗೆ ಮತ್ತು ಖ್ಯಾತ ನ್ಯಾಯವಾದಿಗಳು / ಖ್ಯಾತ ನ್ಯಾಯಧೀಶರುಗಳು / ಗಣನೀಯವಾಗಿ ಸಾರ್ವಜನಿಕ ಸೇವೆ ಸಲ್ಲಿಸಿರುವ ಗಣ್ಯರಿಗೆ ಪ್ರಕರಣ 69(3) ಮತ್ತು 69(4) ಪ್ರಕಾರ ಕ್ರಮವಾಗಿ ಡಾಕ್ಟರ್ ಆಫ್ ಸೈನ್ಸ್ ಮತ್ತು ಡಾಕ್ಟರ್ ಆಫ್ ಲಾ ಗೌರವ ಡಾಕ್ಟರೇಟ್ ಪದವಿ ನೀಡಲು ಅವಕಾಶವಿರುತ್ತದೆ.

II. ಸುತ್ತೋಲೆ ಸಂಖ್ಯೆ: GS/02/GUM/2016 dated:18.02.2016 ರಂತೆ ಗೌರವ ಡಾಕ್ಟರೇಟ್ ಪ್ರದಾನಿಸುವ ಸಲುವಾಗಿ ಪರಿಶೀಲನಾ ಸಮಿತಿಗೆ ಶಿಫಾರಸ್ಸು ಮಾಡಲು ಕೆಳಕಂಡ ಮಾನದಂಡಗಳನ್ನು ನಿಗದಿ ಪಡಿಸಲಾಗಿದೆ.

1. The recommendation for the approval of the Chancellor for the conferment of the Honorary Degree shall be in conformity with Section 69 of the Karnataka State University Act 2000.
2. The names before proposed must be properly considered and deliberated in the Syndicate.
3. After deliberation and consideration of such names in the Syndicate, the same shall be forwarded to the Scrutinizing Committee by the University.
4. The Chancellor may constitute Expert Scrutiny Committee consisting of three members one among the members of the Committee is the nominee of the University nominated from amongst the former Vice-Chancellors retired secretaries of Govt. Karnataka or Union of India.
5. The University may nominate its nominee to the scrutinizing Committee well in advance.
6. The recommendations of the University for conferring Honorary Degree must be forwarded to the Scrutinizing Committee at least 45 days in advance to the date of Convocation.
7. The number names proposed by the Scrutiny Committee to Confer Honorary Degree should not exceed more than three in a year.
8. The names proposed / recommended by the Syndicate of the University should be kept confidential and under no circumstances be disclosed to the recipient or to the press till the approval of the Chancellor is communicated.

ಮೇಲಿನ ಪ್ರಸ್ತಾವನೆಯ ಹಿನ್ನೆಲೆಯಲ್ಲಿ ಕೆಳಗೆ ನಮೂದಿಸಿದ ನಾಲ್ಕು ವಿಷಯಗಳ ಕುರಿತಂತೆ ತೀರ್ಮಾನ ಕೈಗೊಳ್ಳಬೇಕಾಗಿದೆ.

1. ಘಟಿಕೋತ್ಸವಕ್ಕೆ ಮುಖ್ಯ ಅತಿಥಿಗಳಾಗಿ ಆಹ್ವಾನಿಸಲು ಮೂರು ಗಣ್ಯ ವ್ಯಕ್ತಿಗಳ ಹೆಸರುಗಳನ್ನು ಶಿಫಾರಸ್ಸು ಮಾಡುವುದು.

2. ವಿಶ್ವವಿದ್ಯಾನಿಲಯದ 3ನೇ ಘಟಿಕೋತ್ಸವವನ್ನು ಜರುಗಿಸಲು ಅನುಕೂಲಕರವಾದ ತಿಂಗಳನ್ನು ಶಿಫಾರಸ್ಸು ಮಾಡಲು ಹಾಗೂ ಆ ತಿಂಗಳಲ್ಲಿ ಮುಖ್ಯ ಅತಿಥಿಗಳನ್ನು ಆ ತಿಂಗಳಲ್ಲಿ ಸಂಪರ್ಕಿಸಿ, ಅವರಿಗೆ ಅನುಕೂಲಕರವಾದ ದಿನಾಂಕವನ್ನು ಪಡೆದು ಅದರಂತೆ ಮಾನ್ಯ ಕುಲಾಧಿಪತಿಗಳಿಗೆ ಪ್ರಸ್ತಾವನೆಯನ್ನು ಸಲ್ಲಿಸುವುದು.
3. ಗೌರವ ಡಾಕ್ಟರೇಟ್ ಪದವಿ ಪ್ರಧಾನ ಮಾಡಲು ಖ್ಯಾತನಾಮರ ಹೆಸರುಗಳನ್ನು ಶಿಫಾರಸ್ಸು ಮಾಡುವುದು
4. ಕುಲಾಧಿಪತಿಗಳು ರಚಿಸುವ ಗೌರವ ಡಾಕ್ಟರೇಟ್ ಪದವಿ ಪ್ರಸ್ತಾವನೆಗಳನ್ನು ಪರಿಶೀಲಿಸಲು ಪರಿಶೀಲನಾ ಸಮಿತಿಗೆ ವಿಶ್ವವಿದ್ಯಾನಿಲಯದ ಪ್ರತಿನಿಧಿಯನ್ನು ನಾಮನಿರ್ದೇಶನ ಮಾಡುವುದು.

ಮೇಲಿನ ಪ್ರಸ್ತಾವನೆಯನ್ನು ಸಿಂಡಿಕೇಟ್ ಸಭೆಯ ಪರಾಮರ್ಶೆಗೆ ಮಂಡಿಸಲಾಗಿದೆ.

*ಸಿಂಡಿಕೇಟ್ ತೀರ್ಮಾನ:*

ಸಿಂಡಿಕೇಟ್ ಸಭೆ ಈ ಕುರಿತು ಕೂಲಂಕುಷವಾಗಿ ಚರ್ಚಿಸಿ ಕೆಳಗಿನಂತೆ ನಿರ್ಣಯಿಸಿತು.

1. ವಿಶ್ವವಿದ್ಯಾನಿಲಯದ ಮೂರನೇ ಘಟಿಕೋತ್ಸವವನ್ನು 2024ರ ಜೂನ್/ಜುಲೈ ತಿಂಗಳಲ್ಲಿ ಗೌರವಾನ್ವಿತ ಕುಲಾಧಿಪತಿಗಳಿಗೆ ಅನುಕೂಲಕರವಾದ ದಿನಾಂಕದಂದು ಜರುಗಿಸಲು ತೀರ್ಮಾನಿಸಲಾಯಿತು.

2. ಘಟಿಕೋತ್ಸವಕ್ಕೆ ಕೆಳಕಂಡ ಮುಖ್ಯ ಅತಿಥಿಗಳನ್ನು ಆಹ್ವಾನಿಸಲು ಸಭೆ ತೀರ್ಮಾನಿಸಿತು
   a) ಶ್ರೀಮತಿ ಸುಧಾಮೂರ್ತಿ, ಅಧ್ಯಕ್ಷರು, ಇನ್‌ಫೋಸಿಸ್ ಫೌಂಡೇಶನ್, ಬೆಂಗಳೂರು
   b) ಅಧ್ಯಕರು, ಎಐಸಿಟಿಇ (AICTE)
   c) ಅಧ್ಯಕ್ಷರು, ನ್ಯಾಕ್ (NAAC)

ಮೇಲಿನ ಮಹನೀಯರ ಲಭ್ಯತೆಯನ್ನು ಪರಿಗಣಿಸಿ ಅನುಪಸ್ಥಿತಿಯಲ್ಲಿ ಬೇರೆ ಶಿಕ್ಷಣ ತಜ್ಞರ/ಗಣ್ಯವ್ಯಕ್ತಿಗಳ ಹೆಸರುಗಳನ್ನು ಪರಿಗಣಿಸಲು ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಲಾಯಿತು.

3. ಮಾನ್ಯ ಸಿಂಡಿಕೇಟ್ ಸದಸ್ಯರು ಗೌರವ ಡಾಕ್ಟರೇಟ್ ಪದವಿ ನೀಡಲು ಅರ್ಹರಾದ ಗೌರವಾನ್ವಿತ ವ್ಯಕ್ತಿಗಳ ಹೆಸರುಗಳನ್ನು ಅವರ ವೈಯಕ್ತಿಕ ವಿವರಗಳೊಂದಿಗೆ ಕುಲಪತಿಗಳಿಗೆ ಸಲ್ಲಿಸಬಹುದೆಂದು ಸಭೆ ತೀರ್ಮಾನಿಸಿತು. ಕುಲಪತಿಗಳ ಕಛೇರಿಯಲ್ಲಿ ಸ್ವೀಕರಿಸುವ ಹಾಗೂ ಮಾನ್ಯ ಸದಸ್ಯರು ಸೂಚಿಸುವ ಹೆಸರುಗಳ ಪಟ್ಟಿಯನ್ನು ಪರಿಶೀಲನಾ ಸಮಿತಿಗೆ ಸಲ್ಲಿಸಬಹುದೆಂದು ತೀರ್ಮಾನಿಸಲಾಯಿತು.

4. ಗೌರವ ಡಾಕ್ಟರೇಟ್ ಪದವಿಗಾಗಿ ಸ್ವೀಕರಿಸುವ ಹೆಸರುಗಳ ಪರಿಶೀಲನೆಗಾಗಿ ಕುಲಾಧಿಪತಿಗಳ ರಚಿಸುವ ಸಮಿತಿಗೆ ಮೈಸೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಪ್ರಾಧ್ಯಾಪಕರಾದ ಪ್ರೊ. ಹೇಮಂತ ಕುಮಾರರವರ ಹೆಸರನ್ನು ವಿಶ್ವವಿದ್ಯಾನಿಲಯದಿಂದ ನಾಮನಿರ್ದೇಶನ ಮಾಡಲು ತೀರ್ಮಾನಿಸಲಾಯಿತು.

ವಿಷಯ ಸಂಖ್ಯೆ: 3

ವಿಷಯ: 2024-25ನೇ ಶೈಕ್ಷಣಿಕ ಸಾಲಿಗಾಗಿ ಅಸ್ತಿತ್ವದಲ್ಲಿರುವ ಕಾಲೇಜುಗಳ ಹಾಗೂ ಹೊಸದಾಗಿ ಕಾಲೇಜನ್ನು ಪ್ರಾರಂಭಿಸಲು ಸಂಯೋಜನೆಗೆ ಅರ್ಜಿ ಸಲ್ಲಿಸುವ ಸಂಸ್ಥೆಗಳ ಪರಿಶೀಲನೆಗಾಗಿ ಸ್ಥಳೀಯ ವಿಚಾರಣಾ ಸಮಿತಿಗಳನ್ನು ರಚಿಸುವ ಕುರಿತು.

ಉಲ್ಲೇಖ: ಸರ್ಕಾರಿ ಆದೇಶ ಸಂಖ್ಯೆ: ಇಡಿ 47 ಯುಎನ್‌ಇ 2023, ಬೆಂಗಳೂರು ದಿನಾಂಕ:05.04.2023 ಸರ್ಕಾರದ ಅಧೀನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯಗಳು-1), ಬೆಂಗಳೂರು

*ಪರಾಮರ್ಶಕ ಟಿಪ್ಪಣಿ:*

2024-25ನೇ ಶೈಕ್ಷಣಿಕ ಸಾಲಿಗೆ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುವ 13 ವಿಧಾನ ಸಭಾ ಕ್ಷೇತ್ರಗಳಾದ ಬಸವನಗುಡಿ, ಬಿ.ಟಿ.ಎಂ ಲೇಔಟ್, ಬ್ಯಾಟರಾಯನಪುರ, ಚಿಕ್ಕಪೇಟೆ, ಗಾಂಧಿನಗರ, ಚಾಮರಾಜಪೇಟೆ, ಹೆಬ್ಬಾಳ, ಜಯನಗರ, ಮಲ್ಲೇಶ್ವರಂ, ರಾಜಾಜಿನಗರ, ಶಾಂತಿನಗರ, ಶಿವಾಜಿನಗರ, ಯಲಹಂಕ ಕ್ಷೇತ್ರಗಳ ಸಂಯೋಜಿತ ಕಾಲೇಜುಗಳ ಹಾಗೂ ಅರ್ಹ ಶಿಕ್ಷಣ ಸಂಸ್ಥೆಗಳಿಂದ ವಿವಿಧ ಸ್ನಾತಕ/ಸ್ನಾತಕೋತ್ತರ ಕೋರ್ಸುಗಳು ಹಾಗೂ NCTE ಯಿಂದ ಅನುಮೋದನೆ ಪಡೆದ B.Ed/B.PEd/M.Ed/M.PEd ಕೋರ್ಸುಗಳಿಗೆ ವಾರ್ಷಿಕ ಸಂಯೋಜನೆಗೆ ಸಂಬಂಧಿಸಿದಂತೆ:-

1) ಅಸ್ತಿತ್ವದಲ್ಲಿರುವ ಕಾಲೇಜುಗಳಿಗೆ ಸಂಯೋಜನೆ ನವೀಕರಣ
2) ಹೊಸ ಕೋರ್ಸುಗಳು/ ಹೊಸ ವಿಷಯಗಳನ್ನು ಪ್ರಾರಂಭಿಸಲು
3) ಪ್ರವೇಶ ಸಂಖ್ಯೆಯನ್ನು ಹೆಚ್ಚಿಸುವುದು/ ಕಡಿಮೆಗೊಳಿಸುವುದು
4) ಕಾಲೇಜಿನ/ಸಂಸ್ಥೆಯ ಹೆಸರು ಮತ್ತು ವಿಳಾಸ ಬದಲಾವಣೆ
5) ಅಸ್ಥಿತ್ವದಲ್ಲಿರುವ ಕಾಲೇಜುಗಳಲ್ಲಿ ಸ್ನಾತಕೋತ್ತರ ಕೋರ್ಸುಗಳ ಸಂಯೋಜನೆ ನವೀಕರಣ
6) ಹೊಸ ಕಾಲೇಜುಗಳನ್ನು ಪ್ರಾರಂಭಿಸಲು
7) ಹಾಲಿ ಇರುವ ಕಾಲೇಜುಗಳಲ್ಲಿ ಹೊಸದಾಗಿ ಸ್ನಾತಕೋತ್ತರ ಕೋರ್ಸುಗಳನ್ನು ಪ್ರಾರಂಭಿಸಲು
8) ಹಾಲಿ ಶಾಶ್ವತ ಸಂಯೋಜನೆ ಹೊಂದಿರುವ ಕಾಲೇಜುಗಳ ನವೀಕರಣ ಹೊಸದಾಗಿ ಶಾಶ್ವತ ಸಂಯೋಜನೆ ನೀಡುವುದು
9) ಕೋರಿರುವ ಕೋರ್ಸು/ಕಾಲೇಜುಗಳಿಗೆ ಹೊಸ ಶಾಶ್ವತ ಸಂಯೋಜನೆ ನೀಡುವ ಕುರಿತಂತೆ

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ 2024-25ನೇ ಶೈಕ್ಷಣಿಕ ಸಾಲಿಗೆ ಸರ್ಕಾರದ ಆದೇಶ ಸಂಖ್ಯೆ:ಇಡಿ 47 ಯುಎನ್‌ಇ 2023 ದಿನಾಂಕ 05.04.2023ರ ಅನ್ವಯ ಉನ್ನತ ಶಿಕ್ಷಣ ಇಲಾಖೆಯು ಅಭಿವೃದ್ಧಿ ಪಡಿಸಿರುವ UUCMS Portal ಮುಖಾಂತರವೇ Online ಸಂಯೋಜನಾ ತಂತ್ರಾಂಶದ ಮೂಲಕ ಅರ್ಜಿಗಳನ್ನು ಆಹ್ವಾನಿಸಬೇಕಾಗಿರುತ್ತದೆ. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000ರ ಪ್ರಕರಣ 59 ಉಪಪ್ರಕರಣ (2) ರನ್ವಯ ಸಂಯೋಜನಾ ಪ್ರಕ್ರಿಯೆಗಳಿಗೆ ಸಂಬಂಧಿಸಿದಂತೆ ಕಾಲೇಜುಗಳಿಂದ ಹಾಗೂ ಹೊಸ ಕಾಲೇಜಿಗೆ ಅರ್ಜಿ ಸಲ್ಲಿಸುವ ಸಂಸ್ಥೆಗಳಿಂದ ಅರ್ಜಿಗಳನ್ನು ಆಹ್ವಾನಿಸಲು ಎರಡು ಪ್ರಮುಖ ಪತ್ರಿಕೆಗಳಲ್ಲಿ (ಕನ್ನಡ/ಇಂಗ್ಲೀಷ್) ಪ್ರಕಟಣೆಯನ್ನು ನೀಡಿ ನಿಗಧಿತ ದಿನಾಂಕವನ್ನು ನಿಗಧಿಪಡಿಸಿ (ಒಂದು ತಿಂಗಳ ಅವಧಿಯಲ್ಲಿ ಅರ್ಜಿ ಸಲ್ಲಿಸಲು) ಮತ್ತು ವಿಶ್ವವಿದ್ಯಾನಿಲಯದ ಅಧಿಸೂಚನೆಯಲ್ಲಿ ನಿಗಧಿಪಡಿಸಿರುವ ಅಗತ್ಯ ಸಂಯೋಜನಾ ಶುಲ್ಕಗಳನ್ನು ಆನ್‌ಲೈನ್ ಮೂಲಕ ಪಾವತಿಸುವಂತೆ ಸರ್ಕಾರ ಸಿದ್ದಪಡಿಸಿದ UUCMS Portal ನಲ್ಲಿ ಅರ್ಜಿಗಳನ್ನು ಆಹ್ವಾನಿಸಬೇಕಾಗಿರುತ್ತದೆ.

ಕರ್ನಾಟಕ ಸರ್ಕಾರ ಹೊರಡಿಸಿರುವ ಸುತ್ತೋಲೆ ಸಂಖ್ಯೆ: ಇಡಿ 94 ಯುಜಿವಿ 2022 ದಿನಾಂಕ 24.11.2022ರಲ್ಲಿ ಸಾಮಾಜಿಕ ಮತ್ತು ನೈಸರ್ಗಿಕ ನ್ಯಾಯದ ಪರಿಪಾಲನೆಯೊಂದಿಗೆ ಶೈಕ್ಷಣಿಕ ಹಿರಿಮೆಯನ್ನು ಸಾಧಿಸಲು ಹಾಗೂ ಶಿಕ್ಷಣ ಗುಣಮಟ್ಟವನ್ನು ವೃದ್ಧಿಸಲು ಅವಶ್ಯವಾದ ನ್ಯಾಯೋಚಿತ, ಪಾರದರ್ಶಕ ಹಾಗೂ ನಿಷ್ಪಕ್ಷಪಾತ ಸಂಯೋಜನೆ ಪ್ರಕ್ರಿಯೆಯನ್ನು ರೂಪಿಸಬೇಕಾದಲ್ಲಿ ಸ್ಥಳೀಯ ವಿಚಾರಣಾ ಸಮಿತಿಗಳಿಗೆ ವಿಷಯ ಪಾರಂಗತರನ್ನು ಹಾಗೂ ಶಿಕ್ಷಣ ತಜ್ಞರನ್ನು ನೇಮಿಸುವ ಅವಶ್ಯಕತೆಯನ್ನು ಮನಗಂಡು ರಾಜ್ಯದ ವಿಶ್ವವಿದ್ಯಾನಿಲಯಗಳ ಸ್ಥಳೀಯ ವಿಚಾರಣಾ ಸಮಿತಿಗಳಿಗೆ ಸಿಂಡಿಕೇಟ್ ಸದಸ್ಯರು/ಅಧ್ಯಕ್ಷರನ್ನು ನೇಮಿಸದೇ ಕೇವಲ ವಿಷಯ ಪರಿಣಿತರು/ ಶಿಕ್ಷಣ ತಜ್ಞರನ್ನು ನೇಮಿಸಲು ಸೂಚಿಸಿ ಸಿಂಡಿಕೇಟ್ ಸದಸ್ಯರನ್ನು ಸ್ಥಳೀಯ ಪರಿಶೀಲನಾ ಸಮಿತಿಯ ಅಧ್ಯಕ್ಷರನ್ನಾಗಿ ನೇಮಿಸದಿರಲು ವಿಶ್ವವಿದ್ಯಾನಿಲಯಕ್ಕೆ ಸೂಚಿಸಲಾಗಿದೆ.

ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ 226 ಕಾಲೇಜುಗಳು ಸಂಯೋಜನೆಗೆ ಒಳಪಟ್ಟಿರುತ್ತವೆ. ಕಳೆದ ವರ್ಷ ಸ್ಥಳೀಯ ವಿಚಾರಣಾ ಸಮಿತಿಗಳನ್ನು ರಚಿಸಲು ಸರ್ಕಾರದ ಆದೇಶ ಹಾಗೂ ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯ ನೀಡಿರುವ ತೀರ್ಮಾನದ ಹಿನ್ನೆಲೆಯಲ್ಲಿ ಅಗತ್ಯ ಕ್ರಮ ಕೈಗೊಳ್ಳಲು ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಲಾಗಿರುತ್ತದೆ. 2024–25ನೇ ಶೈಕ್ಷಣಿಕ ಸಾಲಿಗೆ ಸ್ವೀಕರಿಸಲಾಗುವ ಸಂಯೋಜನಾ ಅರ್ಜಿಗಳಿಗೆ ಅನುಗುಣವಾಗಿ ಅಗತ್ಯ ಸಂಖ್ಯೆಯ ಸ್ಥಳೀಯ ವಿಚಾರಣಾ ಸಮಿತಿಗಳನ್ನು ನಿಯಮಾನುಸಾರ ರಚಿಸಬೇಕಾಗಿರುತ್ತದೆ. ಈ ಸಮಿತಿಗಳು ಸಂಯೋಜಿತ ಕಾಲೇಜುಗಳಿಗೆ ಹಾಗೂ ಹೊಸ ಕಾಲೇಜಿನ ಸಂಸ್ಥೆಗಳಿಗೆ ಭೇಟಿ ನೀಡಿ ಅಗತ್ಯ ದಾಖಲೆಗಳನ್ನು ಹಾಗೂ ಶೈಕಣಿಕ ಮೂಲಭೂತ ಸೌಕರ್ಯಗಳನ್ನು ಪರಿಶೀಲಿಸಿ ನಿಗಧಿತ ಅವಧಿಯಲ್ಲಿ ಸಂಯೋಜನಾ ವರದಿಗಳನ್ನು ಸಲ್ಲಿಸಲು ಸ್ಥಳೀಯ ವಿಚಾರಣಾ ಸಮಿತಿಗಳನ್ನು ರಚಿಸುವ ಕುರಿತು ವಿಷಯುವನ್ನು ಸಿಂಡಿಕೇಟ್ ಸಭೆಯ ಪರಿಶೀಲನೆ ಹಾಗೂ ತೀರ್ಮಾನಕ್ಕಾಗಿ ಮಂಡಿಸಲಾಗಿದೆ.

***<u>ವಿವರಣೆ:</u>***

ಮಾನ್ಯ ಕುಲಪತಿಗಳು ಸಂಯೋಜನಾ ಪ್ರಸ್ತಾವನೆಗಳನ್ನು ಯುಯುಸಿಎಂಎಸ್ ಪೋರ್ಟಲ್‌ನಲ್ಲಿ ನಿರ್ವಹಿಸಬೇಕಾಗಿದ್ದು, ಅದರ ನಿರ್ವಹಣೆಯಲ್ಲಿರುವ ಹಲವಾರು ಸಮಸ್ಯೆಗಳನ್ನು ಸಭೆಯ ಗಮನಕ್ಕೆ ತಂದರು. ತಾಂತ್ರಿಕ ಹಾಗೂ ಸರ್ವರ್ ನಿಧಾನದ ಕಾರಣದಿಂದಾಗಿ ಮಹಾವಿದ್ಯಾಲಯಗಳಿಗೆ ದತ್ತಾಂಶಗಳನ್ನು ದಾಖಲಿಸುವಲ್ಲಿ ಹಾಗೂ ಸ್ಥಳೀಯ ವಿಚಾರಣಾ ಸಮಿತಿಗಳಿಗೆ ಶಿಫಾರಸ್ಸುಗಳನ್ನು ನಮೂದಿಸಲು ಸಾಕಷ್ಟು ಸಮಸ್ಯೆಗಳನ್ನು ಎದುರಿಸಿದ್ದು, ಅಧಿನಿಯಮ ಪ್ರಕಾರ ಮಾರ್ಚ್ 31ಕ್ಕೆ ಪ್ರಕ್ರಿಯೆ ಮುಗಿಸಬೇಕಾದ ನಿಬಂಧನೆ ಇದ್ದರೂ ನಮ್ಮದಲ್ಲದ ಕಾರಣಗಳಿಂದ ಪ್ರಕ್ರಿಯೆಗಳಲ್ಲಿ ವಿಳಂಬವಾಗಿರುವುದನ್ನು ಸಭೆಯ ಗಮನಕ್ಕೆ ತಂದರು.

ನಿಯಮಾನುಸಾರ ಸ್ಥಳೀಯ ವಿಚಾರಣಾ ಸಮಿತಿಯ ಶಿಫಾರಸ್ಸುಗಳ ಪ್ರಾಧಿಕಾರಿಗಳು ಅನುಮೋದನೆ ನೀಡಿದ ನಂತರ ಸರ್ಕಾರಕ್ಕೆ ಹೋಗಬೇಕು ಆದರೆ ಆನ್‌ಲೈನ್ ವ್ಯವಸ್ಥೆಯಲ್ಲಿ ಶಿಫಾರಸ್ಸುಗಳನ್ನು ನಮೂದಿಸಿ ಧೃಡೀಕರಿಸಿದ ತಕ್ಷಣ ಎಲ್ಲ ಕಡೆಗೂ ಪ್ರತಿಫಲನಗೊಳ್ಳುತ್ತದೆ ಎಂದು ತಿಳಿಸಿ, ಸರ್ಕಾರದ ನಿರ್ದೇಶನದಂತೆ, ಯುಯುಸಿಎಂಎಸ್ ಮುಖಾಂತರ ಅರ್ಜಿಗಳನ್ನು ಸ್ವೀಕರಿಸಿ ಪ್ರಕ್ರಿಯೆ ಜರುಗಿಸಬೇಕಾಗಿದೆ ಎಂದು ಹೇಳಿದರು. ಸಿಂಡಿಕೇಟ್ ಸದಸ್ಯರನ್ನು ಸ್ಥಳೀಯ ವಿಚಾರಣಾ ಸಮಿತಿಯಲ್ಲಿ ತೊಡಗಿಸಿಕೊಳ್ಳಬಾರದೆಂದು ಸರ್ಕಾರದ ನಿರ್ದೇಶನಕ್ಕೆ ತಡೆಯಾಜ್ಞೆ ಇರುವುದರಿಂದ ಅವರನ್ನು ಅಧ್ಯಕ್ಷರನ್ನಾಗಿ ಕಳೆದ ವರ್ಷ ಮುಂದುವರೆಸಲಾಗಿದೆ. ಈ ತಡೆಯಾಜ್ಞೆ ತೆರವು ಇನ್ನೂ ಆಗದೇ ಇರುವುದರಿಂದ ಪರಿಶೀಲಿಸಿ ತೀರ್ಮಾನ ತೆಗೆದುಕೊಳ್ಳಬೇಕಾಗಿದೆ ಎಂದು ಹೇಳಿದರು.

*ಸಿಂಡಿಕೇಟ್ ತೀರ್ಮಾನ:*

1. ಹಾಲಿ ಮಹಾವಿದ್ಯಾಲಯಗಳ ಮುಂದುವರಿಕೆ ಹಾಗೂ ಹೊಸ ಮಹಾವಿದ್ಯಾಲಯ / ಹೊಸ ಕೋರ್ಸ್ / ವಿಷಯ ಪ್ರವೇಶ ಸಂಖ್ಯೆ ಇತ್ಯಾದಿಗಳಿಗೆ ಅರ್ಜಿ ಸಲ್ಲಿಸಲು ಅಧಿಸೂಚನೆ ಹೊರಡಿಸಲು ಸಭೆ ಅನುಮೋದನೆ ನೀಡಿತು.

2. ರಾಜ್ಯ ಕರ್ನಾಟಕ ಉಚ್ಛನ್ಯಾಯಾಲಯದ ತಡೆಯಾಜ್ಞೆ ಇರುವ ಕಾರಣದಿಂದ ನ್ಯಾಯಾಲಯಾ/ ಸರ್ಕಾರದಿಂದ ಆದೇಶಗಳನ್ನು ಗಮನದಲ್ಲಿಟ್ಟುಕೊಂಡು ಸ್ಥಳೀಯ ವಿಚಾರಣಾ ಸಮಿತಿಯನ್ನು ರಚಿಸಲು ಕುಲಪತಿಗಳಿಗೆ ಅಧೀಕರಿಸಲು ಸಿಂಡಿಕೇಟ್ ಸಭೆ ತೀರ್ಮಾನಿಸಿತು.

**ವಿಷಯ ಸಂಖ್ಯೆ: 4**

ವಿಷಯ: 2024-25ನೇ ಸಾಲಿಗೆ ಸಂಯೋಜನೆ ನವೀಕರಣ ಹೊಸ ಕೋರ್ಸ್/ ವಿಷಯ/ ಭಾಷೆಗಳ ಹಾಗೂ ವಿದ್ಯಾರ್ಥಿ ಪ್ರಮಾಣ ಹೆಚ್ಚಳ ಇತ್ಯಾದಿಗಳಿಗೆ ಅರ್ಜಿ ಸಲ್ಲಿಸಲು ಸಂಯೋಜನಾ ಶುಲ್ಕ ದರಗಳನ್ನು ಪರಿಷ್ಕರಿಸಿ ಅಧಿಸೂಚನೆ ಹೊರಡಿಸುವ ಬಗ್ಗೆ.

*ಪರಾಮರ್ಶಕ ಟಿಪ್ಪಣಿ:*

ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುವ 13 ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಬರುವ ಒಟ್ಟು 226 ಕಾಲೇಜುಗಳಿಗೆ 2024-25ನೇ ಶೈಕ್ಷಣಿಕ ಸಾಲಿನ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಹಾಗೂ ಬಿ.ಎಡ್. ಬಿ.ಪಿಎಡ್. ಎಂ.ಎಡ್. ಎಂ.ಪಿಎಡ್. ಕಾಲೇಜುಗಳ ಸಂಯೋಜನೆ ನವೀಕರಣ ಹೊಸ ಕಾಲೇಜುಗಳ ಪ್ರಾರಂಭ/ ವಿಷಯ/ ಭಾಷೆ ಹಾಗೂ ವಿದ್ಯಾರ್ಥಿ ಪ್ರಮಾಣ ವಿಸ್ತರಣೆ ಇತ್ಯಾದಿಗಳಿಗೆ ಅರ್ಜಿಗಳನ್ನು ಆಹ್ವಾನಿಸಿ ಅಧಿಸೂಚನೆಯನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯದ ಕಾಯ್ದೆ -2000 ಪ್ರಕರಣ (59) (62) ಮತ್ತು (64)ರ ಪ್ರಕಾರ ಹೊರಡಿಸಬೇಕಾಗಿದೆ.

2024-25ನೇ ಶೈಕ್ಷಣಿಕ ಸಾಲಿಗೆ ಹೊಸ ಕಾಲೇಜುಗಳ ಪ್ರಾರಂಭ ಮಾಡುವ ಸಂಸ್ಥೆಗಳಿಂದ ಅರ್ಜಿಗಳನ್ನು ಆಹ್ವಾನಿಸಲು ನವೀಕರಣ / ಹೊಸ ಕೋರ್ಸ್/ ವಿಷಯ / ಭಾಷೆಗಳ ಹಾಗೂ ವಿದ್ಯಾರ್ಥಿ ಪ್ರಮಾಣ ಹೆಚ್ಚಳ / ಹೊಸ ಶಾಶ್ವತ ಸಂಯೋಜನೆ ಇತ್ಯಾದಿಗಳಿಗೆ ಅರ್ಜಿ ಸಲ್ಲಿಸಲು ಸಂಯೋಜನಾ ಶುಲ್ಕ ಪಟ್ಟಿಯನ್ನು ಪರಿಷ್ಕರಿಸಿ ಅಧಿಸೂಚನೆ ಹೊರಡಿಸುವ ಬಗ್ಗೆ ಸಂಯೋಜನೆ ಶುಲ್ಕ ಪಟ್ಟಿಯನ್ನು ಸಿದ್ಧಪಡಿಸಿಕೊಳ್ಳಬೇಕಾಗಿರುತ್ತದೆ. ಸಂಯೋಜನಾ ಶುಲ್ಕ ಹಿಂದಿನ 2023-24ನೇ ಸಾಲಿನ ಶುಲ್ಕಕ್ಕೆ ಶೇಕಡ.10% ಹೆಚ್ಚುವರಿಯಾಗಿ ಪರಿಷ್ಕರಿಸಿ ಅಧಿಸೂಚನೆ ಹೊರಡಿಸಲು ಸಿಂಡಿಕೇಟ್ ಸಭೆಯ ಪರಿಶೀಲನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

*ಸಿಂಡಿಕೇಟ್ ತೀರ್ಮಾನ:*

**2024-25ನೇ ಸಾಲಿಗೆ ಸಂಯೋಜನೆ ನವೀಕರಣ ಹೊಸ ಕೋರ್ಸ್/ ವಿಷಯ/ ಭಾಷೆಗಳ ಹಾಗೂ ವಿದ್ಯಾರ್ಥಿ ಪ್ರಮಾಣ ಹೆಚ್ಚಳ ಇತ್ಯಾದಿಗಳಿಗೆ ಅರ್ಜಿ ಸಲ್ಲಿಸಲು ಸಂಯೋಜನಾ ಶುಲ್ಕದ ದರಗಳನ್ನು ಸರ್ಕಾರದ ಆದೇಶದ ಪ್ರಕಾರ ಪರಿಷ್ಕರಿಸಲು ಸಿಂಡಿಕೇಟ್ ಸಭೆ ಸರ್ವಾನುಮತದ ಅನುಮೋದನೆ ನೀಡಿತು.**

ವಿಷಯ ಸಂಖ್ಯೆ: 5

ವಿಷಯ: ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಆವರಣವನ್ನು "ಜ್ಞಾನಜ್ಯೋತಿ ಕ್ಯಾಂಪಸ್" ಎಂದು ನಾಮಕರಣ ಮಾಡುವ ಕುರಿತು

*ಪರಾಮರ್ಶಕ ಟಿಪ್ಪಣಿ:*

ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಆವರಣವನ್ನು 'ಸೆಂಟ್ರಲ್ ಕಾಲೇಜ್ ಕ್ಯಾಂಪಸ್' ಎಂದು ಸ್ವಾತಂತ್ರ ಪೂರ್ವದಿಂದಲೂ ಗುರುತಿಸಲಾಗಿದೆ. ಈ ಹೆಸರು ಬ್ರಿಟಿಷ್ ಆಳ್ವಿಕೆಯಲ್ಲಿ ಸ್ಥಾಪನೆಯಾದ ಸೆಂಟ್ರಲ್ ಕಾಲೇಜಿನ ಹೆಸರಿನಲ್ಲಿ ಮುಂದುವರೆದಿರುತ್ತದೆ. ಅಂದಿನ ಸಂದರ್ಭದಲ್ಲಿ ಅದು ಉಚಿತವಾಗಿತ್ತು. ಬೆಂಗಳೂರು ವಿಶ್ವವಿದ್ಯಾಲಯದಿಂದ ಈ ಆವರಣವನ್ನು "ಸಿಟಿ ಕ್ಯಾಂಪಸ್' – 'ನಗರ ಆವರಣ' ಎಂದು ಕರೆಯಲಾಗುತ್ತಿತ್ತು. ಪ್ರಸ್ತುತ ಬೆಂಗಳೂರು ನಗರ ವಿಶ್ವವಿದ್ಯಾನಿಲಯ ಪ್ರತ್ಯೇಕ ವಿಶ್ವವಿದ್ಯಾನಿಲಯವಾಗಿ ಸ್ಥಾಪನೆಯಾಗಿರುವುದರಿಂದ ಈ ಆವರಣಕ್ಕೆ ಶಿಕ್ಷಣಕ್ಕೆ ಅನ್ವರ್ಥಕವಾದ ಹೆಸರನ್ನು ಇಡುವುದು ಸಮಂಜಸವೆಂದು ಭಾವಿಸಲಾಗಿದೆ.

ರಾಜ್ಯದ ಎಲ್ಲ ವಿಶ್ವವಿದ್ಯಾಲಯಗಳ ಆವರಣಗಳು ವಿಶಿಷ್ಟವಾದ ಹೆಸರುಗಳನ್ನು ಹೊಂದಿರುತ್ತವೆ. ಉದಾಹರಣೆಗೆ; ಬೆಂಗಳೂರು ವಿಶ್ವವಿದ್ಯಾಲಯ – 'ಜ್ಞಾನ ಭಾರತಿ', ಮೈಸೂರು ವಿಶ್ವವಿದ್ಯಾನಿಲಯ – 'ಮಾನಸ ಗಂಗೋತ್ರಿ', ಕುವೆಂಪು ವಿಶ್ವವಿದ್ಯಾಲಯ – 'ಜ್ಞಾನ ಸಹ್ಯಾದ್ರಿ', ಗುಲಬರ್ಗಾ ವಿಶ್ವವಿದ್ಯಾಲಯ 'ಜ್ಞಾನಗಂಗಾ', ರಾಯಚೂರು ವಿಶ್ವವಿದ್ಯಾಲಯ – 'ಜ್ಞಾನತುಂಗಾ', ರಾಣಿ ಚೆನ್ನಮ್ಮಾ ವಿಶ್ವವಿದ್ಯಾಲಯ– 'ವಿದ್ಯಾಸಂಗಮ', ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ – 'ಜ್ಞಾನಶಕ್ತಿ', ದಾವಣಗೆರೆ ವಿಶ್ವವಿದ್ಯಾಲಯ 'ಶಿವಗಂಗೋತ್ರಿ' ಇತ್ಯಾದಿ ಹೆಸರುಗಳಿಂದ ಆವರಣಗಳನ್ನು ಕರೆಯಲಾಗುತ್ತದೆ. ಅದರಂತೆ, ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಆವರಣಕ್ಕೆ "ಜ್ಞಾನಜ್ಯೋತಿ ಕ್ಯಾಂಪಸ್" ಎಂಬ ಹೆಸರನ್ನು ನಾಮಕರಣ ಮಾಡುವ ವಿಷಯವನ್ನು ಸಿಂಡಿಕೇಟ್ ಸಭೆಯ ಪರಿಶೀಲನೆಗೆ ಮಂಡಿಸಲಾಗಿದೆ.

*ಸಿಂಡಿಕೇಟ್ ತೀರ್ಮಾನ:*

**ಬೆಂಗಳೂರು ನಗರ ವಿಶ್ವವಿದ್ಯಾಲಯದ ಆವರಣಕ್ಕೆ "ಜ್ಞಾನ ಜ್ಯೋತಿ"ಎಂದು ನಾಮಕರಣ ಮಾಡಲು ಸಿಂಡಿಕೇಟ್ ಸಭೆ ಸರ್ವಾನುಮತದ ಅನುಮೋದನೆ ನೀಡಿತು. ಈ ಹೆಸರು ಪ್ರಚಲಿತವಾಗುವವರೆಗೆ "ಜ್ಞಾನ ಜ್ಯೋತಿ – ಸೆಂಟ್ರಲ್ ಕಾಲೇಜು ಆವರಣ" ಎಂಬ ಹೆಸರಿನ ಬಳಕೆಗೆ ಸಭೆ ಅನುಮತಿ ನೀಡಲಾಯಿತು."**

ವಿಷಯ ಸಂಖ್ಯೆ: 6

ವಿಷಯ: ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಆಡಳಿತ ಕಟ್ಟಡದ ಕೇದ್ರೀಯ ಸಭಾಂಗಣವನ್ನು 'ರಾಜಾಜಿ ಹಾಲ್ ಆಫ್ ಫೇಮ್' ಎಂದು ಹೆಸರಿಸುವ ಮತ್ತು ಭೌತಶಾಸ್ತ್ರ ವಿಭಾಗದ ಉಪನ್ಯಾಸ ಸಭಾಂಗಣವನ್ನು ಸರ್ ಸಿ. ವಿ. ರಾಮನ್ ಹಾಲ್ ಎಂದು ಅಧೀಕೃತಗೊಳಿಸಲು ಮತ್ತು ಅವುಗಳಿಗೆ ಅಗತ್ಯವಾದ ಪರಿಕರಗಳನ್ನು ಅಳವಡಿಸುವ ಕುರಿತು.

*ಪರಾಮರ್ಶಕ ಟಿಪ್ಪಣಿ:*

ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಆವರಣದ ಕೇಂದ್ರ ಕಛೇರಿಯನ್ನು ಗಡಿಯಾರ ಗೋಪುರದ ಕಟ್ಟಡದಲ್ಲಿ ಪ್ರಾರಂಭಿಸಲಾಗಿದೆ. ಈ ಕಟ್ಟಡವನ್ನು ನವೀಕರಣ ಮಾಡಲಾಗಿದ್ದು, ಆಡಳಿತದ ಎಲ್ಲ

ಕಛೇರಿ/ವಿಭಾಗಳಿಗೆ (ಪರೀಕ್ಷಾ ವಿಭಾಗ ಹೊರತುಪಡಿಸಿ) ಈ ಕಟ್ಟಡದಲ್ಲಿ ಸ್ಥಳಾವಕಾಶ ಒದಗಿಸಲು ಯೋಜಿಸಲಾಗಿದೆ. ಪ್ರಸ್ತಾಪಿಸಲಾದ ಈ ಕಟ್ಟಡದ 'ಸೆಂಟ್ರಲ್ ಹಾಲ್' ಅನ್ನು 'ರಾಜಾಜಿ ಹಾಲ್' ಎಂದು ಕರೆಯಲಾಗುತ್ತಿದ್ದು, ವಿಶ್ವವಿದ್ಯಾಲಯದ ಇತಿಹಾಸ ಹಾಗೂ ವಿಶ್ವವಿದ್ಯಾನಿಲಯದ ಪ್ರಾರಂಭದ ನಂತರದ ಪ್ರಮುಖ ಘಟನೆಗಳು, ಪ್ರಮುಖ ವ್ಯಕ್ತಿಗಳು, ಭೇಟಿ ನೀಡಿದ ಗಣ್ಯವ್ಯಕ್ತಿಗಳು, ಮುಂತಾದ ಸಂದರ್ಭಗಳ ಸ್ಮರಣಿಕೆಗಳನ್ನು ಹಾಗೂ ಭಾವಚಿತ್ರಗಳನ್ನು ಜಾಗ್ರತೆಯಿಂದ ನಿರ್ವಹಿಸಿಕೊಂಡು ಹೋಗಲು ಈ ಪ್ರಾಂಗಣವನ್ನು "Rajaji Hall of Fame" "ರಾಜಾಜಿ ಹಾಲ್ ಆಫ್ ಫೇಮ್" ವಾಗಿ ಪರಿವರ್ತಿಸಲು ಪ್ರಸ್ತಾಪಿಸಲಾಗಿದೆ.

ಅಂತೆಯೇ ಭಾರತ ರತ್ನ ಸರ್ ಸಿ.ವಿ ರಾಮನ್‌ರವರು ತಮ್ಮ ನೊಬೆಲ್ ಪಾರಿತೋಷಕಕ್ಕೆ ಭಾಜನವಾದ ಸಂಶೋಧನೆಯನ್ನು ಅಂದಿನ ಸೆಂಟ್ರಲ್ ಕಾಲೇಜಿನ ಭೌತಶಾಸ್ತ್ರ ಕಟ್ಟಡದ ಉಪನ್ಯಾಸ ಸಭಾಂಗಣದಲ್ಲಿ ಪ್ರಥಮ ಬಾರಿಗೆ ಸಾರ್ವಜನಿಕರಾಗಿ ಪ್ರಸ್ತುತ ಪಡಿಸಿರುವುದು ಒಂದು ಐತಿಹಾಸಿಕ ದಾಖಲೆ ಹಾಗೂ ಸ್ಮರಣೀಯ ಘಟನೆ ವಿಶ್ವವಿದ್ಯಾನಿಲಯವು ಅಂದಿನ ಭೌತಶಾಸ್ತ್ರ ಕಟ್ಟಡವನ್ನು ಹಾಗೆಯೆ ಉಳಿಸಿಕೊಂಡು ಅದರಲ್ಲಿ ಸರ್ ಸಿ.ವಿ. ರಾಮನ್ ರವರು ನೊಬೆಲ್ ಪಾರಿತೋಷಕರಾದ ಗೌರವಕ್ಕೆ ಪಾತ್ರವಾದ ಸಂಶೋಧನೆಯನ್ನು ಸಾರ್ವಜನಿಕಗೊಳಿಸಿದ ಉಪನ್ಯಾಸ ಸಭಾಂಗಣಕ್ಕೆ "ಸರ್ ಸಿ.ವಿ. ರಾಮನ್ ಸಭಾಂಗಣದ" "Sir C.V. Raman Hall" ಎಂದು ಅಧೀಕೃತವಾಗಿ ದಾಖಲೀಕರಿಸುವ ಪ್ರಸ್ತಾವನೆಯನ್ನು ಸಹ ಪ್ರಸ್ತಾಪಿಸಲಾಗಿದೆ.

ಈ ಪ್ರಾಂಗಣಗಳವನ್ನು ಕ್ರಮಬದ್ಧವಾಗಿ ನಿರ್ವಹಿಸಲು ಹಾಗೂ ಅಲ್ಲಿ ಪ್ರದರ್ಶಿಸಬೇಕಾದ ಸಾಧಕರ ಮತ್ತು ಸಾಧನೆಗಳ ಗುಣಮಟ್ಟ ಹಾಗೂ ಧ್ವನಿ ಬೆಳಕು ಒಳಗೊಂಡಂತೆ ಇನ್ನಿತರ ತಾಂತ್ರಿಕ ವಿವರಗಳನ್ನು ಸಿದ್ಧಪಡಿಸಲು ಈ ಕ್ಷೇತ್ರದಲ್ಲಿ ನಿರತರಾದ ಪ್ರಮುಖ ವ್ಯಕ್ತಿಗಳನ್ನು ಒಳಗೊಂಡ ಸಮಿತಿ ರಚಿಸಿ ಆ ಸಮಿತಿ ಸಿದ್ಧಪಡಿಸುವ ಮಾನದಂಡಗಳ ಪ್ರಕಾರ ಈ ಪ್ರಾಂಗಣಗಳನ್ನು ನಿರ್ವಹಿಸಲಾಗುವುದು.

ವಿಶ್ವವಿದ್ಯಾನಿಲಯದ /ಮಹಾವಿದ್ಯಾಲಯಗಳ ವಿದ್ಯಾರ್ಥಿಗಳಿಗೆ, ವಿಶ್ವವಿದ್ಯಾನಿಲಯಕ್ಕೆ ಭೇಟಿ ನೀಡುವ ಗಣ್ಯವ್ಯಕ್ತಿಗಳಿಗೆ ಮತ್ತು ಸಾರ್ವಜನಿಕರಿಗೆ ಇಂತಹ ಸಭಾಂಗಣಗಳ ಆಕರ್ಷಣೀಯವಾದ ಸಂದರ್ಶನ ಸ್ಥಳವಾಗಿ ಪರಿವರ್ತಿಸುವ ಉದ್ದೇಶದಿಂದ ಈ ಸಭಾಂಗಣಗಳನ್ನು ಸುಸಜ್ಜಿತಗೊಳಿಸುವ ಉದ್ದೇಶದಿಂದ ಮೇಲಿನ ಪ್ರಸ್ತಾವನೆಯನ್ನು ಸಿಂಡಿಕೇಟ್ ಸಭೆಯ ಪರಿಶೀಲನೆಗೆ ಮಂಡಿಸಲಾಗಿದೆ.

*ಸಿಂಡಿಕೇಟ್ ತೀರ್ಮಾನ:*

**ಆಡಳಿತ ಕಟ್ಟಡದ ಕೇಂದ್ರ ಭವನವನ್ನು "ರಾಜಾಜಿ ಹಾಲ್ ಆಫ್ ಫೇಮ್" ಎಂದು ನಾಮಕರಣಗೊಳಿಸಿ ಸೆಂಟ್ರಲ್ ಕಾಲೇಜಿನ ಇತಿಹಾಸ –ಪರಂಪರೆಗಳನ್ನು ಬಿಂಬಿಸುವ ಪ್ರದರ್ಶಿಕಗಳನ್ನು ಅಳವಡಿಸಲು ಸಭೆ ಅನುಮೋದನೆ ನೀಡಿತು.**

**ಅದೇ ರೀತಿ ಭಾರತ ರತ್ನ ಸರ್. ಸಿ. ವಿ ರಾಮನ್ ರವರ ನೊಬಲ್ ಪಾರಿತೋಷಕ ಸಾಕ್ಷಿಕರಿಸಿದ ಸಭಾಂಗಣವನ್ನು "ಸರ್ ಸಿ. ವಿ ರಾಮನ್ ಹಾಲ್" ಎಂದು ಅಧೀಕೃತಗೊಳಿಸಲು ಸಿಂಡಿಕೇಟ್ ಸಭೆ ತೀರ್ಮಾನಿಸಿತು.**

**"ರಾಜಾಜಿ ಹಾಲ್ ಆಫ್ ಫೇಮ್" ಮತ್ತು "ಸರ್ ಸಿ. ವಿ. ರಾಮನ್ ಹಾಲ್"ಗಳನ್ನು ವ್ಯವಸ್ಥಿತವಾಗಿ ನಿರ್ವಹಿಸಲು ಹಾಗೂ "ರಾಜಾಜಿ ಹಾಲ್ ಆಫ್ ಫೇಮ್" ನಲ್ಲಿ ಸಂರಕ್ಷಿಸಬೇಕಾದ ಹಾಗೂ ಪ್ರದರ್ಶಿಸಬೇಕಾದ ಈ ಬೇರೆ ಬೇರೆ ಕಾಲಘಟ್ಟದ ಮೇರು ಪುರುಷರ ಭಾವ ಚಿತ್ರಗಳು ಉಕ್ತಿಗಳನ್ನು ದಾಖಲೆಗಳನ್ನು ಅಳವಡಿಸಲು, ವಿಶಿಷ್ಟ / ವಿಶೇಷ ಸಂದರ್ಭಗಳ ಸ್ಮರಣಿಕೆಗಳನ್ನು, ಚಿತ್ರಗಳನ್ನು ಕುರಿತಂತೆ ಪರಿಶೀಲಿಸಿ ತೀರ್ಮಾನ ಕೈಗೊಳ್ಳಲು ಹಾಗೂ ಈ ಸಭಾಂಗಣಗಳಿಗೆ ಬೇಕಾದ ಉಪಕರಣ, ಧ್ವನಿ ಬೆಳಕಿನ ವ್ಯವಸ್ಥೆ, ಸುರಕ್ಷತಾ ವಿಧಾನಗಳನ್ನು, ಭಾವಚಿತ್ರ ಪದರ್ಶಿಕೆಗಳ Specification ಮುಂತಾದವುಗಳ ಕುರಿತು ಪರಿಶೀಲಿಸಿ ತೀರ್ಮಾನಿಸಲು ಕುಲಪತಿಗಳ ಅಧ್ಯಕ್ಷತೆಯಲ್ಲಿ ವಿಷಯ ತಜ್ಞರು ಹಾಗೂ ತಂತ್ರಜ್ಞರ ಸಮಿತಿಯನ್ನು ಕುಲಪತಿಗಳು ರಚಿಸಬೇಕೆಂದು ಸಭೆ ತೀರ್ಮಾನಿಸಿತು.**

ವಿಷಯ ಸಂಖ್ಯೆ: 7

ವಿಷಯ: ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಗೀತೆಯಾಗಿ "ಓ ನನ್ನ ಚೇತನ – ಆಗು ನೀ ಅನಿಕೇತನ" ಗೀತೆಯನ್ನು ಅಂಗೀಕರಿಸುವ ಕುರಿತು

ಉಲ್ಲೇಖ: ವಿಶ್ವವಿದ್ಯಾನಿಲಯದ ದೂರದೃಷ್ಟಿ ದಾಖಲೆ ಹಾಗೂ ಲಾಂಛನ

***ಪರಾಮರ್ಶಕ ಟಿಪ್ಪಣಿ:***

ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಲಾಂಛನದ ಧ್ಯೇಯವಾಕ್ಯವಾಗಿ "ಆಗು ನೀ ಅನಿಕೇತನ" ಗೀತೆಯನ್ನು ಕನ್ನಡದ ಶ್ರೇಷ್ಠ ಕವಿ, ಜ್ಞಾನಪೀಠ ಪ್ರಶಸ್ತಿ ವಿಜೇತ, ರಾಷ್ಟ್ರಕವಿ 'ಕುವೆಂಪು', ರವರು ಸಾರಿದ ವಿಶ್ವಮಾನವ ಸಂದೇಶವನ್ನು ವಿಶ್ವವಿದ್ಯಾಲಯದ ಧ್ಯೇಯವಾಕ್ಯವಾಗಿ ಆಯ್ಕೆ ಮಾಡಿ, ಈ ವಿಶ್ವವಿದ್ಯಾನಿಲಯದ ಶಿಕ್ಷಣದ ಅಂತಿಮ ಉದ್ದೇಶವನ್ನು ಸೂಚಿಸುವ "ಓ ನನ್ನ **ಚೇತನ, ಆಗು ನೀ ಅನಿಕೇತನ**" ಕವಿತೆ ಮಾನವತೆಯ ಪೂರ್ಣತ್ವವನ್ನು ಸಾರುತ್ತದೆ. ಅಂದರೆ, 'ಸಾಮಾನ್ಯ ವ್ಯಕ್ತಿ'ಯನ್ನು 'ಉನ್ನತ ಮಟ್ಟಕ್ಕೆ' ಪರಿವರ್ತಿಸುವುದು; 'ಸಾಮಾನ್ಯ ಮನುಷ್ಯ' ನನ್ನು 'ವಿಶ್ವ ಮಾನವನನ್ನಾಗಿ' ಮಾಡುವುದು ಈ ಧ್ಯೇಯವಾಕ್ಯದ ಸಾರ.

ವಿಶ್ವವಿದ್ಯಾಲಯದ 'ಧ್ಯೇಯವಾಕ್ಯ'ದಲ್ಲಿ ವಿವರಿಸಲಾಗಿರುವ 'ಆಗು ನೀ ಅನಿಕೇತನ' ಧ್ಯೇಯವಾಕ್ಯವನ್ನು "ಓ ನನ್ನ ಚೇತನ, ಆಗು ನೀ ಅನಿಕೇತನ" ಎಂಬ 'ವಿಶ್ವಮಾನವ ಗೀತೆ' (ಎ ಸಾಂಗ್ ಆಫ್ ದಿ ಯುನಿವರ್ಸಲ್ ಮ್ಯಾನ್") ಎಂದು ಜನಪ್ರಿಯವಾಗಿರುವ ಕವಿತೆಯಿಂದ ಆರಿಸಿಕೊಳ್ಳಲಾಗಿದೆ. ವಿಶ್ವವಿದ್ಯಾನಿಲಯವು ಕವಿತೆಯಲ್ಲಿ ವ್ಯಕ್ತಪಡಿಸಿದ ಆದರ್ಶಗಳನ್ನು ಅಳವಡಿಸಿಕೊಳ್ಳಲು ಕಟಿಬದ್ಧವಾಗಿದೆ. ಎಲ್ಲಾ ಗಡಿಗಳು, ಗುರುತುಗಳು, ಸಿದ್ಧಾಂತಗಳು ತತ್ವಗಳನ್ನು ಜಾತಿ, ಮತ, ಪಂಥ, ಧರ್ಮ, ರಾಷ್ಟ್ರದ ಗಡಿಯನ್ನು ಮೀರಿ ಹೊರಹೊಮ್ಮುವ ಶಿಕ್ಷಣವನ್ನು ಒದಗಿಸುವುದೇ ವಿಶ್ವವಿದ್ಯಾನಿಲಯದ ಧ್ಯೇಯವಾಗಿದೆ. ಸಂಕುಚಿತ ಆಲೋಚನೆಗಳನ್ನು, ಕಿರಿದಾದ ಗೋಡೆಗಳು ಮತ್ತು ಗಡಿಗಳನ್ನು ಮುರಿದಾಗ ಮಾತ್ರ ನಾವು ನಮ್ಮ ಪೂರ್ಣ ಮಾನವತ್ವದ ಸಾಮರ್ಥ್ಯದ ಗುರಿ ತಲುಪಬಹುದು ಎಂಬ ರಸಋಷಿ ಕುವೆಂಪುರವರ ವಿಶ್ವ ಮಾನವತ್ವದ ಚಿಂತನೆಯ ಈ ಗೀತೆಯನ್ನು ವಿಶ್ವವಿದ್ಯಾನಿಲಯದ ಆಶಯ ಗೀತೆಯಾಗಿ ಒಪ್ಪಿಕೊಂಡು, ವಿಶ್ವವಿದ್ಯಾನಿಲಯ ಆಯೋಜಿಸುವ ಎಲ್ಲ ಕಾರ್ಯಕ್ರಮ/ಸಮ್ಮೇಳನ/ಸಮಾರಂಭಗಳ ಪ್ರಾರಂಭದಲ್ಲಿ, ಈ ಗೀತೆಯನ್ನು ವಾಚಿಸುವುದನ್ನು ಕಡ್ಡಾಯಗೊಳಿಸುವ ಪ್ರಸ್ತಾವನೆಯನ್ನು ಸಿಂಡಿಕೇಟ್ ಸಭೆಯ ಪರಿಶೀಲನೆ ಹಾಗೂ ಅನುಮೋದನೆಗೆ ಮಂಡಿಸಲಾಗಿದೆ.

***ಸಿಂಡಿಕೇಟ್ ತೀರ್ಮಾನ:***

**ರಾಷ್ಟ್ರಕವಿ ಕುವೆಂಪು ವಿರಚಿತ "ವಿಶ್ವಮಾನವ ಗೀತೆ" "ಓ ನನ್ನ ಚೇತನ ಆಗು ನೀ ಅನಿಕೇತನ" ಗೀತೆಯನ್ನು ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಆಶಯ ಗೀತೆಯಾಗಿ ಅಂಗೀಕರಿಸಲು ಸಿಂಡಿಕೇಟ್ ಸಭೆ ತೀರ್ಮಾನಿಸಿತು.**

**ವಿಶ್ವಮಾನವ ಗೀತೆಯ ಸಂದೇಶಗಳನ್ನು ವಿಶ್ವವಿದ್ಯಾನಿಲಯದ ವಿವಿಧ ಕಟ್ಟಡಗಳ ಪ್ರಮುಖ ಸ್ಥಳಗಳಲ್ಲಿ ಆಕರ್ಷಕವಾಗಿ ಪ್ರದರ್ಶಿಸಲು ಕ್ರಮವಹಿಸಬೇಕೆಂದು ಸಭೆ ಸೂಚಿಸಿತು.**

ವಿಷಯ ಸಂಖ್ಯೆ: 8

Sub: Renaming of the Canara Bank School of Management Studies as the "School of Management Studies" in view of starting the department of management by Bangalore University by the same nomenclature.

***REFERENCE NOTE:***

The Bangalore University initially started the MBA Course in the Department of Commerce and Management Studies. Subsequently, the Department of Studies in Management was bifurcated by notifying the Statute to that effect on 14.05.1997. In the year 1999, in view of the grant of endowment by Canara Bank, for construction of a separate building. The Department of Management Studies was renamed as "CANARA BANK SCHOOL OF MANAGEMENT STUDIES".

The Bengaluru City University was trifurcated from Bangalore University with the headquarters at the Central College Campus in 2017. However, academic activities commenced from 2018-19. During the transitional period of establishment of Bengaluru City University, Bangalore University has started parallel departments which ware existing in the 'City Campus'. As a result, the "CANARA BANK SCHOOL OF MANAGEMENT STUDIES" has been started in the Jnana Bharathi Campus along-with other departments, such as Chemistry, Biochemistry, Mathematics, Commerce, Global Languages, Fashion and Apparel Design and Communication.

Though the Bengaluru City University has inherited the 8 Post-Graduate Departments, the name of "CANARA BANK SCHOOL OF MANAGEMENT STUDIES" is being used by the Bangalore University. The Bengaluru City University has also retained the same nomenclature. This name is appearing in the AICTE, UGC, and most importantly in the seat matrix of Karnataka Examination Authority under both the Universities. Because of identical nomenclature, this is also causing confusions amongst the Public and administration the students are experiencing confusion while selecting the seats.

In view of the above situation, it is proposed to dispense with the name of "CANARA BANK SCHOOL OF MANAGEMENT STUDIES" and rename it as "SCHOOL OF MANAGEMENT STUDIES".

The matter is placed before the Syndicate for consideration and approval.

*ಸಿಂಡಿಕೇಟ್ ತೀರ್ಮಾನ:*

ಬೆಂಗಳೂರು ವಿಶ್ವವಿದ್ಯಾನಿಲಯ ತಮ್ಮ ಮ್ಯಾನೇಜ್‌ಮೆಂಟ್ ವಿಭಾಗದ ಹೆಸರನ್ನು "ಕೆನರಾ ಬ್ಯಾಂಕ್ ಸ್ಕೂಲ್ ಆಫ್ ಮ್ಯಾನೇಜ್‌ಮೆಂಟ್" ಎಂದು ಬಳಸುತ್ತಿರುವುದರಿಂದ, ಬೆಂಗಳೂರು ನಗರ ವಿಶ್ವವಿದ್ಯಾನಿಲಯದ **MBA /BBA** ವ್ಯಾಸಂಗಗಳ ವಿಭಾಗದ ಹೆಸರನ್ನು **"BCU School of Management Studies"** ಎಂದು ಹೆಸರಿಸಿ ಮುಂದುವರೆಸಲು ಸಿಂಡಿಕೇಟ್ ಸಭೆ ತೀರ್ಮಾನಿಸಿತು.

ಸದಸ್ಯರಾದ ಶ್ರೀ ಎಂ.ವಿ ರಂಗಪ್ಪನವರು ವಿಶ್ವವಿದ್ಯಾನಿಲಯದಲ್ಲಿ **MCA** ಮತ್ತು **BHM** ವ್ಯಾಸಂಗಗಳನ್ನು ವಿಶ್ವವಿದ್ಯಾನಿಲಯದಲ್ಲಿ ಪ್ರಾರಂಭಿಸಲು ಕ್ರಮವಹಿಸಬೇಕೆಂಬ ಸಲಹೆಗೆ ಸ್ಪಂದಿಸಿದ ಸಭೆ, ವಿಶ್ವವಿದ್ಯಾನಿಲಯದ ಟೆಕ್ನಾಲಾಜಿ ವಿಭಾಗದ ಅಡಿಯಲ್ಲಿ **MCA** ವ್ಯಾಸಂಗವನ್ನು ಹಾಗೂ **School of Business Studies** ಅಡಿಯಲ್ಲಿ **BHM** ವ್ಯಾಸಂಗಗಳನ್ನು ಪ್ರಾರಂಭಿಸಲು ಕ್ರಮವಹಿಸಲು ಸಿಂಡಿಕೇಟ್ ಸಭೆ ತೀರ್ಮಾನಿಸಿತು.

**ವಿಷಯ ಸಂಖ್ಯೆ: 9**

ವಿಷಯ: 2022–23ನೇ ಸಾಲಿನಿಂದ St. Xavier's College, ಬೆಂಗಳೂರು ಕಾಲೇಜಿಗೆ ನೀಡಿರುವ ಸಂಯೋಜನೆಯನ್ನು ರದ್ದು ಪಡಿಸುವ ಕುರಿತು

ಉಲ್ಲೇಖ: ಸಂಖ್ಯೆ: ಇಡಿ 260 ಯುಬಿವಿ 2023, ದಿನಾಂಕ: 21.12.2023. ಸರ್ಕಾರದ ಕಾರ್ಯದರ್ಶಿ ಉನ್ನತ ಶಿಕ್ಷಣ ಇಲಾಖೆ ಬಹುಮಹಡಿ ಕಟ್ಟಡ, ಬೆಂಗಳೂರು ಇವರ ಪತ್ರ

***ಪರಾಮರ್ಶಕ ಟಿಪ್ಪಣಿ:***

2023–24ನೇ ಶೈಕ್ಷಣಿಕ ಸಾಲಿಗೆ St. Xavier's College ಬೆಂಗಳೂರು, ಇವರು B.Com 100, BBA- 60 ಕೋರ್ಸುಗಳ ಸಂಯೋಜನೆ ನವೀಕರಣಕ್ಕಾಗಿ ಹಾಗೂ ಹೆಚ್ಚುವರಿಯಾಗಿ MBA ಮತ್ತು MCA ಕೋರ್ಸುಗಳನ್ನು ಹೊಸದಾಗಿ ಪ್ರಾರಂಭಿಸಲು ಸಂಯೋಜನಾ ಪ್ರಸ್ತಾವನೆಯನ್ನು ಸಲ್ಲಿಸಿದ ವಿಶ್ವವಿದ್ಯಾನಿಲಯದ ಪ್ರಾಧಿಕಾರಗಳು ಪರಿಗಣಿಸಿ ಸಂಯೋಜನೆ ನವೀಕರಣ ಪ್ರಸ್ತಾವನೆಯನ್ನು ಅನುಮೋದಿಸಿ ಹೊಸ MBA ಮತ್ತು MCA ಕೋರ್ಸುಗಳ ಸಂಯೋಜನೆಗೆ ಸರ್ಕಾರದ ಅನುಮತಿ ಕೋರಿ ವಿಶ್ವವಿದ್ಯಾನಿಲಯದ ಪ್ರಾಧಿಕಾರಿಗಳ ಶಿಫಾರಸ್ಸಿನೊಂದಿಗೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಲಾಗಿತ್ತು.

St. Xavier's College, ನಂ.15, ಕ್ವೀನ್ಸ್ ರೋಡ್, ಬೆಂಗಳೂರು–560052 ಕಾಲೇಜಿನವರು ಸಲ್ಲಿಸಿರುವ ಲೀಸ್‌ಡೀಡ್‌ನ ನೋಂದಣಿ ಮಾಡಿಸಿರುವ ದಾಖಲೆಯ ಬಗ್ಗೆ ಸರ್ಕಾರಕ್ಕೆ ದೂರು ಬಂದ ಹಿನ್ನಲೆಯಲ್ಲಿ ಕಾಲೇಜಿನವರು ಸಲ್ಲಿಸಿರುವ ಲೀಸ್‌ಡೀಡ್‌ನ ನೈಜತೆಯ ಬಗ್ಗೆ, ವಸ್ತುನಿಷ್ಠ ವರದಿಯನ್ನು ನೀಡುವಂತೆ ಹಿರಿಯ ಉಪನೋಂದಣಾಧಿಕಾರಿ, ಶಿವಾಜಿನಗರ, ಬೆಂಗಳೂರು ನಗರ ಜಿಲ್ಲೆ ಇವರನ್ನು ಸರ್ಕಾರದ ಪತ್ರದಲ್ಲಿ ಕೋರಲಾಗಿತ್ತು.

ಹಿರಿಯ ಉಪನೋಂದಣಾಧಿಕಾರಿ, ಶಿವಾಜಿನಗರ, ಬೆಂಗಳುರು ನಗರ ಜಿಲ್ಲೆ ಇವರು ಸರ್ಕಾರಕ್ಕೆ ಸಲ್ಲಿಸಿರುವ ವರದಿಯಲ್ಲಿ Institution Agricultural Techonologists (IAT), No 15, Queens Road, Bengaluru- 560052 ಮತ್ತು St. Xavier's Educational and Charitable trust ಗಳ ಮಧ್ಯೆ ಏರ್ಪಟ್ಟಿರುವ ಲೀಸ್‌ಡೀಡ್‌ನ ದಸ್ತಾವೇಜು ನೋಂದಣಿಯಾಗಿರುವುದಿಲ್ಲವೆಂದು ತಿಳಿಸಿರುತ್ತಾರೆ. ಇದನ್ನು ಗಂಭೀರವಾಗಿ ಪರಿಗಣಿಸಿದ ಸರ್ಕಾರ St. Xavier's ಕಾಲೇಜಿನವರು ವಾಮಮಾರ್ಗದಿಂದ ಸಂಯೋಜನೆ ಪಡೆಯಲು ಉದ್ದೇಶಿಸಿ ನಕಲಿ ಲೀಸ್‌ಡೀಡ್ ದಸ್ತಾವೇಜು ಸೃಷ್ಟಿಸಿರುವ ಕ್ರಿಮಿನಲ್ ಸ್ವರೂಪದ ವಂಚನೆ ಎಸಗಿರುವುದು ಸ್ಪಷ್ಟವಾಗಿದೆ. ಆದ್ದರಿಂದ ಸಂಯೋಜನೆ ಪಡೆಯಲು ದುರುದ್ದೇಶದಿಂದ ಕ್ರಿಮಿನಲ್ ಸ್ವರೂಪದ ವಂಚನೆ ಎಸಗಿರುವ ಮೂಲಕ ವಿದ್ಯಾರ್ಥಿಗಳ ಶೈಕ್ಷಣಿಕ ಭವಿಷ್ಯವನ್ನು ಆತಂಕಕ್ಕೆ ದೂಡಿರುವ St. Xavier's ಕಾಲೇಜಿಗೆ 2022–23ನೇ ಶೈಕ್ಷಣಿಕ ಸಾಲಿನಿಂದ ಪೂರ್ವಾನ್ವಯಗೊಳಿಸಿ ಹೊಸ ಸಂಯೋಜನೆಗೆ ನೀಡಿರುವ ಮಹಾವಿದ್ಯಾಲಯದ ಅನುಮತಿ ಪತ್ರವನ್ನು ತಕ್ಷಣದಿಂದಲೆ ಜಾರಿಗೆ ಬರುವಂತೆ ಹಿಂಪಡೆಲಾಗಿದೆ ಎಂದು ತಿಳಿಸಿರುತ್ತಾರೆ.

ಈ ಹಿನ್ನಲೆಯಲ್ಲಿ St. Xavier's College, ನಂ.15, ಕ್ವೀನ್ಸ್ ರೋಡ್, ಬೆಂಗಳೂರು-560015, ಕಾಲೇಜಿನ ಸಂಯೋಜನೆಯನ್ನು ಹಿಂಪಡೆಯಲು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000ರ ಪ್ರಕರಣ 63ರ ಅಡಿ ಕೂಡಲೆ ಕ್ರಮ ವಹಿಸಲು ಕಾಲೇಜಿನ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡಲು ಕಾನೂನಾತ್ಮಕ ಕ್ರಮ ಜರುಗಿಸಲು ಮತ್ತು ಸದರಿ ಕಾಲೇಜಿಗೆ ಸೂಕ್ತ ದಂಡ ವಿಧಿಸಲು ಬೆಂಗಳೂರು ನಗರ ವಿಶ್ವವಿದ್ಯಾನಿಲಯಕ್ಕೆ ಕಟ್ಟುನಿಟ್ಟಿನ ಸೂಚನೆ ನೀಡಿರುತ್ತಾರೆ.

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000ರ ಪ್ರಕರಣ 63ರ (11)ರಡಿ ಪ್ರಕರಣದಲ್ಲಿ ಗೊತ್ತುಪಡಿಸಿರುವಂತೆ ನಿರ್ದಿಷ್ಟ ವ್ಯಾಸಂಗ ಕ್ರಮದ ಸಂಬಂದದಲ್ಲಿ ಪ್ರವೇಶ ಪಡೆದಿರುವ St. Xavier's ಕಾಲೇಜಿನ ವಿದ್ಯಾರ್ಥಿಗಳನ್ನು ಹತ್ತಿರದಲ್ಲಿರುವ ಕಾಲೇಜಿಗೆ ಪ್ರವೇಶಾವಕಾಶವನ್ನು ಹೆಚ್ಚಿಸಿ, ಪ್ರವೇಶಾತಿಯನ್ನು ಕಲ್ಪಿಸುವ ಮೂಲಕ, ವಿದ್ಯಾರ್ಥಿಗಳ ಹಿತಾಸಕ್ತಿಯನ್ನು ಕಾಪಾಡುವಂತೆ ವಿಶ್ವವಿದ್ಯಾನಿಲಯಕ್ಕೆ ನಿರ್ದೇಶಿಸಿರುತ್ತಾರೆ. ಸರ್ಕಾರದ ಸೂಚನೆಯಂತೆ ತಪ್ಪದೇ ಕ್ರಮವಹಿಸಿ ಕೈಗೊಂಡ ಕ್ರಮದ ಬಗ್ಗೆ ಪೂರಕ ದಾಖಲೆಗಳೊಂದಿಗೆ ಒಂದು ವಾರದೊಳಗೆ ವರದಿ ಸಲ್ಲಿಸಲು ವಿಶ್ವವಿದ್ಯಾನಿಲಯಕ್ಕೆ ಪತ್ರ ಬರೆದು ತಿಳಿಸಿರುತ್ತಾರೆ.

ಮೇಲಿನ ಅಂಶಗಳನ್ನು ಅವಗಾಹನೆಗೆ ತರುತ್ತಾ ವಿಶ್ವವಿದ್ಯಾನಿಲಯದ ಅಧಿನಿಯಮ 63ರ, ಉಪಪ್ರಕರಣ 2ರಂತೆ ಸಂಯೋಜನೆಯನ್ನು ಹಿಂದಕ್ಕೆ ಪಡೆಯುವ ಪ್ರಸ್ತಾವನೆಯನ್ನು ಸಿಂಡಿಕೇಟ್ ಸಭೆಯ ಪರಿಶೀಲನೆ ಹಾಗೂ ಮುಂದಿನ ಕ್ರಮಕ್ಕಾಗಿ ವಿಷಯವನ್ನು ಮಂಡಿಸಲಾಗಿದೆ.

*ಸಿಂಡಿಕೇಟ್ ತೀರ್ಮಾನ:*

**2022-23ನೇ ಸಾಲಿನಿಂದ St. Xavier's ಕಾಲೇಜಿಗೆ ನೀಡಿರುವ ಸಂಯೋಜನೆಯನ್ನು ರದ್ದು ಪಡಿಸುವ ಸರ್ಕಾರದ ನಿರ್ದೇಶನದಂತೆ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮದ ಪ್ರಕರಣ 63 ರಲ್ಲಿರುವ ಅವಕಾಶಗಳನ್ವಯ ಪರಿಶೀಲಿಸಿ ವರದಿ ಸಲ್ಲಿಸಲು ಒಂದು ಸಮಿತಿಯನ್ನು ಮಾನ್ಯ ಕುಲಪತಿಗಳು ರಚಿಸಲು ಸಭೆ ಅಧೀಕರಿಸಿತು.**

**ವಿಷಯ ಸಂಖ್ಯೆ: 10**

ವಿಷಯ: ಬೆಂಗಳೂರು ನಗರ ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧೀಕ್ಷಕರು/ ಸಹಾಯಕರ ಹುದ್ದೆಗಳಲ್ಲಿ ನೌಕರರಿಗೆ, ಸಹಾಯಕ ಕುಲಸಚಿವರು ಹಾಗೂ ಅಧೀಕ್ಷಕರ ಹುದ್ದೆಗಳಿಗೆ ಮುಂಬಡ್ತಿ ನೀಡಿರುವ ಕುರಿತು.

ಉಲ್ಲೇಖ:
1. ದಿನಾಂಕ:31-07-2023ರ ಸಿಂಡಿಕೇಟ್ ನಿರ್ಣಯ.
2. ದಿನಾಂಕ:12-12-2023 ರಂದು ನಡೆದ ಇಲಾಖಾ ಮುಂಬಡ್ತಿ ಸಮಿತಿ ಸಭೆಯ ನಡಾವಳಿಗಳು.
3. ವಿ.ವಿ.ಆದೇಶ ಸಂಖ್ಯೆ: ಬೆಂ.ನ.ವಿ/ಸಿಬ್ಬಂದಿ/ಮುಂಬಡ್ತಿ/ಅಧೀಕ್ಷಕರು/2023-24/ 587, ದಿನಾಂಕ: 01.01.2024.
4. ವಿ.ವಿ.ಆದೇಶ ಸಂಖ್ಯೆ: ಬೆಂ.ನ.ವಿ/ಸಿಬ್ಬಂದಿ/ಮುಂಬಡ್ತಿ/ಸಹಾಯಕ ಕುಲಸಚಿವರು 2023-24/588, ದಿನಾಂಕ: 01.01.2024.

****

*ಪರಾಮರ್ಶಕ ಟಿಪ್ಪಣಿ:*

ಬೆಂಗಳೂರು ವಿಶ್ವವಿದ್ಯಾಲಯದಿಂದ ಅಭಿಮತದ ಮೇರೆಗೆ ಬೆಂಗಳೂರು ನಗರ ವಿಶ್ವವಿದ್ಯಾನಿಲಯಕ್ಕೆ ವರ್ಗಾವಣೆಗೊಂಡು ಬಂದು ಕಾರ್ಯನಿರ್ವಹಿಸುತ್ತಿರುವ ಅರ್ಹ ನೌಕರರಿಗೆ ಬೆಂಗಳೂರು ವಿಶ್ವವಿದ್ಯಾನಿಲಯದ

ಸಿ&ಆರ್ ನಿಯಮಗಳಂತೆ, ಅಧೀಕ್ಷಕರು ಮತ್ತು ಸಹಾಯಕ ಕುಲಸಚಿವರ ಹುದ್ದೆಗಳಿಗೆ ಮುಂಬಡ್ತಿ ನೀಡಲು ಉಲ್ಲೇಖ (1) ಸಿಂಡಿಕೇಟ್‌ನಲ್ಲಿ ನಿರ್ಣಯಿಸಲಾಗಿದೆ. ಅದರಂತೆ ಉಲ್ಲೇಖ (2)ರ ಪ್ರಕಾರ ಶ್ರೀಮತಿ ಎ.ಕೆ.ಕವಿತಾ ಅವರಿಗೆ ಅಧೀಕ್ಷಕ ಹುದ್ದೆಯಿಂದ ಸಹಾಯಕ ಕುಲಸಚಿವರ ಹುದ್ದೆಗೆ ಹಾಗೂ ಶ್ರೀ ಡಿ.ವೀರಣ್ಣ ಅವರಿಗೆ ಸಹಾಯಕ ಹುದ್ದೆಯಿಂದ ಅಧೀಕ್ಷಕರ ಹುದ್ದೆಗೆ ಮುಂಬಡ್ತಿ ನೀಡುವ ಕುರಿತು ದಿನಾಂಕ:12-12-2023 ರಂದು ನಡೆದ ಇಲಾಖಾ ಮುಂಬಡ್ತಿ ಸಮಿತಿ ಮುಂದೆ ಮಂಡಿಸಲಾಗಿತ್ತು.

ಇಲಾಖಾ ಮುಂಬಡ್ತಿ ಸಮಿತಿ ಸಭೆಯಲ್ಲಿ ಈ ಕೆಳಕಂಡಂತೆ ಶಿಫಾರಸ್ಸು ಮಾಡಿರುತ್ತಾರೆ.

1. ಬೆಂಗಳೂರು ನಗರ ವಿಶ್ವವಿದ್ಯಾನಿಲಯದಲ್ಲಿ ಸಹಾಯಕ ಕುಲಸಚಿವರ ಹುದ್ದೆಗೆ ಮುಂಬಡ್ತಿಗಾಗಿ ಖಾಲಿ ಇರುವ 2 ಹುದ್ದೆಗಳಲ್ಲಿ ಸ್ಥಳೀಯ ಪೋಷಕ ವೃಂದದಲ್ಲಿ ಪರಿಶಿಷ್ಟ ಜಾತಿಗೆ ಒಂದು (01) ಹುದ್ದೆ ಹಾಗೂ 371(ಜೆ) ಅಡಿಯಲ್ಲಿ ಪರಿಶಿಷ್ಟ ಜಾತಿಗೆ ಒಂದು (01) ಹುದ್ದೆ ಮೀಸಲಾಗಿರುವುದನ್ನು ಸಮಿತಿ ಗಮನಿಸಿದೆ. ಪ್ರಸ್ತುತ ವಿಶ್ವವಿದ್ಯಾನಿಲಯದಲ್ಲಿ ಅಧೀಕ್ಷಕ ವೃಂದದ ಜೇಷ್ಠತೆಯಲ್ಲಿ ಮೊದಲನೇ ಕ್ರಮಾಂಕದಲ್ಲಿರುವ ಶ್ರೀಮತಿ ಸಿ.ವಿ. ಸುನೀತಾ ಇವರು ಪರಿಶಿಷ್ಟ ಜಾತಿಗೆ ಸೇರಿದವರಾಗಿದ್ದು, ಸಿ&ಆರ್ ನಿಯಮಗಳ ಪ್ರಕಾರ ಅಗತ್ಯ ವಿದ್ಯಾರ್ಹತೆ ಹೊಂದಿರುವುದಿಲ್ಲ. ಕಾರಣ ಅವರ ನಂತರದ ಸ್ಥಾನದಲ್ಲಿರುವ ಶ್ರೀಮತಿ ಎ.ಕೆ. ಕವಿತಾ, ಅಧೀಕ್ಷಕರು ಇವರನ್ನು ಖಾಲಿ ಇರುವ ಸಹಾಯಕ ಕುಲಸಚಿವರ ಹುದ್ದೆಗೆ ಮುಂಬಡ್ತಿ ನೀಡಲು ಇಲಾಖಾ ಮುಂಬಡ್ತಿ ಸಮಿತಿ ಸಭೆಯು ಸರ್ವಾನುಮತದಿಂದ ಅನುಮೋದಿಸಿತು.
2. 371(ಜೆ) ಅಡಿಯಲ್ಲಿ ಮೀಸಲಾದ ಒಂದು (01) ಹುದ್ದೆಯನ್ನು ಸರ್ಕಾರಿ ಅಧಿಸೂಚನೆ ದಿನಾಂಕ: 06.11.2023 ರ ಪ್ರಕಾರ ಈ ಹುದ್ದೆಗೆ ಸ್ಥಳೀಯ ಅಭ್ಯರ್ಥಿಗಳು ಲಭ್ಯವಿಲ್ಲದೆ ಇರುವುದರಿಂದ ಖಾಲಿ ಇರುವ ಈ ಹುದ್ದೆಯನ್ನು ಮುಂದಿನ ನೇಮಕಾತಿಯವರೆಗೆ ಮುಂದುವರೆಸಿ ನಂತರ ಅದನ್ನು ಮೀಸಲಾತಿಯಿಲ್ಲವೆಂದು ಭಾವಿಸಿ, ಅದನ್ನು ಭರ್ತಿ ಮಾಡಲು ಸ್ಪಷ್ಟಪಡಿಸಿರುವಂತೆ ಅದನ್ನು ಹಾಗೆಯೇ ಮುಂದುವರೆಸಿ ಖಾಲಿ ಇರುವ ಅಧೀಕ್ಷಕರ ಹುದ್ದೆ ಎದುರಿಗೆ ಅರ್ಹತೆ ಹೊಂದಿರುವ ಶ್ರೀ ಡಿ. ವೀರಣ್ಣ, ಸಹಾಯಕರು ಇವರಿಗೆ ಬಡ್ತಿ ನೀಡಲು ಇಲಾಖಾ ಮುಂಬಡ್ತಿ ಸಮಿತಿ ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

ಉಲ್ಲೇಖ(2) ರ ಇಲಾಖಾ ಮುಂಬಡ್ತಿ ಸಮಿತಿಯ ಶಿಫಾರಸ್ಸಿನಂತೆ ಶ್ರೀಮತಿ ಎ.ಕೆ.ಕವಿತಾ ಅವರಿಗೆ ಅಧೀಕ್ಷಕ ಹುದ್ದೆಯಿಂದ ಸಹಾಯಕ ಕುಲಸಚಿವರ ಹುದ್ದೆಯ ರೂ. 52650-1250-53900-1450-62600-1650-72500-1900-83900-2200-97100 ವೇತನ ಶ್ರೇಣಿಯಲ್ಲಿ ಪದೋನ್ನತಿಯನ್ನು ನೀಡಿ ಸ್ಥಾನಪನ್ನಗೊಳಿಸಲಾಗಿದೆ. ಶ್ರೀ ಡಿ. ವೀರಣ್ಣ ಅವರನ್ನು ಸಹಾಯಕ ಹುದ್ದೆಯಿಂದ ಅಧೀಕ್ಷಕ ಹುದ್ದೆಯ ವೇತನ ಶ್ರೇಣಿ ರೂ.43100-83900 ರಲ್ಲಿ ಶ್ರೀಮತಿ ಎ.ಕೆ.ಕವಿತಾ ರವರು ಪದೋನ್ನತಿಯಿಂದ ಖಾಲಿಯಾಗಿರುವ ಹುದ್ದೆಗೆ ಇರುವ ರೋಸ್ಟರ್ ಬಿಂದು-05 UR ಎದುರಿಗೆ ಅಧೀಕ್ಷಕರ ಹುದ್ದೆಗೆ ಪದೋನ್ನತಿಯನ್ನು ನೀಡಿ ಸ್ಥಾನಪನ್ನಗೊಳಿಸಲಾಗಿದೆ.

ಮೇಲ್ಕಂಡಂತೆ ಇಲಾಖಾ ಮುಂಬಡ್ತಿ ಸಮಿತಿ ಶಿಫಾರಸ್ಸಿನಂತೆ ಶ್ರೀಮತಿ ಎ.ಕೆ.ಕವಿತಾ ಅವರಿಗೆ ಅಧೀಕ್ಷಕ ಹುದ್ದೆಯಿಂದ ಸಹಾಯಕ ಕುಲಸಚಿವರ ಹುದ್ದೆಗೆ ಹಾಗೂ ಶ್ರೀ ಡಿ.ವೀರಣ್ಣ ಅವರಿಗೆ ಸಹಾಯಕ ಹುದ್ದೆಯಿಂದ ಅಧೀಕ್ಷಕ ಹುದ್ದೆಗೆ ಮುಂಬಡ್ತಿ ನೀಡಿ ಆದೇಶ ಹೊರಡಿಸಿರುವ ಕ್ರಮಕ್ಕೆ ಸ್ಥಿರೀಕರಣಕ್ಕಾಗಿ ಪ್ರಸ್ತಾವನೆಯನ್ನು ಸಿಂಡಿಕೇಟ್ ಸಭೆಯ ಮುಂದೆ ಮಂಡಿಸಿದೆ.

*ಸಿಂಡಿಕೇಟ್ ತೀರ್ಮಾನ:*

**ಶ್ರೀಮತಿ ಎ. ಕೆ. ಕವಿತಾ ಮತ್ತು ಶ್ರೀ ಡಿ. ವೀರಣ್ಣ ಇಬ್ಬರು ಬೋಧಕೇತರ ಸಿಬ್ಬಂದಿಗಳಿಗೆ ಮುಂಬಡ್ತಿ ನೀಡಿ ಆದೇಶ ಹೊರಡಿಸಿರುವ ಕ್ರಮವನ್ನು ಸ್ಥಿರೀಕರಿಸಲಾಯಿತು.**

ವಿಷಯ ಸಂಖ್ಯೆ: 11

ವಿಷಯ: ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಪರೀಕ್ಷೆಗಳಿಗೆ ಬೇಕಾಗುವ ಖಾಲಿ ಉತ್ತರ ಪತ್ರಿಕೆಗಳನ್ನು ಟೆಂಡರ್ ಮೂಲಕ ಖರೀದಿಸುವ ಬಗ್ಗೆ

***ಪರಾಮರ್ಶಕ ಟಿಪ್ಪಣಿ:***

ನವೆಂಬರ್/ಡಿಸೆಂಬರ್ 2024 ರಲ್ಲಿ 1, 3, 5, 7ನೇ ಸೆಮಿಸ್ಟರ್‌ಗಳ ಸ್ನಾತಕ ಪರೀಕ್ಷೆಗಳು ಹಾಗೂ 1, 3, 5, 7 ಮತ್ತು 9ನೇ ಕೆಲವು ಕೋರ್ಸುಗಳ ಸೆಮಿಸ್ಟರ್‌ಗಳ ಸ್ನಾತಕೋತ್ತರ ಪರೀಕ್ಷೆಗಳು, ಅದರಂತೆಯೇ ಜೂನ್/ಜುಲೈ 2025 ರಲ್ಲಿ ಸ್ನಾತಕ ಕೋರ್ಸುಗಳ 2, 4, 6, 8ನೇ ಸೆಮಿಸ್ಟರ್ ಮತ್ತು ಸ್ನಾತಕೋತ್ತರ ಕೋರ್ಸುಗಳ 2, 4, 6, 8 ಮತ್ತು 10ನೇ ಸೆಮಿಸ್ಟರ್ ಪರೀಕ್ಷೆಗಳು, ಅಕ್ಟೋಬರ್/ನವೆಂಬರ್ 2025 ರಲ್ಲಿ ನಡೆಯುವ 1, 3, 5, 7ನೇ ಸೆಮಿಸ್ಟರ್ ಸ್ನಾತಕ ಮತ್ತು 1, 3, 5, 7 ಮತ್ತು 9ನೇ ಸೆಮಿಸ್ಟರ್ ಸ್ನಾತಕೋತ್ತರ ಕೋರ್ಸುಗಳ ಪರೀಕ್ಷೆಗಳು ಜೊತೆಗೆ ಬಿ.ಎಡ್, ಬಿ.ಪಿ.ಎಡ್ ಮತ್ತು ಕೆಲವು ಪಿ.ಜಿಡಿಪ್ಲೊಮಾ ಹಾಗೂ ಸರ್ಟಿಫಿಕೆಟ್ ಕೋರ್ಸುಗಳ ಪರೀಕ್ಷೆಗಳು ನಡೆಯಲಿವೆ. ಈ ಮುಖ್ಯ ಪರೀಕ್ಷೆಗಳಿಗೆ ಖಾಲಿ ಉತ್ತರ ಪತ್ರಿಕೆಗಳನ್ನು ಟೆಂಡರ್ ಮೂಲಕ ಖರೀದಿಸಬೇಕಿದ್ದು, ವಿವರಗಳು ಈ ಕೆಳಕಂಡಂತೆ ಇರುತ್ತವೆ.

1. ಒಂದು ಪರೀಕ್ಷೆಗೆ ಅಂದಾಜು 6.00 ರಿಂದ 6.50 ಲಕ್ಷ ಉತ್ತರ ಪತ್ರಿಕೆಗಳು ಬೇಕಾಗಿದ್ದು, ಸ್ವಲ್ಪ ಹೆಚ್ಚಿಗೆ ಇರಲಿ ಎಂದು 7.00 ಲಕ್ಷದಂತೆ ಲೆಕ್ಕ ಹಾಕಿ ಪ್ರಸ್ತಾವನೆ ಸಲ್ಲಿಸಿದೆ.
2. ಅಂದಾಜು ಉತ್ತರ ಪತ್ರಿಕೆಗಳ ಸಂಖ್ಯೆ (ಒಟ್ಟು 03 ಪರೀಕ್ಷೆಗಳಿಗೆ) = 21,00,000 (ಇಪ್ಪತ್ತೊಂದು ಲಕ್ಷಗಳು)
3. ಹಾಲಿ ದಾಸ್ತಾನಿನಲ್ಲಿರುವಉತ್ತರ ಪತ್ರಿಕೆಗಳ ಸಂಖ್ಯೆ (-) = 5,00,000 (ಐದು ಲಕ್ಷಗಳು)
4. ಟೆಂಡರ್ ಆಹ್ವಾನಿಸ ಬೇಕಾಗಿರುವ ಉತ್ತರ ಪತ್ರಿಕೆಗಳ ಸಂಖ್ಯೆ= 16,00,000 (ಹದಿನಾರು ಲಕ್ಷಗಳು)
5. ಅಂದಾಜು ವೆಚ್ಚ ರೂ.2,72,00,000/- ಆಗುತ್ತದೆ. (ಈಗ ಖರೀದಿಸುತ್ತಿರುವ ದರದ ಆಧಾರದ ಮೇಲೆ ಒಂದು ಉತ್ತರ ಪತ್ರಿಕೆಗೆ ತಗಲುವ ಅಂದಾಜು ಮೊತ್ತ ರೂ.17/- x 16,00,000) ಲೆಕ್ಕ ಮಾಡಲಾಗಿದೆ.

ಈ ಮೇಲೆ ತಿಳಿಸಿರುವ ಮುಖ್ಯ ಪರೀಕ್ಷೆಗಳಿಗೆ ಖಾಲಿ ಉತ್ತರ ಪತ್ರಿಕೆಗಳನ್ನು ಖರೀದಿಸಲು ಅಂದಾಜು ರೂ. 2,72,00,000/- (ಎರಡು ಕೋಟಿ ಎಪ್ಪತ್ತೆರಡು ಲಕ್ಷ) ವೆಚ್ಚವಾಗಲಿದ್ದು ಟೆಂಡರ್ ಮೂಲಕ ಖರೀದಿಸಲು ಸಿಂಡಿಕೇಟ್ ಒಪ್ಪಿಗೆಗಾಗಿ ಸಿಂಡಿಕೇಟ್ ಸಭೆಯ ಮುಂದೆ ಮಂಡಿಸಲಾಗಿದೆ.

***ಸಿಂಡಿಕೇಟ್ ತೀರ್ಮಾನ:***

**ಕೆ.ಟಿ.ಪಿ.ಪಿ. ಅಧಿನಿಯಮದ ಪ್ರಕಾರ ಟೆಂಡರ್ ಪ್ರಕ್ರಿಯೆಯನ್ನು ಜರುಗಿಸಿ ರೂ. 2,72,00,000/- (ಎರಡು ಕೋಟಿ ಎಪತ್ತೆರಡು ಲಕ್ಷ ರೂಪಾಯಿಗಳು) ಅಂದಾಜು ಮೊತ್ತಕ್ಕೆ ಅಗತ್ಯ ಸಂಖ್ಯೆಯ ಉತ್ತರ ಪತ್ರಿಕೆಗಳನ್ನು ಮುದ್ರಿಸಿ ಖರೀದಿಸಲು ಸಿಂಡಿಕೇಟ್ ಸಭೆ ಅನುಮೋದನೆ ನೀಡಲು ತೀರ್ಮಾನಿಸಿತು.**

ವಿಷಯ ಸಂಖ್ಯೆ: 12

ವಿಷಯ: ಬೆಂಗಳೂರು ನಗರ ವಿಶ್ವವಿದ್ಯಾನಿಲಯದ 2024-25ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ಅನುಮೋದಿಸುವ ಬಗ್ಗೆ.

*ಪರಾಮರ್ಶಕ ಟಿಪ್ಪಣಿ*

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ 2024-25ನೇ ಆರ್ಥಿಕ ಸಾಲಿನ ಆಯವ್ಯಯ ಅಂದಾಜು ಪತ್ರವನ್ನು ಸಿದ್ಧಪಡಿಸಿ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ರ ಅನುಚ್ಛೇದ 48 ಪ್ರಕಾರ ಕರಡು ಆಯವ್ಯಯ ಅಂದಾಜು ಪತ್ರವನ್ನು ದಿನಾಂಕ 26.02.2024 ರಂದು ಜರುಗಲಿರುವ ಹಣಕಾಸು ಸಮಿತಿ ಹಾಗೂ ದಿನಾಂಕ 27.02.2024 ರಂದು ಜರುಗಲಿರುವ ವಿದ್ಯಾವಿಷಯಕ ಪರಿಷತ್ ಸಭೆಗಳು ಪರಿಶೀಲಿಸಿ ಶಿಫಾರಸ್ಸು ಮಾಡಿರುತ್ತವೆ.

**2024-25ನೇ ಸಾಲಿನ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಆಯವ್ಯಯ ಅಂದಾಜು ಪತ್ರದ ಸಾರಾಂಶ**

| | |
|---|---|
| 1. ಅಂದಾಜು ಒಟ್ಟು ಸ್ವೀಕೃತಿಗಳು (Receipts) | ರೂ. 19,841.13 ಲಕ್ಷಗಳು |
| 2. ಅಂದಾಜು ಒಟ್ಟು ಖರ್ಚು-ವೆಚ್ಚಗಳು (Expenditure) | ರೂ. 19,020.98 ಲಕ್ಷಗಳು |
| 3. ಕಾಯ್ದಿರಿಸಿರುವ ನಿಧಿ –(Reserve fund) | ರೂ. 500.00 ಲಕ್ಷಗಳು |
| 4. ಹೆಚ್ಚುವರಿ ಆಯವ್ಯಯ (Surplus) | ರೂ. 320.15 ಲಕ್ಷಗಳು |

ವಿಶ್ವವಿದ್ಯಾನಿಲಯದ 2024-25ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲೆ ಹಣಕಾಸು ಸಮಿತಿ ಮತ್ತು ವಿದ್ಯಾವಿಷಯಕ ಪರಿಷತ್ ಮಾಡಿದ ಶಿಫಾರಸ್ಸುಗಳನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ರ ಅನುಚ್ಛೇದ 48 ಪ್ರಕಾರ ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ.

ದಿನಾಂಕ 26.02.2024 ರಂದು ಜರುಗಿದ ಹಣಕಾಸು ಸಮಿತಿಯ ಶಿಫಾರಸ್ಸು:

ಸುದೀರ್ಘ ಚರ್ಚೆಯ ನಂತರ ವಿಶ್ವವಿದ್ಯಾನಿಲಯದ 2024-25ನೇ ಸಾಲಿನ ಒಟ್ಟು ಸ್ವೀಕೃತಿ ರೂ.198.41 ಕೋಟಿ ಹಾಗೂ ಒಟ್ಟು ವೆಚ್ಚ ರೂ.190.20 ಕೋಟಿಗಳ ಆಯವ್ಯಯ ಅಂದಾಜು ಪತ್ರಿಕೆಗೆ ಹಣಕಾಸು ಸಮಿತಿ ಸಭೆ ಅನುಮೋದಿಸಿ ಪ್ರಾಧಿಕಾರಗಳಿಗೆ ಶಿಫಾರಸ್ಸು ಮಾಡಲು ಹಣಕಾಸು ಸಮಿತಿ ಒಪ್ಪಿಗೆಯನ್ನು ನೀಡಿತು.

ವಿದ್ಯಾವಿಷಯಕ ಪರಿಷತ್ ಶಿಫಾರಸ್ಸು:

ಹಣಕಾಸು ಸಮಿತಿ ಶಿಫಾರಸ್ಸು ಮಾಡಿರುವ 2024-25ನೇ ಸಾಲಿನ ಆಯವ್ಯಯ ಅಂದಾಜುಗಳಿಗೆ ವಿದ್ಯಾವಿಷಯಕ ಪರಿಷತ್ ಸಭೆ ಸರ್ವಾನುಮತದ ಅನುಮೋದನೆ ನೀಡಿ ಸಿಂಡಿಕೇಟ್ ಸಭೆಗೆ ಶಿಫಾರಸ್ಸು ಮಾಡಲು ತೀರ್ಮಾನಿಸಿತು.

ವಿವರಣೆ:

ವಿತ್ತಾಧಿಕಾರಿಗಳು ಸಭೆಗೆ ಆಗಮಿಸಿ 2024–25ನೇ ಸಾಲಿನ ಆಯವ್ಯಯ ಅಂದಾಜು ಪತ್ರಿಕೆಯ ವಿವರಗಳನ್ನು ಒದಗಿಸಿದರು. ಆಯವ್ಯಯಗಳಲ್ಲಿ ಅಂದಾಜಿಸಲಾದ ಪ್ರಮುಖ ಸ್ವೀಕೃತಿ ಹಾಗೂ ವೆಚ್ಚಗಳ ಅಂಕಿ ಅಂಶಗಳನ್ನು ವಿವರಿಸಿ ನಿರೀಕ್ಷಿಸಲಾದ ಅನುದಾನವನ್ನು ಸರ್ಕಾರ ನೀಡುವ ಸಾಧ್ಯತೆ ಕಡಿಮೆ ಎಂದು ತಿಳಿಸಿ ಈಗಾಗಲೇ ಪ್ರಕಟಿಸಲಾದ ರಾಜ್ಯ ಸರ್ಕಾರದ ಆಯವ್ಯಯದಲ್ಲಿ ನಮ್ಮ ವಿಶ್ವವಿದ್ಯಾನಿಲಯಕ್ಕೆ ರೂ.628.77 ಕೋಟಿಗಳ ಅನುದಾನ ಪ್ರಸ್ತಾಪಿಸಿದ್ದು, ಇದರಲ್ಲಿ ಖಾಯಂ ಸಿಬ್ಬಂದಿಗಳ ವೇತನಾನುದಾನ ಮಾತ್ರ ಒಳಗೊಂಡಿದೆ ಎಂದು ತಿಳಿಸಿದರು. ಸದಸ್ಯರು ಆಯವ್ಯಯ ಅಂದಾಜಿನ ಮೇಲೆ ಕೋರಿದ ಮಾಹಿತಿಯನ್ನು ತಿಳಿಸಿದ ನಂತರ ಕುಲಪತಿಗಳು ಆಯವ್ಯಯಕ್ಕೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳನ್ನು ನೀಡಿದರು.

I. ಈ ವರ್ಷದ ಸ್ವೀಕೃತಿಗಳು ರೂ. 177.66 ಕೋಟಿಗಳಾಗಿದ್ದು, ಅಂದಾಜಿಗಿಂತ 1.35% ಹೆಚ್ಚಳವಾಗಿರುವುದಾಗಿ ತಿಳಿಸಿ ವೆಚ್ಚಗಳು ಅಂದಾಜಿಗಿಂತ ಶೇ. 40% ಅದರೆ ರೂ. 73.98 ಕೋಟಿಗಳಾಗಿದ್ದು, ಹಲವಾರು ಟೆಂಡರ್ ಪ್ರಕ್ರಿಯೆಗಳು ಚಾಲ್ತಿಯಲ್ಲಿ ಇರುವುದರಿಂದ ವೆಚ್ಚಗಳು ಅಂದಾಜಿಗಿಂತ ಕಡಿಮೆಯಾಗಿರುತ್ತವೆ ಎಂದು ತಿಳಿಸಿದರು.

II. 2024–25ನೇ ಸಾಲಿನಿಂದ ಕಾಯ್ದಿರಿಸುವ ನಿಧಿ Reserve Fund ರೂಪಿಸಲು ನಿರ್ಧರಿಸಲಾಗಿದೆ ಎಂದು ತಿಳಿಸಿ ನಿವೃತ್ತಿ ವೇತನ ಪಾವತಿಗಾಗಿ ಪ್ರತ್ಯೇಕವಾಗಿ ರೂ. 2.5 ಕೋಟಿಗಳು ಕಾಯ್ದಿರಿಸಲಾಗಿದೆ ಎಂದು ತಿಳಿಸಿದರು.

III. 2024–25ನೇ ಸಾಲಿನ ಆಯವ್ಯಯದಲ್ಲಿ ವಿಶ್ವವಿದ್ಯಾನಿಲಯ ಕೈಗೊಳ್ಳಬೇಕಾದ ಅಭಿವೃದ್ಧಿ ಚಟುವಟಿಕೆಗಳನ್ನು ಗಮನದಲ್ಲಿಟ್ಟುಕೊಂಡು ಅಂದಾಜು ಪತ್ರ ಸಿದ್ಧಪಡಿಸಲಾಗಿದೆ. ಅಸ್ತಿತ್ವದಲ್ಲಿರುವ ಮತ್ತು ಹೊಸದಾಗಿ ಪ್ರಾರಂಭಿಸಿರುವ ವಿಭಾಗಗಳಿಗೆ ಭೌತಿಕ ಮೂಲಭೂತ ಸೌಲಭ್ಯ, ಒದಗಿಸುವುದು, ಸ್ನಾತಕ ಮೂರನೇ ವರ್ಷದ ವಿದ್ಯಾರ್ಥಿಗಳಿಗೆ ಹೆಚ್ಚುವರಿ ಕೋಣೆಗಳನ್ನು ಒಗಿಸುವದು, ಪ್ರಯೋಗಾಲಯ ಉಪಕರಣಗಳು, ಗ್ರಂಥಾಲಯದ ಡಿಜಟಲೀಕರಣ, ಕ್ಯಾಂಪಸ್ ಉದ್ಯಾವನ ನಿರ್ವಹಣೆ, ರಕ್ಷಣೆ, ಹೊಸ ವಿಭಾಗಗಳಿಗೆ ಅಗತ್ಯವಾದ ಹೆಚ್ಚುವರಿ ಸಿಬ್ಬಂದಿಗಳು, ಕ್ರೀಡಾಂಗಣ ಮತ್ತು ಈಜುಕೊಳಗಳಲ್ಲಿ ನಿರ್ಮಿಸಲಾದ ಆಧುನಿಕ ಸೌಲಭ್ಯಗಳ ನಿರ್ವಹಣೆಗೆ ಮತ್ತು ತರಬೇತಿಗೆ ಸಿಬ್ಬಂದಿಗಳು, ದೈಹಿಕ ಶಿಕ್ಷಣ ಯೋಗ ಮತ್ತು ಕ್ರೀಡಾ ವಿಜ್ಞಾನ ಕುರಿತಂತೆ ಹೊಸ ವಿಭಾಗ ಪ್ರಾರಂಭಿಸಿದ್ದು ಅದಕ್ಕಾಗಿ ಸೌಲಭ್ಯಗಳ ಕಾನೂನು ಕಾಲೇಜು ಪುನಃಶ್ಚೇತನ, ಸ್ನಾತಕೋತ್ತರ ಶಿಕ್ಷಣ ವಿಭಾಗದ ಪ್ರಾರಂಭ, ಎಂ.ಬಿ.ಎ ಕೋರ್ಸಿಗಾಗಿ ಒಂದು ಹೆಚ್ಚುವರಿ ವಿಭಾಗ ಪ್ರಾರಂಭದ ಜೊತೆಗೆ ಈಗಾಗಲೇ ಸರ್ಕಾರ ಅನುಮತಿಸಿದ ಕೋರ್ಸುಗಳನ್ನು ಸಹ ಪ್ರಾರಂಭಿಸುವ ಅಗತ್ಯವನ್ನು ಗಮನದಲ್ಲಿಟುಕೊಂಡು ಆಯವ್ಯಯ ಅಂದಾಜು ಸಿದ್ಧಪಡಿಸಲಾಗಿದೆ.

IV. ವಿಶ್ವವಿದ್ಯಾನಿಲಯಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಗಣನೀಯವಾಗಿ ಏರಿಕೆಯಾಗಿರುವುದರಿಂದ ಆದಾಯದಲ್ಲಿಯೂ ಸಹ ಏರಿಕೆಯಾಗಿರುವುದನ್ನು ಗಮನಿಸಬಹುದಾಗಿದೆ. ಇವುಗಳಿಗೆ ಪೂರಕವಾದ ಸೌಲಭ್ಯಗಳನ್ನು ಒದಗಿಸಬೇಕಾಗಿದೆ.

V. ಕ್ಯಾಂಪಸ್ ನವೀಕರಣ ಯೋಜನೆಯಲ್ಲಿ ಸೇರಿಕೊಳ್ಳದ ಪರೀಕ್ಷಾ ವಿಭಾಗದ ಕಟ್ಟಡ, ಯು.ಜಿ.ಸಿ, ಕಛೇರಿ ಇದ್ದ ಕಟ್ಟಡ, ಸಂವಹನ ವಿಭಾಗ ಮತ್ತು ಹಿಂದಿನ ಕಾನೂನು ಕಾಲೇಜು ಕಟ್ಟಡ ಸಹ ತುಂಬಾ ಹಳೆಯದಾಗಿದ್ದು, ಅವುಗಳನ್ನು ನವೀಕರಣ ಮಾಡುವ ಯೋಜನೆಗೆ ಚಾಲನೆ ಕೊಟ್ಟಿದ್ದು, ಬರುವ

ಹಣಕಾಸು ವರ್ಷದಲ್ಲಿ ಈ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಎಲ್ಲ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ತಿಳಿಸಿದರು.

VI. ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಆಯವ್ಯದಲ್ಲಿ ಸರ್ಕಾರದ ವೇತನಾನುದಾನಗಳನ್ನು ರೂ. 981.93 ಲಕ್ಷಗಳೆಂದು ಅಂದಾಜಿಸಲಾಗಿದ್ದು, ಈಗಾಗಲೇ ರಾಜ್ಯದ ಆಯವ್ಯಯ ಮಂಡನೆ ಆಗಿದ್ದು ಇದರಲ್ಲಿ ವೇತನ ಪಾವತಿಗಾಗಿ ಮಾತ್ರ ರೂ. 628.77 ಲಕ್ಷಗಳು ಹಂಚಿಕೆ ಮಾಡಲಾಗಿರುತ್ತದೆ. ಅದರಂತೆ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಆಯವ್ಯಯದ ಅಂಕಿಅಂಶಗಳನ್ನು ಸರಿಪಡಿಸಬೇಕಾಗಿದೆ.

VII. Capital ಬಂಡವಾಳ ವೆಚ್ಚಗಳಲ್ಲಿ Campus Re-development Phase - 1 & Phase -2 ಗಳಿಗೆ ಸೂಕ್ತ ಮಾರ್ಗ ಸೂಚಿಗಳನ್ನು ನಿರ್ದೇಶಿಸಿಕೊಳ್ಳಲು ಹಣಕಾಸು ಸಮಿತಿ ಸೂಚಿಸಿರುತ್ತದೆ.

VIII. ಪರೀಕ್ಷಾ ಪ್ರಕ್ರಿಯೆ ನಿರ್ವಹಣೆ ಹಾಗೂ E-Governance ವೆಚ್ಚಗಳಿಗೆ ಸಂಬಂಧಪಟ್ಟಂತೆ 2024–25ನೇ ಸಾಲಿಗೆ ರೂ.6.00 ಕೋಟಿಗಳನ್ನು ನಿಗದಿಪಡಿಸಿದ್ದು, ಇದಕ್ಕೆ ಪರೀಕ್ಷಾ ಸುಧಾರಣೆಗಳಿಗೆ ಮೀಸಲಿರಿಸಿದ ರೂ.2.00 ಕೋಟಿ ಮೊತ್ತವನ್ನು ರೂ.1.00 ಕೋಟಿಗೆ ಸೀಮಿತಗೊಳಿಸಿ ಉಳಿದ ಒಂದು ಕೋಟಿಯನ್ನು ಪರೀಕ್ಷಾ ಪ್ರಕ್ರಿಯೆ ನಿರ್ವಹಣೆ ಹಾಗೂ E-Governance ಶೀರ್ಷಿಕೆಯಲ್ಲಿ ಹೆಚ್ಚಿಸಿಕೊಂಡು ಆಯವ್ಯಯವನ್ನು ಪರಿಷ್ಕರಿಸಲು ಹಣಕಾಸು ಸಮಿತಿ ಸೂಚಿಸಿರುತ್ತದೆ.

IX. 2024–25ನೇ ಸಾಲಿನಲ್ಲಿ ಕಾಯ್ದಿರಿಸಿರುವ ನಿಧಿಯ ಸ್ಥಾಪನೆಯನ್ನು ಹಾಗೂ ಪಿಂಚಣಿ ಸೌಲಭ್ಯಗಳಿಗಾಗಿ ರೂ.2.50 ಕೋಟಿಗಳನ್ನು ಅಂದಾಜುಗೊಳಿಸಿರುವುದು ಉತ್ತಮವಾಗಿದೆ ಎಂದು ತಿಳಿಸಿರುತ್ತಾರೆ.

X. ಮೇಲಿನ ಎಲ್ಲಾ ಚಟುವಟಿಕೆಗಳನ್ನು ವಿಶ್ವವಿದ್ಯಾನಿಲಯದ ಆತಂರಿಕ ಸಂಪನ್ಮೂಲದಿಂದ ಭರಿಸಲಾಗುತ್ತಿದೆ. ಸರ್ಕಾರದಿಂದ ಖಾಯಂ ಸಿಬ್ಬಂದಿಗಳ ವೇತನ ಹೊರತುಪಡಿಸಿ ಬೇರೆ ಅನುದಾನ ಬರುವ ಸಾಧ್ಯತೆ ಇಲ್ಲವೆಂದು ಸಭೆಗೆ ತಿಳಿಸಿದರು.

XI. ಸರ್ಕಾರದ ನಿರ್ದೇಶನದ ಮೇಲೆ ಪ್ರಾರಂಭಿಸಲಾದ ಘಟಕ ಮಹಿಳಾ ಮಹಾವಿದ್ಯಾಲಯಕ್ಕೆ ಹುದ್ದೆಗಳ ಸೃಜನೆಗಾಗಿ ಹಾಗೂ ಭೌತಿಕ ಸೌಲಭ್ಯಗಳಿಗೆ ರೂ. 45.00 ಕೋಟಿಗಳ ಪ್ರಸ್ತಾವನೆ ಸರ್ಕಾರಕ್ಕೆ ಸಲ್ಲಿಸಿದ್ದರೂ – ಅದಕ್ಕೆ ಸೂಕ್ತ ಸ್ಪಂದನೆ ದೊರಕಿಲ್ಲವೆಂದು ಹೇಳಿದರು.

XII. ವಿಶ್ವವಿದ್ಯಾನಿಲಯದ ಪುನರುಜ್ಜೀವನ, ಹೊಸ ಕಟ್ಟಡ ನಿರ್ಮಾಣ ಹಾಗೂ ಕ್ರೀಡಾ ಸಮುಚ್ಚಯ /ಸೌಕರ್ಯಗಳ ನಿರ್ವಹಣೆಗೆ, ಬೋಧಕ/ ಬೋಧಕೇತರ /ತಾಂತ್ರಿಕ ಸಿಬ್ಬಂದಿಗಳ ಅಗತ್ಯವಿದೆ. ವಿಶ್ವವಿದ್ಯಾನಿಲಯದಲ್ಲಿ ಪ್ರಾರಂಭಿಸಿ ಸ್ನಾತಕ ಕೋರ್ಸುಗಳಿಗೆ ಬೋಧಕ ಸಿಬ್ಬಂದಿಗಳ ಅಗತ್ಯವಿದೆ. ಈ ಎಲ್ಲ ವೆಚ್ಚಗಳನ್ನು ಪ್ರಸ್ತುತ ವಿಶ್ವವಿದ್ಯಾನಿಲಯದ ಅಂತರಿಕ ಸಂಪನ್ಮೂಲಗಳಿಂದ ಭರಿಸಲಾಗುತ್ತದೆ ಎಂದು ತಿಳಿಸಿದರು.

XIII. ಈ ಎಲ್ಲ ಅಡೆತಡೆಗಳ ಮಧ್ಯೆ ವಿಶ್ವವಿದ್ಯಾನಿಲಯದ ಶೈಕ್ಷಣಿಕವಾಗಿ ಮತ್ತು ಭೌತಿಕವಾಗಿ ಉತ್ತಮ ಅಭಿವೃದ್ಧಿ ಸಾಧಿಸಿದೆ. ಎರಡು ಅಂತರಾಷ್ಟ್ರೀಯ ವಿಚಾರ ಸಮ್ಮೇಳನಗಳನ್ನು ಆಯೋಜಿಸುವುದು ಎರಡು ಅಂತರಾಷ್ಟ್ರೀಯ ಮಟ್ಟದ ಸಂಶೋಧನಾ ಯೋಜನೆಗಳಲ್ಲಿ ಪಾಲ್ಗೊಳ್ಳುವುದು ವಿದೇಶಿ ವಿಶ್ವವಿದ್ಯಾಲಯಗಳೊಂದಿಗೆ ಮತ್ತು ಉದ್ಯಮ ಸಂಸ್ಥೆಗಳೊಂದಿಗೆ ಒಡಂಬಡಿಕೆ, ವಿದೇಶಿ ಭಾಷೆಗಳನ್ನು ಬೋಧಿಸಲು ಜಪಾನ್, ಸ್ಪೇನ್, ಜರ್ಮನಿ ದೇಶಗಳ ಸರ್ಕಾರಗಳು ಸಂಬಳ ನೀಡಿ ಭಾಷಾ ಶಿಕ್ಷಕರನ್ನು ನಿಯೋಜಿಸಿರುವುದು ಸಹ ಉಲ್ಲೇಖಿಸಿಬಹುದಾದ ಸಾಧನೆಗಳು ಎಂದು ತಿಳಿಸಿದರು.

ಸದಸ್ಯರಾದ ಶ್ರೀ ರಂಗಪ್ಪನವರು ಮತ್ತು ಶ್ರೀ ರಮೇಶ್ ನಾರಾಯಣರಾವ್ ಹಾಗೂ ಇತರರು ಚರ್ಚೆಯಲ್ಲಿ ಭಾಗವಹಿಸಿದರು ವಿಶ್ವವಿದ್ಯಾನಿಲಯ ಸಂಶೋಧನೆಗಳಿಗೆ ಹೆಚ್ಚಿನ ಒತ್ತು ಕೊಡಬೇಕು ಎಂದು ಸಲಹೆ ನೀಡಿದರು. ವಿಶ್ವವಿದ್ಯಾನಿಲಯದಲ್ಲಿ ಶಿಕ್ಷಣ, ದೈಹಿಕ ಶಿಕ್ಷಣ, ಉದ್ಯೋಗ ಆಧಾರಿತ ಕೋರ್ಸುಗಳನ್ನು ಹೆಚ್ಚು ಹೆಚ್ಚಾಗಿ

ಪ್ರಾರಂಭಿಸಬೇಕೆಂದು Arts & Aesthetics ಅಡಿಯಲ್ಲಿ Visual Art ಸಂಬಂಧಿಸಿದ P.G. Diploma in Design ಪ್ರಾರಂಭಿಸಲು, ಹೊಸದಾಗಿ ನಿರ್ಮಾಣಗೊಂಡಿರುವ ಮಹಾದ್ವಾರಗಳ ಹತ್ತಿರ ವಿವಿಧ ಕಟ್ಟಡ ಕಛೇರಿಗಳ ದಾರಿತೋರಿಸುವ ರಸ್ತೆ ನಕ್ಷೆಗಳನ್ನು ಮತ್ತು ಪ್ರತಿಯೊಂದು ಕಟ್ಟಡದ ಮುಂದೆ ಅದರಲ್ಲಿರುವ ವಿಭಾಗಗಳ ಹೆಸರುಗಳನ್ನು ಪ್ರದರ್ಶಿಸುವ ಫಲಕಗಳು ಅಳವಡಿಸಬೇಕು ಎಂದು ಸಲಹೆ ನೀಡಿದರು.

ಕುಲಪತಿಗಳು ಅಂತಿಮವಾಗಿ ಸದಸ್ಯರ ಅನಿಸಿಕೆ ಒತ್ತಾಸೆಗಳಿಗೆ ಸ್ಪಂದಿಸಿ ವಿಶ್ವವಿದ್ಯಾನಿಲಯದಲ್ಲಿ ಪ್ರಸ್ತುತ ಸನ್ನಿವೇಶಕ್ಕೆ ಅಗತ್ಯವಾದ ಉದ್ಯೋಗ ಆಧಾರಿತ ಕೋರ್ಸು, ಡಿಪ್ಲೋಮ ಕೋರ್ಸುಗಳನ್ನು ಪ್ರಾರಂಭಿಸಲು ಕ್ರಮವಹಿಸಲಾಗುವುದು ಹಾಗೆಯೆ ದೈಹಿಕ ಶಿಕ್ಷಣ, ಕ್ರೀಡಾ ವಿಜ್ಞಾನ, ಶಿಕ್ಷಣ, ಡಿಸೈನ್ ಕೋರ್ಸುಗಳನ್ನು ಪ್ರಾರಂಭಿಸಲು ಸಹ ಪ್ರಯತ್ನಿಸಲಾಗುವುದು ಎಂದು ತಿಳಿಸಿದರು.

ಸಂಶೋಧನೆಗಳಿಗೆ ಅಗತ್ಯವಾದ ಮೂಲಭೂತ ಸೌಕರ್ಯ, ಪ್ರಯೋಗಾಲಯ, ಗ್ರಂಥಾಲಯದಲ್ಲಿ ಆಕರ ಗ್ರಂಥಗಳನ್ನು / ವಿಷಯವಾರು ವೈಜ್ಞಾನಿಕ ಮತ್ತು ಜರ್ನಲ್‌ಗಳನ್ನು ಒದಗಿಸಲಾಗಿದೆ. ಖಾಯಂ ಬೋಧಕರ ಕೊರತೆಯಿಂದ ಸಾಕಷ್ಟು ಪ್ರಮಾಣದಲ್ಲಿ ಸಂಶೋಧನೆಗಳು ಜರುಗುತ್ತಿಲ್ಲ. ಅತಿಥಿ ಉಪನ್ಯಾಸಕರು ಸಹ ಸಂಶೋಧನೆಯಲ್ಲಿ ಪಾಲ್ಗೊಳ್ಳಬಹುದು ಅವರು ಕೂಡ ಲೇಖನಗಳನ್ನು ಬರೆದು ಪ್ರಕಟಿಸಬಹುದು ಇದಕ್ಕಾಗಿ ಕೂಡ ಅಗತ್ಯ ಸೌಲಭ್ಯಗಳನ್ನು ಒದಗಿಸಲು ಪ್ರಯತ್ನಿಸಲಾಗುವುದು ಎಂದು ಹೇಳಿದರು. ಹಿರಿಯ ಪ್ರಾಧ್ಯಾಪಕರು ಸಹ ಇದನ್ನು ಗಂಭಿರವಾಗಿ ಪರಿಗಣಿಸಿ – ಯುವ ಅಧ್ಯಾಪಕರನ್ನು ಸಂಶೋಧನೆಗೆ ಮತ್ತು ಸಂಶೋಧನಾ ಲೇಖನಗಳನ್ನು ಬರೆಯುವಲ್ಲಿ ಪ್ರೋತ್ಸಾಹಿಸಬೇಕೆಂದು ತಿಳಿಸಿದರು.

***ಸಿಂಡಿಕೇಟ್ ತೀರ್ಮಾನ:***

**ಸುದೀರ್ಘ ಚರ್ಚೆಯ ನಂತರ ಹಣಕಾಸು ಸಮಿತಿ ಹಾಗೂ ವಿದ್ಯಾವಿಷಯಕ ಪರಿಷತ್ ಸಭೆಗಳು ಪರಿಗಣಿಸಿ ಶಿಫಾರಸ್ಸು ಮಾಡಿರುವ 2024–25ನೇ ಸಾಲಿನ ಆಯವ್ಯಯಗಳ ಅಂದಾಜು ಪತ್ರಕ್ಕೆ ಸಿಂಡಿಕೇಟ್ ಸಭೆ ಅನುಮೋದನೆ ನೀಡಲು ತೀರ್ಮಾನಿಸಿತು.**

**ವಿಷಯಸಂಖ್ಯೆ: 13**

ವಿಷಯ: 2020–21 ಮತ್ತು 2021–22ನೇ ಸಾಲಿನ ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕಪರಿಶೋಧನಾ ವರದಿಗಳ ಮೇಲೆ ಸಿದ್ಧಪಡಿಸಿದ ಅನುಪಾಲನಾ ವರದಿಗಳ ಪರಿಶೀಲನೆ ಹಾಗೂ ಅನುಮೋದನೆ ಕುರಿತು.

***ಪರಾಮರ್ಶಕ ಟಿಪ್ಪಣಿ:***

ಬೆಂಗಳೂರು ನಗರ ವಿಶ್ವವಿದ್ಯಾನಿಲಯ 2017ರಲ್ಲಿ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ–2000ಕ್ಕೆ ತಿದ್ದುಪಡಿ ತರುವ ಮೂಲಕ ಅಸ್ತಿತ್ವಕ್ಕೆ ಬಂದಿದ್ದು, 2018–19ನೇ ಸಾಲಿನಿಂದ ಶೈಕ್ಷಣಿಕ ಚಟುವಟಿಕೆಗಳನ್ನು ಪ್ರಾರಂಭಿಸಲಾಗಿದೆ. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ–2000 ರ

ಪ್ರಕರಣ 47(3) ರ ಪ್ರಕಾರ ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕಪತ್ರಗಳ ಲೆಕ್ಕಪರಿಶೋಧನೆಯನ್ನು, ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕ ಪತ್ರಗಳ ಇಲಾಖೆಯ ಪ್ರಧಾನ ನಿರ್ದೇಶಕರು ನಿರ್ವಹಿಸಿ ವರದಿಯನ್ನು ಬಿಡುಗಡೆ ಮಾಡಬೇಕಾಗುತ್ತದೆ. ಅದರಂತೆ, 2020-21 ಮತ್ತು 2021-22ನೇ ಸಾಲಿನ ಲೆಕ್ಕಪತ್ರಗಳ ಪರಿಶೀಲನೆಯನ್ನು ಕೈಗೊಂಡು ದಿನಾಂಕ 04.07.2023 ಮತ್ತು 07.10.2023 ರಂದು ವರದಿಯನ್ನು ಬಿಡುಗಡೆ ಮಾಡಿದ್ದಾರೆ. ಸದರಿ ವರದಿಯ ಕಂಡಿಕೆಗಳಿಗೆ ವಿವಿಧ ವಿಭಾಗಗಳಿಂದ ಮಾಹಿತಿ ಪಡೆದು ಅವುಗಳನ್ನು ಕ್ರೋಢೀಕರಿಸಿ ಅನುಪಾಲನಾ ವರದಿಯನ್ನು ಸಿದ್ಧಪಡಿಸಲಾಗಿದೆ.

ರಾಜ್ಯ ಲೆಕ್ಕಪರಿಶೋಧನೆ ಹಾಗೂ ಲೆಕ್ಕಪತ್ರಗಳ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳ ಪತ್ರ ಸಂ. ರಾಲೆಪ/ಲೆಪವಿ/03/24/ಇತರೆ/2021-22/85 ದಿನಾಂಕ 10.04.2023ರ ಮತ್ತು ಉನ್ನತ ಶಿಕ್ಷಣ ಇಲಾಖೆಯ ಪತ್ರ ಸಂ.ಶಿಇ/83/ಈಎಫ್‌ಬಿ/2023 ದಿನಾಂಕ 29-05-2023 ರ ಪ್ರಕಾರ ಬಾಕಿ ಇರುವ ಲೆಕ್ಕ ಪರಿಶೋಧನಾ ವರದಿಯ ಕಂಡಿಕೆಗಳ ಕುರಿತು, ಕಾಲಕಾಲಕ್ಕೆ ಚಾಲ್ತಿಯಲ್ಲಿರುವ ಆದೇಶಗಳನುಸಾರ ಕ್ರಮವಹಿಸಲು ಕುಲಪತಿಗಳ ಅಧ್ಯಕ್ಷತೆಯಲ್ಲಿ ಅಡಹಾಕ್ ಸಮಿತಿಗಳನ್ನು ರಚಿಸಿ, ಸಮಿತಿಯ ಶಿಫಾರಸ್ಸುಗಳಿಗೆ ಹಣಕಾಸು ಸಮಿತಿ ಮತ್ತು ಸಿಂಡಿಕೇಟ್ ಸಭೆಗಳ ಅನುಮೋದನೆ ಪಡೆದು ಲೆಕ್ಕಪರಿಶೋಧನಾ ವರದಿಯ ಕಂಡಿಕೆಗಳ ತೀರುವಳಿಗೆ ಅವಕಾಶ ಕಲ್ಪಿಸಲಾಗಿದೆ. ಅದರಂತೆ, ಬಾಕಿ ಇರುವ ಲೆಕ್ಕಪರಿಶೋಧನಾ ಕಂಡಿಕೆಗಳ ತೀರುವಳಿ ಕುರಿತು ಕ್ರಮವಹಿಸಲಾಗುವುದು.

ವಿಶ್ವವಿದ್ಯಾನಿಲಯದ 2020-21 ಮತ್ತು 2021-22ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿಗೆ ಅನುಪಾಲನಾ ವರದಿ ಹಾಗೂ ಅನುಬಂಧಗಳನ್ನು ದಿನಾಂಕ 26.02.2024 ಜರುಗುವ ಹಣಕಾಸು ಸಮಿತಿ ಸಭೆ ಮತ್ತು 27.02.2024 ರಂದು ಜರುಗುವ ವಿದ್ಯಾವಿಷಯಕ ಸಭೆಯ ತೀರ್ಮಾನಗಳು ಕೆಳಗಿನಂತಿವೆ:

> ಹಣಕಾಸು ಸಮಿತಿ: 2020-21 ಹಾಗೂ 2021-22ನೇ ಸಾಲಿನ ವಾರ್ಷಿಕ ಲೆಕ್ಕ ಪರಿಶೋಧನಾ ವರದಿಗಳ ಮೇಲೆ ಸಿದ್ಧಪಡಿಸಿದ ಅನುಪಾಲನಾ ವರದಿಗಳನ್ನು ಪರಿಶೀಲಿಸಿ ಸರ್ವಾನುಮತದ ಅನುಮೋದನೆ ನೀಡಿ ಪ್ರಾಧಿಕಾರಗಳಿಗೆ ಶಿಫಾರಸ್ಸು ಮಾಡಲು ಹಣಕಾಸು ಸಮಿತಿ ಒಪ್ಪಿಗೆ ನೀಡಿತು.
>
> ವಿದ್ಯಾವಿಷಯಕ ಪರಿಷತ್ ಸಭೆ: ಹಣಕಾಸು ಸಮಿತಿ ಪರಿಶೀಲಿಸಿ ಶಿಫಾರಸ್ಸು ಮಾಡಿರುವ 2020-21 ಹಾಗೂ 2021-22ನೇ ಸಾಲಿನ ವಾರ್ಷಿಕ ಲೆಕ್ಕ ಪರಿಶೋಧನಾ ವರದಿಯ ಅನುಪಾಲನಾ ವರದಿಗಳಿಗೆ ಅನುಮೋದನೆ ನೀಡಿ ಸಿಂಡಿಕೇಟ್ ಸಭೆಗೆ ಶಿಫಾರಸ್ಸು ಮಾಡಲು ವಿದ್ಯಾವಿಷಯಕ ಪರಿಷತ್ ಸಭೆ ತೀರ್ಮಾನಿಸಿತು.

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ-2000ರ ಪ್ರಕರಣ 47(4) ರ ಪ್ರಕಾರ ವಿಶ್ವವಿದ್ಯಾನಿಲಯದ 2020-21 ಮತ್ತು 2021-22ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿಗೆ ಅನುಪಾಲನಾ ವರದಿ ಹಾಗೂ ಅನುಬಂಧಗಳನ್ನು ಸಿಂಡಿಕೇಟ್ ಸಭೆಯ ಪರಿಶೀಲನೆ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

*ಸಿಂಡಿಕೇಟ್ ತೀರ್ಮಾನ:*

**2020-21 ಮತ್ತು 2021-22ನೇ ಸಾಲಿನ ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕ ಪರಿಶೋಧನಾ ವರದಿಗಳ ಮೇಲೆ ಸಿದ್ಧಪಡಿಸಿದ ಅನಪಾಲನಾ ವರದಿಗಳ ಮೇಲೆ ಹಣಕಾಸು ಸಮಿತಿ ಹಾಗೂ ವಿದ್ಯಾವಿಷಯಕ ಪರಿಷತ್ ಸಭೆಗಳ ಶಿಫಾರಸ್ಸುಗಳನ್ನು ಪರಿಗಣಿಸಿ ಒಪ್ಪಿಗೆ ಸೂಚಿಸಲು ಸಿಂಡಿಕೇಟ್ ಸಭೆ ತೀರ್ಮಾನಿಸಿತು.**

ವಿಶ್ವವಿದ್ಯಾನಿಲಯದ ವಿತ್ತಾಧಿಕಾರಿಗಳಾದ ಶ್ರೀಮತಿ ಎಂ. ವಿ. ವಿಜಯಲಕ್ಷ್ಮಿಯವರು ಅತ್ಯಂತ ಕಡಿಮೆ ಅವಧಿಯಲ್ಲಿ ಆಯವ್ಯಯ ಅಂದಾಜು ಪತ್ರ ಮತ್ತು ಲೆಕ್ಕ ಪರಿಶೋಧನಾ ವರದಿಗಳಿಗೆ ಅನುಪಾಲನಾ ವರದಿಗಳನ್ನು ಸಿದ್ಧಪಡಿಸಿರುವುದಕ್ಕೆ ಸಭೆ ಅಭಿನಂದನೆಗಳನ್ನು ಸಲ್ಲಿಸಿತು.

**ವಿಷಯ ಸಂಖ್ಯೆ: 14**

Sub: Invitation to Prof. Lingaraja Gandhi, Vice-Chancellor, Bengaluru City University to visit the Wolverhampton University United Kingdom as a Visiting Research Scholar for the ongoing Project 'Sustainable Smart Cities.."

Ref: Letter of Pro-Vice-Chacellor of the University of Wolverhampton-UK No visiting Scholar Scheme/2024/001, dated.25.01.2024

***REFERENCE NOTE*:**

Pro-Vice-Chancellor of University of Wolverhampton, - United Kingdom has invited Prof. Lingaraja Gandhi, Vice-Chancellor, BCU to visit as a '**distinguished Visiting Scholar**' with a grant of €5000 GBP to meet all expenses of the visit including travel, subsistence and stay to share his expertise in the ongoing Research Project "Sustainable SMART Cities" from 25th March, 2024 to 29th March, 2024 (excluding journey period).

Prof. Lingaraja Gandhi, Vice-Chancellor has been associated with the Research Project of "Sustainable Smart Cities with crises, lessons from a global epidemic." As a distinguished expert, Prof. Gandhi visited the University of Wolverhampton for 5 days, from 17.7.2023 to 21.07.2023 and shared his expertise and knowledge. A Memorandum of Understanding was also signed between the two Universities for undertaking research, extension, joint Seminars, Workshops, Webinars, apprenticeship, internship and exchange programmes. A "Visiting Scholar's Report" containing the academic/Research activities undertaken during the visit was prepared and submitted to the Hon'ble Chancellor. The progress of the Research Project has culminated in the publication of Research Articles and Conference papers.

Both the Universities in association with TERI-Bengaluru (The Energy Resources Institute) and Govt. of Karnataka have organised an International Workshop on "Delivering Digital Health Strategies: Ayushman Bharath Digital Mission" on 11th August, 2023, bringing together Industry, Academia and Government. The International Workshop was well received by the Industry and academia. A team of academics from Wolverhampton University has visited Bengaluru City University and interacted with the students and faculty members 16th and 17th August, 2023. The team has also visited selected affiliated colleges on 18th and 19th August, 2023 and interacted with the Faculty and Students briefing about the avenues available in teaching, research and exchange programmes.

Now, the Pro-Vice-Chancellor of University of Wolverhampton has invited our Vice-Chancellor, Prof. Lingaraja Gandhi to visit his University from 25.03.2024 to 29.03.2024 to offer his expertise and to discuss on setting up of a collaborative Research and Innovation Centre at BCU. As evidenced by the letter of invitation, all the expenditure of the visit will be borne by the host University by setting aside £5000 GBP which covers, air fare, accommodation, subsistence and local travel costs associated with the visit. As such there is no financial implication on the part of the Bengaluru City University or the State Government.

As per the procedure a proposal has been submitted to the Principal Secretary to Govt., Higher Education Dept., in the prescribed application format requesting to recommend and forward to

the Hon'ble Governor & Chancellor to sanction OOD for five days from 25th March, 2024 to 29th March, 2024 (excluding General Holidays and journey days) and to place the Senior most Dean of the University in the concurrent charge as the Vice-Chancellor during the period of OOD.

The matter is placed before the Syndicate for information and approval.

*ಸಿಂಡಿಕೇಟ್ ತೀರ್ಮಾನ:*

**ಪ್ರಸ್ತಾವನೆಯನ್ನು ಅನುಮೋದಿಸಿ ಮಾನ್ಯ ಕುಲಪತಿಗಳಿಗೆ ಮಾರ್ಚ್ ತಿಂಗಳ 25 ರಿಂದ 29 ರ ಯು.ಕೆ ದೇಶದ ವೊಲ್ವರ್‌ಹ್ಯಾಂಪ್ಟನ್ ವಿಶ್ವವಿದ್ಯಾನಿಲಯದ ಸಂದರ್ಶಕ ವಿದ್ವಾಂಸರಾಗಿ ಭೇಟಿ ನೀಡಲು ಸಿಂಡಿಕೇಟ್ ಸಭೆ ಅನುಮೋದನೆ ನೀಡಲು ತೀರ್ಮಾನಿಸಿತು.**

**ವಿಷಯ ಸಂಖ್ಯೆ: 15**

Sub: Institution of "Prof. B Sanjiva Rao Gold Medal" by the Donor Sri. Grirish Rao for award during the Annual Convocation of Bengaluru City University

***REFERENCE NOTE:***

Dr.Girish Rao along with his two sisters, grandson /daughter of Prof. B. Sanjiva Rao, who was the Chairperson of the Chemistry Dept. during 1928-1948, has come forward to institute an endowment as detailed below for award of Gold Medal from the ensuing annual convocation.

| Name of the Donor | Title of the Gold Medal | Endowment Amount | Mode of Payment made |
|---|---|---|---|
| Dr. Girish Rao, Ph.D 306, Admiralty Manor, 6th Main, 14th Cross, Indiranagar 2nd Stage, Bengaluru-560038 | **"Prof. B Sanjiva Rao Gold Medal"** for securing highest marks in Chemistry | 6,30,000/- | Cheque No: 000185 Dated: 20.12.2023 |

The above endowment will be invested in the form of fixed deposit. The Interest accrued on the fixed deposit will be utilized for award of the proposed Gold Medals / Prizes to the eligible student. Accordingly the endowment amount has been invested by the Finance Officer in Government Securities.

As per the Bangalore University Statutes governing institution and award of Medals and Prizes, the matter is placed before the Syndicate for consideration and approval for instituting Gold Medal and awarding the same in the ensuing convocation.

*ಸಿಂಡಿಕೇಟ್ ತೀರ್ಮಾನ:*

**ಪ್ರೊ. ಬಿ. ಸಂಜೀವ್‌ರಾವ್ ಚಿನ್ನದ ಪದಕ ಸ್ಥಾಪಿಸಲು ಹಾಗೂ ಈ ಚಿನ್ನದ ಪದಕವನ್ನು ಮುಂಬರುವ ಘಟಿಕೋತ್ಸವದಲ್ಲಿ ಪ್ರಧಾನ ಮಾಡಲು ಸಿಂಡಿಕೇಟ್ ಸಭೆ ಅನುಮೋದನೆ ನೀಡಲು ತೀರ್ಮಾನಿಸಿತು.**

ವಿಷಯ ಸಂಖ್ಯೆ: 16

ವಿಷಯ: ವಿಶ್ವವಿದ್ಯಾನಿಲಯದ 3ನೇ ವಾರ್ಷಿಕ ಘಟಿಕೋತ್ಸವ ನಡೆಸಲು ಸಿದ್ಧತೆ ಮಾಡಿಕೊಳ್ಳುವ ಮತ್ತು ಘಟಿಕೋತ್ಸವಕ್ಕೆ ಅರ್ಜಿಗಳನ್ನು ಆಹ್ವಾನಿಸುವ ಬಗ್ಗೆ

*ಪರಾಮರ್ಶಕ ಟಿಪ್ಪಣಿ:*

ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಪರಿನಿಯಮಾವಳಿ 3.1ರ ಪ್ರಕಾರ ಘಟಿಕೋತ್ಸವವನ್ನು ಪ್ರತಿವರ್ಷ ನಡೆಸಬೇಕಾಗಿರುತ್ತದೆ. 3ನೇ ಘಟಿಕೋತ್ಸವವನ್ನು ಮಾರ್ಚ್/ಏಪ್ರಿಲ್–2024ರಲ್ಲಿ ಅಥವಾ ವಿಶ್ವವಿದ್ಯಾನಿಲಯದ ಆಡಳಿತ ಮಂಡಳಿ ಸೂಚಿಸುವ ತಿಂಗಳಲ್ಲಿ ನಡೆಸಬಹುದಾಗಿದೆ. ಈ ಸಂಬಂಧ ಈ ಕೆಳಕಂಡ ಕ್ರಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆ.

01. ಘಟಿಕೋತ್ಸವಕ್ಕೆ ಅರ್ಜಿಗಳನ್ನು ಆಹ್ವಾನಿಸಿ ಅಧಿಸೂಚನೆ ಹೊರಡಿಸುವುದು. ಈ ಅಧಿಸೂಚನೆಯನ್ನು ನಿಯಮಾವಳಿ ಪ್ರಕಾರ ಘಟಿಕೋತ್ಸವ ನಡೆಯುವ 45 ದಿನಗಳ ಮೊದಲೇ ಹೊರಡಿಸಬೇಕಾಗುತ್ತದೆ.
02. ಬೆಂಗಳೂರು ನಗರ ವಿಶ್ವವಿದ್ಯಾಲಯದ 2020–23ನೇ ಸಾಲಿನ ಸ್ನಾತಕ ಪದವಿಯಲ್ಲಿ 5 ಕೋರ್ಸುಗಳಿಗೆ ಹಾಗೂ 2021–23ನೇ ಸ್ನಾತಕೋತರ ಪದವಿಯಲ್ಲಿ 35 ಕೋರ್ಸುಗಳಲ್ಲಿ ಮತ್ತು ವ್ಯಕ್ತಿಗಳು ಹಾಗೂ ಸಂಸ್ಥೆಗಳು ಸ್ಥಾಪಿಸಿರುವ 15 ದತ್ತಿಗಳು ಸೇರಿ ಒಟ್ಟು 55 ಚಿನ್ನದ ಪದಕ ಹಾಗೂ ನಗದು ಬಹುಮಾನವನ್ನು ಮೂರನೇ ವಾರ್ಷಿಕ ಘಟಿಕೋತ್ಸವದಲ್ಲಿ ಪ್ರಥಮ ರ್‍ಯಾಂಕ್ ಪಡೆಯುವ ವಿದ್ಯಾರ್ಥಿಗಳಿಗೆ ನೀಡಬೇಕಾಗುತ್ತದೆ. ಈ ಸಂಬಂಧ ಚಿನ್ನದ ಪದಕ ಹಾಗೂ ನಗದು ಬಹುಮಾನಗಳನ್ನು ವಿಶ್ವವಿದ್ಯಾಲಯ ಮತ್ತು ವ್ಯಕ್ತಿಗಳು ಹಾಗೂ ಸಂಸ್ಥೆಗಳು ಸ್ಥಾಪಿಸಿರುವ ಮೊತ್ತದಿಂದ ಬರುವ ಬಡ್ಡಿ ಹಣದಲ್ಲಿ ಬರಿಸಲಾಗುವುದರಿಂದ ಇವುಗಳನ್ನು ಕೊಟೇಷನ್/ಟೆಂಡರ್ ಮೂಲಕ ಚಿನ್ನದ ಪದಕ ಖರೀದಿಸಲು ಮತ್ತು ನಗದು ಬಹುಮಾನ ವಿತರಣೆ ಮಾಡಲು ಅನುಮೋದನೆ ಕೋರುವ ಬಗ್ಗೆ.
03. ಹಿಂದಿನ ವರ್ಷದ ಘಟಿಕೋತ್ಸವದಲ್ಲಿ ಪ್ರಮುಖವಾಗಿ ವೇದಿಕೆ, ವಿಶ್ವವಿದ್ಯಾಲಯದ ಆವರಣದ ಅಲಂಕಾರ ಹಾಗೂ ಪೀಠೋಪಕರಣಗಳಿಗೆ, ಧ್ವನಿವರ್ಧಕಗಳಿಗೆ, ವಿಡಿಯೋ, ಆಡಿಯೋ, ಛಾಯಾಚಿತ್ರ ಸೆರೆಹಿಡಿಯಲು, ಊಟ–ಉಪಹಾರದ ಸೇವೆಗಳಿಗೆ, ವಾರ್ಷಿಕ ಘಟಿಕೋತ್ಸವಕ್ಕೆ ಅಗತ್ಯವಿರುವಂತಹ ವಿವಿಧ ಪಟ್ಟಿಗಳನ್ನು ಮತ್ತು ಮಾಹಿತಿಗಳ ಮುದ್ರಣಕ್ಕೆ ಬರಿಸಬೇಕಾದ ವೆಚ್ಚ ಹಾಗೂ ಇನ್ನಿತರೆ ಸಾಂದರ್ಭಿಕ ಸೇವೆ ಪಡೆಯುವ ಸಂಬಂಧದ ವೆಚ್ಚವನ್ನು ಭರಿಸಿದ ರೀತಿಯನ್ನೇ ಅನುಸರಿಸಿ ಪ್ರಸಕ್ತ ಸಾಲಿನಲ್ಲಿಯೂ ಸೇವೆ ಪಡೆಯಲು ಅನುಮೋದನೆ ಕೋರಲಾಗಿದೆ.

ಮೇಲೆ ಹೇಳಿರುವ ವಿಚಾರಗಳಲ್ಲಿ ಕ್ರಮ ತೆಗೆದುಕೊಳ್ಳಲು ಮತ್ತು ಘಟಿಕೋತ್ಸವದ ವೆಚ್ಚಗಳನ್ನು ಭರಿಸಲು ವಿಶ್ವವಿದ್ಯಾಲಯದ ಆಯವ್ಯಯದಲ್ಲಿ ನಮೂದಿಸಿರುವ ಮೊತ್ತದಿಂದ ಭರಿಸಲು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ.

*ಸಿಂಡಿಕೇಟ್ ತೀರ್ಮಾನ:*

ಪ್ರಸ್ತಾವನೆಯಲ್ಲಿ ನಮೂದಿಸಿದ 3 ಅಂಶಗಳಿಗೆ ಅನುಮೋದನೆ ನೀಡಲು ಸಭೆ ತೀರ್ಮಾನಿಸಿತು. ಪ್ರತಿ ವರ್ಷದಂತೆ ವಿವಿಧ ಸಮಿತಿಗಳನ್ನು ರಚಿಸಿ ಕಾರ್ಯ ನಿರ್ವಹಿಸಲು ಸೂಚಿಸಲಾಯಿತು.

ವಿಷಯ ಸಂಖ್ಯೆ: 17

ವಿಷಯ: ಕುಲಾಧಿಪತಿಗಳಿಂದ ಅನುಮೋದನೆಗೊಂಡ "Statutes Relating to Appointment and Promotion of Teachers and Other Academic Staff and Measures for Maintenance of Standards in Higher Education in the Bengaluru City University, as per the UGC Regulations 2018" ಪರಿನಿಯಮಗಳನ್ನು ಅಧಿಸೂಚಿಸಿರುವ ಬಗ್ಗೆ.

ಉಲ್ಲೇಖ:
1. ಉನ್ನತ ಶಿಕ್ಷಣ ಇಲಾಖೆ ಪತ್ರ ಸಂಖ್ಯೆ: ಇಡಿ489ಯುಬಿವಿ 2022, ದಿನಾಂಕ: 12.01.2024.
2. ವಿಶ್ವವಿದ್ಯಾನಿಲಯದಅಧಿಸೂಚನೆ ಸಂಖ್ಯೆ: BCU:RPS:S-TA&P:2023-24, Dated: 24.01.2024.

***ಪರಾಮರ್ಶಕ ಟಿಪ್ಪಣಿ:***

ಬೆಂಗಳೂರು ನಗರ ವಿಶ್ವವಿದ್ಯಾನಿಲಯಕ್ಕೆ ಹೊಸದಾಗಿ ಮಂಜೂರಾಗಿರುವ ಬೋಧಕ ಹುದ್ದೆಗಳ ಕುರಿತಂತೆ ರಚಿಸಲಾಗಿರುವ ಕರಡು "Statutes Relating to Appointment and Promotion of Teachers and Other Academic Staff and Measures for Maintenance of Standards in Higher Education in the Bengaluru City University, as per the UGC Regulations 2018" ಕರಡು ಪರಿನಿಯಮವನ್ನು ಕುಲಾಧಿಪತಿಗಳ ಅಂಕಿತಕ್ಕಾಗಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು.

ಮೇಲ್ಕಂಡ ಪರಿನಿಯಮವಳಿಯನ್ನು ಮಾನ್ಯರಾಜ್ಯಪಾಲರು ಹಾಗೂ ಕುಲಾಧಿಪತಿಗಳು ದಿನಾಂಕ: 02.01.2024 ರಂದು ಅನುಮೋದನೆ ನೀಡಿರುವುದಾಗಿ ಕುಲಾಧಿಪತಿಗಳಿಂದ ಅನುಮೋದಿಸಲ್ಪಟ್ಟ ಪರಿನಿಯಮಗಳ ಪ್ರತಿಯನ್ನುಉಲ್ಲೇಖಿತ (1) ರ ಪತ್ರ ಮುಖೇನ ವಿಶ್ವವಿದ್ಯಾನಿಲಯಕ್ಕೆ ಕಳುಹಿಸಿರುತ್ತಾರೆ.

ಮಾನ್ಯ ರಾಜ್ಯಪಾಲರು ಹಾಗೂ ಕುಲಾಧಿಪತಿಗಳಿಂದ ಅನುಮೋದಿಸಲ್ಪಟ್ಟ "Statutes Relating to Appointment and Promotion of Teachers and Other Academic Staff and Measures for Maintenance of Standards in Higher Education in the Bengaluru City University, as per the UGC Regulations 2018", ಪರಿನಿಯಮಗಳನ್ನು ಉಲ್ಲೇಖ (2)ರ ಅಧಿಸೂಚನೆಯ ಮುಖಾಂತರ ಅಧಿಸೂಚಿಸಲಾಗಿದೆಯೆಂಬ ಮಾಹಿತಿಯನ್ನು ಸಿಂಡಿಕೇಟ್ ಸಭೆಯ ಗಮನಕ್ಕೆ ತರಲು ಮಂಡಿಸಿದೆ.

***ಸಿಂಡಿಕೇಟ್ ತೀರ್ಮಾನ:***

**ಈ ಗೌರವಾನ್ವಿತ ಕುಲಾಧಿಪತಿಗಳು ಅಂಕಿತ ನೀಡಿದ ಪರಿನಿಯಮಗಳನ್ನು ಜಾರಿಗೊಳಿಸುವ ಕ್ರಮವನ್ನು ಗಮನಿಸಿ ಅನುಮೋದಿಸಲಾಯಿತು.**

ವಿಷಯ ಸಂಖ್ಯೆ: 18

Sub: Proceedings of Meeting of the Library Advisory Committee Meeting held on 12.01.2024

***REFERENCE NOTE:***

Proceedings of the meeting of the Library Advisory Committee Meeting held on 12.01.2024 is placed before the Syndicate for its approval. The signed copies of the proceedings are submitted along with its reference note

***ವಿವರಣೆ:***

ಪ್ರಭಾರ ಗ್ರಂಥಪಾಲಕರು ಹಾಗೂ ಸಿಂಡಿಕೇಟ್ ಸದಸ್ಯರಾದ ಡಾ. ಪಿ. ಆರ್. ಚೇತನಾ ರವರು ಗ್ರಂಥಾಲಯ ಸಲಹಾ ಸಮಿತಿಯ ನಡವಳಿಗಳ ವಿವರಗಳನ್ನು ಸಭೆಗೆ ವಿವರಿಸಿದರು.

ಕುಲಪತಿಗಳು, ಗ್ರಂಥಾಲಯವನ್ನು ಸ್ವಚ್ಛಗೊಳಿಸಿ ಆಧುನೀಕರಿಸಿದ ವಿವರಗಳನ್ನು ಸಭೆಗೆ ನೀಡುತ್ತಾ, ಪ್ರಸ್ತುತ ಕಾಲಮಾನದ ವಿದ್ಯಾರ್ಥಿಗಳಿಗೆ ಅಗತ್ಯವಾದ ಇ-ಸಂಪನ್ಮೂಲಗಳನ್ನು ಡಿಜಟಲೀಕರಿಸಿದ ಪುಸ್ತಕ ನಿಯತಕಾಲಿಕೆಗಳನ್ನು ಹಾಗೂ ಅದಕ್ಕೆ ಸಂಬಂಧಿಸಿದ ತತ್ರಾಂಶಗಳನ್ನು ಗ್ರಂಥಾಲಯಕ್ಕೆ ಒದಗಿಸಲಾಗಿದೆ ಎಂದು ಹೇಳಿದರು.

ಗ್ರಂಥಾಲಯದ ದರುನೀಯ ಪರಿಸ್ಥಿತಿಯನ್ನು ವಿವರಿಸಿ, ಸುಮಾರು ವರ್ಷಗಳಿಂದ ಗ್ರಂಥಗಳನ್ನು ಕೆಳಮಹಡಿಯಲ್ಲಿ ಶೇಖರಿಸಿದ್ದರು ಎಲ್ಲ ಪುಸ್ತಕ/ ನಿಯತಕಾಲಿಕೆಗಳು ಧೂಳು ಹಾಗೂ ಸರಿಯಾದ ಪೋಷಣೆ ಇಲ್ಲದೆ, ಅತ್ಯಂತ ನಿಕೃಷ್ಟವಾದ ಸ್ಥಿತಿಯಲ್ಲಿರುವುದನ್ನು ಕಂಡು ವಿವಿಧ, ಮಹಾವಿದ್ಯಾಲಯಗಳ ವಿದ್ಯಾರ್ಥಿಗಳನ್ನು ರಾಷ್ಟ್ರೀಯ ಸೇವಾಯೋಜನೆ ಅಡಿಯಲ್ಲಿ 10–15 ದಿವಸಗಳ ಶಿಬಿರ ಆಯೋಜಿಸಿ ಎಲ್ಲ ಪುಸ್ತಕ / ನಿಯತಕಾಲಿಕೆಗಳನ್ನು ಸ್ವಚ್ಛಗೊಳಿಸಿ ರ್‍ಯಾಕ್‌ಗಳಲ್ಲಿ ಇಡುವ ವ್ಯವಸ್ಥೆ ಮಾಡಲಾಗಿದೆ ಈ ಕೆಲಸಕ್ಕೆ ಮಹಾವಿದ್ಯಾಲಯಗಳು ನೀಡಿದ ಸಹಕಾರ ಸ್ಮರಣೀಯವಾಗಿದೆ ಎಂದು ಹೇಳಿದರು.

ನಮ್ಮ ವಿಶ್ವವಿದ್ಯಾನಿಲಯದಲ್ಲಿ ಅನುಭವಿ ಗ್ರಂಥಪಾಲಕ ಇಲ್ಲದೆ ಇರುವುದರಿಂದ ಮೈಸೂರು ವಿಶ್ವವಿದ್ಯಾನಿಲಯದ ಹಿರಿಯ ಗ್ರಂಥಪಾಲಕರು ಡಾ. ಸರಸ್ವತಿ ಪಿ ರವರನ್ನು ವ್ಯಯಕ್ತಿಕವಾಗಿ ಆಹ್ವಾನಿಸಿ ಅವರಿಂದ ಸಲಹೆ ಸಹಕಾರಗಳನ್ನು ಪಡೆದು ಗ್ರಂಥಾಲಯ ನಿರ್ಮಾಣ ಕಾರ್ಯ ಮಾಡಲಾಗಿದೆ. ಡಾ. ಸರಸ್ವತಿಯವರು ನೀಡಿದ ಸಹಾಯ ಸಹಕಾರ ಕೂಡ ನೆನೆಸಿಕೊಂಡು ಅವರಿಗೆ ಧನ್ಯವಾದಗಳನ್ನು ಅರ್ಪಿಸಿದರು. ಪ್ರಸ್ತುತ ಗ್ರಂಥಾಲಯ ವಿದ್ಯಾರ್ಥಿ ಅಧ್ಯಾಪಕರ ಉಪಯೋಗಕ್ಕೆ ಸಿದ್ಧವಾಗಿದ್ದು, ಇದನ್ನು ಅಚ್ಚುಕಟ್ಟಾಗಿ ನಿರ್ವಹಿಸಲು ತಾಂತ್ರಿಕ ಅಗತ್ಯಗಳಿಗೆ ತಕ್ಕಂತೆ ಡಿಜಿಟಲೀಕರಿಸುವುದು, RFID ಅಳವಡಿಸುವುದು ಹೆಚ್ಚಿನ ಸಂಖ್ಯೆಯ ಇ-ಪುಸ್ತಕ / ನಿಯತಕಾಲಿಕೆಗಳನ್ನು ಖರೀದಿಸುವುದು ಅಗತ್ಯ ಉಪಕರಣ / ಕಂಪ್ಯೂಟರ್ / ಪೀಠೋಪಕರಣಗಳನ್ನು ಖರೀದಿಸಿ ಗ್ರಂಥಾಲಯವನ್ನು ಅಚ್ಚುಕಟ್ಟಾಗಿ ವಿಶ್ವವಿದ್ಯಾನಿಲಯದ ಜೀವನಾಡಿಯಾಗಿಸುವ ಗುರಿ ಹೊಂದಲಾಗಿದೆ. ಈ ನಿಟ್ಟಿನಲ್ಲಿ ಗ್ರಂಥಾಲಯ ಸಲಹಾ ಸಮಿತಿಯ ಶಿಫಾರಸ್ಸುಗಳಿಗೆ ಅನುಮೋದನೆ ನೀಡಬೇಕೆಂದು ವಿನಂತಿಸಿದರು.

***ಸಿಂಡಿಕೇಟ್ ತೀರ್ಮಾನ:***

**ದಿನಾಂಕ 12.01.2024 ರಂದು ಜರುಗಿದ ಗ್ರಂಥಾಲಯ ಸಲಹಾ ಸಮಿತಿಯ ಶಿಫಾರಸ್ಸುಗಳಿಗೆ ಒಪ್ಪಿಗೆ ನೀಡಲು ಸಿಂಡಿಕೇಟ್ ಸಭೆ ತೀರ್ಮಾನಿಸಿತು.**

ವಿಷಯ ಸಂಖ್ಯೆ: 19

ವಿಷಯ: ಎಂ.ಎಸ್. ರಾಮಯ್ಯ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಮಹಾವಿದ್ಯಾಲಯಕ್ಕೆ 2024-25 ಸಾಲಿನಿಂದ 2032-33ನೇ ಸಾಲಿನ ವರೆಗೆ ಹೊಸ ಸ್ವಾಯತ್ತ ಮಹಾವಿದ್ಯಾಲಯದ ಮಾನ್ಯತೆಯನ್ನು ಮಂಜೂರು ಮಾಡುವ ಕುರಿತು.

ಉಲ್ಲೇಖ:
1. ವಿಶ್ವವಿದ್ಯಾನಿಲಯಗಳ ಧನ ಸಹಾಯ ಅಯೋಗ ಪತ್ರ ಸಂ: F.2-10 / 2023 (Ac-Policy) Date: 26.09.2023
2. ಈ ಕಛೇರಿ ಪತ್ರ ಸಂಖ್ಯೆ: ಬೆಂ.ನ.ವಿ/ಎ.ಸಿ.ಎ/ಹೊಸಸ್ವಾಯತ್ತ/ 249/2023-24 ದಿನಾಂಕ: 11.12.2023
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಪತ್ರ ಸಂಖ್ಯೆ: ಇಡಿ / 440/ ಯುಬಿವಿ /2023 ದಿನಾಂಕ: 29.01.2024

*****

***ಪರಮಾರ್ಶಕ ಟಿಪ್ಪಣಿ:***

ಉಲ್ಲೇಖಿತ (1)ರ ಪತ್ರದಲ್ಲಿ ವಿಶ್ವವಿದ್ಯಾಲಯಗಳ ಧನ ಸಹಾಯ ಆಯೋಗವು ಎಂ.ಎಸ್. ರಾಮಯ್ಯ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಮಹಾವಿದ್ಯಾಲಯಕ್ಕೆ 2023-24ನೇ ಸಾಲಿನಿಂದ 2032-33ನೇ ಸಾಲಿನವರೆಗೆ 10 ವರ್ಷಗಳ ಅವಧಿಗೆ ಮಂಜೂರು ಮಾಡಿ ಅಧಿಸೂಚನೆ ಹೊರಡಿಸಲು ವಿಶ್ವವಿದ್ಯಾನಿಲಯಕ್ಕೆ ತಿಳಿಸಿರುತ್ತದೆ. ಉಲ್ಲೇಖ (2)ರ ಪತ್ರದಲ್ಲಿ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ಪ್ರಕರಣ 64 ಹಾಗೂ ಸ್ವಾಯತ್ತ ಮಹಾವಿದ್ಯಾಲಯಗಳ ಪರಿನಿಯಮಾವಳಿ ಅನುಸಾರ, ಸದರಿ ಮಹಾವಿದ್ಯಾಲಯ ಸ್ವಾಯತ್ತ ಮಹಾವಿದ್ಯಾಲಯಕ್ಕೆ ಅಗತ್ಯವಾದ ಮಾನದಂಡಗಳ ಪ್ರಕಾರ ಮಹಾವಿದ್ಯಾಲಯ ಶೈಕ್ಷಣಿಕ ಹಾಗೂ ಭೌತಿಕ ಸಂಪನ್ಮೂಲಗಳನ್ನು ಹೊಂದಿರುವ ಕುರಿತು ಪರಿಶೀಲಿಸಿ ವರದಿ ಸಲ್ಲಿಸಲು ರಚಿಸಲಾದ ತಜ್ಞರ ಸಮಿತಿಯ ವರದಿಗಳನ್ನು ವಿಶ್ವವಿದ್ಯಾಲಯದ ವಿದ್ಯಾವಿಷಯಕ ಪರಿಷತ್ ಹಾಗೂ ಸಿಂಡಿಕೇಟ್ ಸಭೆಗಳ ಮುಂದೆ ಮಂಡಿಸಿ ಅನುಮೋದನೆ ಪಡೆದು ಸಮಿತಿಯ ವರದಿ ಹಾಗೂ ಪ್ರಾಧಿಕಾರ ನಡವಳಿಗಳೊಂದಿಗೆ ಸದರಿ ಮಹಾವಿದ್ಯಾಲಯಕ್ಕೆ ಹೊಸ ಸ್ವಾಯತ್ತತೆಯನ್ನು ನೀಡಲು ಸಹಮತ ಕೋರಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು. ಉಲ್ಲೇಖ (3)ರ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಪತ್ರದಲ್ಲಿ, ಎಂ.ಎಸ್. ರಾಮಯ್ಯ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಮಹಾವಿದ್ಯಾಲಯದ ಈಗಾಗಲೇ 2023-24ನೇ ಸಾಲಿನ ಪ್ರವೇಶಾತಿ ಪೂರ್ಣಗೊಂಡು ವ್ಯಾಸಂಗ ಅಂತಿಮ ಹಂತದಲ್ಲಿರುವುದರಿಂದ ಸದರಿ ಮಹಾವಿದ್ಯಾಲಯಕ್ಕೆ 2024-25ನೇ ಸಾಲಿನಿಂದ 2032-33ನೇ ಸಾಲಿನವರೆಗೆ 09 ವರ್ಷಗಳ ಅವಧಿಗೆ ಮಹಾವಿದ್ಯಾಲಯದಲ್ಲಿ ಅಸ್ತಿತ್ವದಲ್ಲಿರುವ ವ್ಯಾಸಂಗ ಕ್ರಮಗಳಿಗೆ ಅನ್ವಯಿಸುವಂತೆ ವಿಶ್ವವಿದ್ಯಾಲಯಗಳ ಅಧಿನಿಯಮ 2000ರ ಪ್ರಕರಣ 64(1) ರಡಿ ಅಧಿಸೂಚನೆ ಹೊರಡಿಸಲು ಸಹಮತ ವ್ಯಕ್ತಪಡಿಸಿರುತ್ತಾರೆ.

ಸದರಿ ಮಹಾವಿದ್ಯಾಲಯದಲ್ಲಿ ಕೆಳಕಂಡ ವ್ಯಾಸಂಗ ಕ್ರಮಗಳು ಅಸ್ತಿತ್ವದಲ್ಲಿ ಇರುತ್ತವೆ.

| ಕ್ರ. ಸಂ | ವಿಷಯ | | ವಿದ್ಯಾರ್ಥಿ ಪ್ರಮಾಣ |
|---|---|---|---|
| 1. | BA | English | 80 |
| 2. | | Journalism | 80 |
| 3. | | Political Science | 40 |
| 4. | | Psychology | 40 |
| 5. | B.Sc | Genetics | 60 |
| 6. | | Mathematics | 40 |
| 7. | | Chemistry | 160 |
| 8. | B.Sc | Bio- Technology | 160 |

| | | | |
|---|---|---|---|
| 9. | | Bio- Chemistry | 60 |
| 10. | | Computer Science | 40 |
| 11. | | Electronics | 40 |
| 12. | | Micro- Biology | 220 |
| 13. | B.Com | General | 200 |
| 14. | BBA | General | 180 |
| 15. | BCA | General | 180 |
| 16. | M.Sc | Bio-Technology | 45 |
| 17. | M.Sc | Micro-Biology | 35 |
| 18. | M.Sc | Bio – Chemistry | 25 |
| 19. | M.Sc | Chemistry | 25 |
| 20. | M.Com | General | 40 |
| 21. | MBA | General | 60 |

ಮೇಲೆ ತಿಳಿಸಿರುವ ಕೋರ್ಸುಗಳಿಗೆ 2024–25ನೇ ಸಾಲಿನಿಂದ 2032–33ನೇ ಸಾಲಿನವರೆಗೆ 09 ವರ್ಷಗಳ ಅವಧಿಗೆ ಎಂ.ಎಸ್. ರಾಮಯ್ಯ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಮಹಾವಿದ್ಯಾಲಯಕ್ಕೆ ಹೊಸ ಸ್ವಾಯತ್ತತೆಯನ್ನು ಮಂಜೂರಿಸಿ ಅಧಿಸೂಚನೆ ಹೊರಡಿಸಲು ಸಿಂಡಿಕೇಟ್ ಸಭೆಯ ಪರಿಶೀಲನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

***ಸಿಂಡಿಕೇಟ್ ತೀರ್ಮಾನ:***

**ಎಂ.ಎಸ್. ರಾಮಯ್ಯ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಮಹಾವಿದ್ಯಾಲಯಕ್ಕೆ ಯು.ಜಿ.ಸಿಯಿಂದ ಮಂಜೂರಾತಿ ಹಾಗೂ ರಾಜ್ಯ ಸರ್ಕಾರದ ಸಹಮತಿಯ ಮೇರೆಗೆ 2024–25 ರಿಂದ 2032–33ನೇ ಸಾಲಿನವರೆಗೆ 9 ವರ್ಷಗಳ ಅವಧಿಗೆ ಪ್ರಸ್ತಾವನೆಯು ನಮೂದಿಸಿದ ವಿಷಯ / ಕೋರ್ಸುಗಳ ಸ್ವಾಯತ್ತತೆ ನೀಡಿ ಅಧಿಸೂಚನೆ ಹೊರಡಿಸಲು ಸಿಂಡಿಕೇಟ್ ಸಭೆ ಅನುಮೋದನೆ ನೀಡಿತು.**

**ವಿಷಯ ಸಂಖ್ಯೆ: 20**

ವಿಷಯ: ಸೆಂಟ್ ಜೋಸೆಫ್ ವಾಣಿಜ್ಯ ಮಹಾವಿದ್ಯಾಲಯಕ್ಕೆ ವಿಶ್ವವಿದ್ಯಾನಿಲಯಗಳ ಧನ ಸಹಾಯ ಆಯೋಗದ ತೀರ್ಮಾನದ ಪ್ರಕಾರ 2022–23ನೇ ಸಾಲಿನಿಂದ 2031–32ನೇ ಸಾಲಿನ ವರೆಗಿನ ಹತ್ತು ವರ್ಷಗಳ ಅವಧಿಗೆ ಸ್ವಾಯತ್ತ ಸ್ಥಾನಮಾನ ಅಧಿಸೂಚನೆ ಹೊರಡಿಸುವ ಕುರಿತು

ಉಲ್ಲೇಖ:
1. ವಿಶ್ವವಿದ್ಯಾನಿಲಯಗಳ ಧನ ಸಹಾಯ ಅಯೋಗ ಪತ್ರ ಸಂ: No. F.22 1/2022 (AC) 17th February, 2022
2. ಈ ಕಛೇರಿ ಪತ್ರ ಸಂಖ್ಯೆ: ಬೆಂ.ನ.ವಿ/ಸ್ವಾಯತ್ತ/ 192/2023–24 ದಿನಾಂಕ: 10.10.2023
3. ಸರ್ಕಾರದ ಅಧೀನ ಕಾರ್ಯದರ್ಶಿಗಳ ಪತ್ರ ಸಂಖ್ಯೆ: ಇಡಿ / 543 / ಯುಬಿವಿ /2022 ದಿನಾಂಕ: 12.01.2024

-----

***ಪರಮಾರ್ಶಕ ಟಿಪ್ಪಣಿ:***

ಉಲ್ಲೇಖಿತ (1)ರ ಪತ್ರದಲ್ಲಿ ವಿಶ್ವವಿದ್ಯಾಲಯಗಳ ಧನ ಸಹಾಯ ಆಯೋಗವು ಸೆಂಟ್ ಜೋಸೆಫ್ ವಾಣಿಜ್ಯ ಮಹಾವಿದ್ಯಾಲಯದ ಸ್ವಾಯತ್ತತೆಯನ್ನು 2022–23ನೇ ಸಾಲಿನಿಂದ 2031–32ನೇ ಸಾಲಿನವರೆಗೆ 10 ವರ್ಷಗಳ

ಅವಧಿಗೆ ಮಂಜೂರು ಮಾಡಿರುತ್ತದೆ. ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ಪ್ರಕರಣ 64 ಹಾಗೂ ಸ್ವಾಯತ್ತ ಮಹಾವಿದ್ಯಾಲಯಗಳ ಪರಿನಿಯಮಾವಳಿ ಅನುಸಾರ, ಸದರಿ ಮಹಾವಿದ್ಯಾಲಯ ಸ್ವಾಯತ್ತ ಮಹಾವಿದ್ಯಾಲಯಕ್ಕೆ ಅಗತ್ಯವಾದ ಮಾನದಂಡಗಳ ಪ್ರಕಾರ ಶೈಕ್ಷಣಿಕ ಹಾಗೂ ಭೌತಿಕ ಸಂಪನ್ಮೂಲಗಳನ್ನು ಹೊಂದಿರುವ ಕುರಿತು ರಚಿಸಲಾದ ತಜ್ಞರ ಸಮಿತಿಯ ಶಿಫಾರಸ್ಸುಗಳನ್ನು ಸಲ್ಲಿಸಿ ಮತ್ತು ವಿದ್ಯಾವಿಷಯಕ ಪರಿಷತ್ ಹಾಗೂ ಸಿಂಡಿಕೇಟ್ ಸಭೆಗಳ ನಡವಳಿಗಳೊಂದಿಗೆ ಸದರಿ ಮಹಾವಿದ್ಯಾಲಯಕ್ಕೆ ಸ್ವಾಯತ್ತತೆ ಮುಂದುವರೆಸಲು ಸಹಮತ ಕೋರಿ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಉಲ್ಲೇಖ (3)ರ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಪತ್ರದಲ್ಲಿ ಸೆಂಟ್ ಜೋಸೆಫ್ ವಾಣಿಜ್ಯ ಮಹಾವಿದ್ಯಾಲಯದಲ್ಲಿ ಅಸ್ತಿತ್ವದಲ್ಲಿರುವ ವ್ಯಾಸಂಗ ಕ್ರಮಗಳಿಗೆ ಅನ್ವಯಿಸುವಂತೆ ವಿಶ್ವವಿದ್ಯಾಲಯಗಳ ಅಧಿನಿಯಮ 2000ರ ಪ್ರಕರಣ 64(1) ರಡಿ ಅಧಿಸೂಚನೆ ಹೊರಡಿಸಲು ಸಹಮತ ವ್ಯಕ್ತಪಡಿಸಿರುತ್ತಾರೆ. ಸದರಿ ಮಹಾವಿದ್ಯಾಲಯದಲ್ಲಿ ಕೆಳಕಂಡ ವ್ಯಾಸಂಗ ಕ್ರಮಗಳು ಅಸ್ತಿತ್ವದಲ್ಲಿ ಇರುತ್ತವೆ.

| ಕ್ರ.ಸಂ | ವಿಷಯ | ವಿದ್ಯಾರ್ಥಿ ಪ್ರಮಾಣ |
|---|---|---|
| 1. | B.Com | 600 |
| 2. | B.Com (Travel & Tourism) | 90 |
| 3. | BBA | 300 |
| 4. | M.Com | 40 |
| 5. | M.Com (International Business) | 40 |
| 6. | M.Com (Finance Analysis) | 40 |
| 7. | B.A (English (Honours with Psychology) | 100 |
| 8. | B.Sc (Economics (Honours with Psychology) | 60 |

ಮೇಲೆ ತಿಳಿಸಿರುವ ಕೋರ್ಸುಗಳಿಗೆ 2022-23ನೇ ಸಾಲಿನಿಂದ 2031-32ನೇ ಸಾಲಿನವರೆಗೆ 10 ವರ್ಷಗಳ ಅವಧಿಗೆ ಸೆಂಟ್ ಜೋಸೆಫ್ ವಾಣಿಜ್ಯ ಮಹಾವಿದ್ಯಾಲಯಕ್ಕೆ ಸ್ವಾಯತ್ತತೆಯನ್ನು ಮುಂದುವರೆಸಿ ಅಧಿಸೂಚನೆ ಹೊರಡಿಸಲು ವಿದ್ಯಾವಿಷಯಕ ಪರಿಷತ್ ಸಭೆಯ ಪರಿಶೀಲನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

*ಸಿಂಡಿಕೇಟ್ ತೀರ್ಮಾನ:*

**ಸೆಂಟ್ ಜೋಸೆಫ್ ವಾಣಿಜ್ಯ ಮಹಾವಿದ್ಯಾಲಯಕ್ಕೆ ಯು.ಜಿ.ಸಿ ಮಂಜೂರಾತಿ ಹಾಗೂ ರಾಜ್ಯ ಸರ್ಕಾರದ ಸಹಮತಿಯ ಮೇರೆಗೆ 2022-23ನೇ ಸಾಲಿನಿಂದ 2031-32ನೇ ಸಾಲಿನವರೆಗೆ 10 ವರ್ಷಗಳ ಅವಧಿಗೆ ಪ್ರಸ್ತಾವನೆಯಲ್ಲಿ ನಮೂದಿಸಿದ ವಿಷಯ ಹಾಗೂ ಕೋರ್ಸುಗಳಿಗೆ ಮಹಾವಿದ್ಯಾಲಯದ ಶಾಶ್ವತ ಸಂಯೋಜನೆ ಮುಂದುವರಿಕೆಗೆ ಅಧಿಸೂಚನೆ ಹೊರಡಿಸಲು ಸಿಂಡಿಕೇಟ್ ಸಭೆ ಅನುಮೋದನೆ ನೀಡಲು ತೀರ್ಮಾನಿಸಿತು.**

ವಿಷಯ ಸಂಖ್ಯೆ: 21

ವಿಷಯ: ವಾಣಿಜ್ಯ ವಿಭಾಗದ ಪ್ರಾಧ್ಯಾಪಕರಾದ ಡಾ॥ ಎಂ.ಮುನಿನಾರಾಯಣಪ್ಪ ಅವರ ವಿರುದ್ಧ ನಡತೆ ನಿಯಮಗಳ ಉಲ್ಲಂಘನೆಕುರಿತ ಇಲಾಖಾ ವಿಚಾರಣೆ ವರದಿ ಹಾಗೂ ಲೈಂಗಿಕ ದುರ್ನಡತೆ ಕುರಿತ ಆಂತರಿಕ ದೂರು ಸಮಿತಿಯು (ICC) ಸಲ್ಲಿಸಿರುವ ವಿಚಾರಣೆ ವರದಿಯ ಶಿಫಾರಸ್ಸುಗಳ ಮೇಲೆ ಕಾನೂನು ಸಲಹೆಗಾರರು ನೀಡಿದ ಅಭಿಪ್ರಾಯವನ್ನು ಪರಿಗಣಿಸುವ ಕುರಿತು.

ಉಲ್ಲೇಖ: 1.ದಿನಾಂಕ: 17.12.2021 ರಂದು ನಡೆದ ಸಿಂಡಿಕೇಟ್ ಸಭೆಯ ನಿರ್ಣಯ.
2.ಆಂತರಿಕ ದೂರು ಸಮಿತಿಯ(ICC) ವರದಿ ದಿನಾಂಕ: 21.08.2023.
3.ದಿನಾಂಕ: 25.09.2023 ರಂದು ನಡೆದ ಸಿಂಡಿಕೇಟ್ ಸಭೆಯ ನಿರ್ಣಯ
4. ವಿ.ವಿ ಪತ್ರಸಂಖ್ಯೆ: ಬೆಂ.ನ.ವಿ/ಸಿಬ್ಬಂದಿ/ಡಾ.ಎಂ.ಮು.ವಿ/2023-24 ದಿನಾಂಕ: 02.11.2023

***ಪರಾಮರ್ಶಕ ಟಿಪ್ಪಣಿ:***

ವಾಣಿಜ್ಯ ವಿಭಾಗದ ಪ್ರಾಧ್ಯಾಪಕರಾದ ಡಾ॥ ಎಂ.ಮುನಿನಾರಾಯಣಪ್ಪ ಅವರು ವಾಣಿಜ್ಯ ವಿಭಾಗದ ಮುಖ್ಯಸ್ಥರು, ಡೀನರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಸಂದರ್ಭದಲ್ಲಿ ತಮ್ಮ ಮಾರ್ಗದರ್ಶನದಲ್ಲಿ ಸಂಶೋಧನೆ ಮಾಡುತ್ತಿರುವ ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿಗಳಿಗೆ ಮಾನಸಿಕ ಕಿರುಕುಳ ನೀಡುತ್ತಿರುವ ದೂರುಗಳನ್ನು ಆಧರಿಸಿ ಸದರಿ ಪ್ರಾಧ್ಯಾಪಕರಿಗೆ ಕಾರಣ ಕೇಳಿ ನೋಟೀಸು ಜಾರಿಗೊಳಿಸಿ, ಮೇಲ್ನೋಟಕ್ಕೆ ಅವರ ವಿರುದ್ಧ ಮಾಡಿದ ಆಪಾದನೆಗಳು ಮತ್ತು ದೂರುಗಳು ಸರಿ ಎಂದು ಕಂಡು ಬಂದಿರುವ ಕಾರಣ, ಉಲ್ಲೇಖ (1) ರ ಆದೇಶದಂತೆ ಅವರನ್ನು ವಿಶ್ವವಿದ್ಯಾನಿಲಯದ ಸೇವೆಯಿಂದ ಅಮಾನತ್ತುಗೊಳಿಸಿ ಆದೇಶ ಹೊರಡಿಸಲಾಗಿತ್ತು. ದಿನಾಂಕ: 17-12-2021 ರಂದು ಜರುಗಿದ ಸಿಂಡಿಕೇಟ್ ಸಭೆಯ ತೀರ್ಮಾನದ ಪ್ರಕಾರ ಉಲ್ಲೇಖ (2)ರ ಆದೇಶದಲ್ಲಿ ಅಮಾನತ್ತು ಹಿಂಪಡೆದು, ವಿಚಾರಣೆಯನ್ನು ಕಾಯ್ದಿರಿಸಿ, ಕರ್ತವ್ಯಕ್ಕೆ ಹಾಜರಾಗಲು ಸೂಚಿಸಲಾಗಿತ್ತು. ಆಪಾದನೆಗಳ ಕುರಿತು ಆರೋಪ ಪಟ್ಟಿ ಹೊರಡಿಸಿ, ಇಲಾಖಾ ವಿಚಾರಣೆ ನಡೆಸಲು, ನಿವೃತ್ತ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾದ, ಶ್ರೀ ಬಿ. ಶಿವಲಿಂಗೇಗೌಡ ಇವರನ್ನು ಉಲ್ಲೇಖ (3)ರ ಆದೇಶದಲ್ಲಿ ವಿಚಾರಣಾಧಿಕಾರಿಯಾಗಿ ನೇಮಕ ಮಾಡಲಾಗಿ, ಸದರಿ ವಿಚಾರಣಾಧಿಕಾರಿಗಳು ವಿಶ್ವವಿದ್ಯಾನಿಲಯದ Classification, Control and Appeal ಪರಿನಿಯಮಗಳ ಅನುಸಾರ ನಿರ್ದಿಷ್ಟ ಅಪಾದನೆಗಳಿಗೆ ಸಂಬಂಧಿಸಿಂತೆ ವಿಚಾರಣೆಯನ್ನು ನಡೆಸಿ ದಿನಾಂಕ: 03-01-2023 ರಂದು ಮುಚ್ಚಿದ ಲಕೋಟೆಯಲ್ಲಿ ವಿಚಾರಣೆಯ ವರದಿಯನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿರುತ್ತಾರೆ. ಸದರಿ ವರದಿಯನ್ನು ದಿನಾಂಕ 15.03.2023 ರಂದು ಜರುಗಿನ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಲಾಗಿ, ಸಭೆಯು ವರದಿಯನ್ನು ಒಪ್ಪಿಕೊಂಡು ಕೆಳಗಿನಂತೆ ತೀರ್ಮಾನವನ್ನು ತೆಗೆದುಕೊಂಡಿರುತ್ತದೆ.

<u>ಸಿಂಡಿಕೇಟ್ ತೀರ್ಮಾನ:</u>

*"ವಿಚಾರಣಾಧಿಕಾರಿಗಳು ನೀಡಿದ ವಿಚಾರಣಾ ವರದಿಯನ್ನು ಸಿಂಡಿಕೇಟ್ ಸಭೆಯಲ್ಲಿ ಮಂಡಿಸಲಾಯಿತು. ವಿಚಾರಣಾ ವರದಿಯಲ್ಲಿ ಆರೋಪಿತ ಪ್ರಾಧ್ಯಾಪಕರ ವಿರುದ್ಧ ಮಾಡಲಾದ 4 ಆಪಾದನೆಗಳಲ್ಲಿ 3 ಆಪಾದನೆಗಳು ರುಜುವಾತಾಗಿವೆ ಎಂದು ತಿಳಿಸಲಾಗಿದೆ. ಸಿಂಡಿಕೇಟ್ ಸಭೆ ವಿಚಾರಣಾಧಿಕಾರಿಗಳು ಸಲ್ಲಿಸಿರುವ ವಿಚಾರಣಾ ವರದಿಯನ್ನು ಒಪ್ಪಿಕೊಳ್ಳಲು ತೀರ್ಮಾನಿಸಿತು. ಆಪಾದಿತ ಪ್ರಾಧ್ಯಾಪಕರಾದ ಡಾ. ಎಂ. ಮುನಿನಾರಾಯಣಪ್ಪ, ವಾಣಿಜ್ಯ ವಿಭಾಗ ಇವರ ವಿರುದ್ಧ ಮಾಡಲಾದ 4 ಆಪಾದನೆಗಳಲ್ಲಿ 3 ಆಪಾದನೆಗಳು ರುಜುವಾತು ಆಗಿರುವುದರಿಂದ ವಿಶ್ವವಿದ್ಯಾನಿಲಯ ಅಳವಡಿಸಿಕೊಂಡಿರುವ ಬೆಂಗಳೂರು ವಿಶ್ವವಿದ್ಯಾಲಯದ CCA ಪರಿನಿಯಮದ 28.5 (iii) (a)ಅಡಿಯಲ್ಲಿ ಒಂದು ವಾರ್ಷಿಕ ವೇತನ ಬಡ್ತಿಯನ್ನು ಸಂಚಿತ ಪರಿಣಾಮವಿಲ್ಲದೆ ತಡೆ ಹಿಡಿಯುವ (Withholding of One Annual Increment without cumulative*

*effect) ದಂಡನೆಯನ್ನು ವಿಧಿಸಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು. ಇವರ ವಿರುದ್ಧ ICC ವಿಚಾರಣೆ ಬಾಕಿ ಇರುವುದರಿಂದ, ಆವರಿಗೆ ಈ ಹಿಂದೆ ನಿರ್ಧರಿಸಿದಂತೆ ಯಾವುದೇ ಜವಾಬ್ದಾರಿ ಸ್ಥಾನಗಳನ್ನು ನೀಡದೇ ಇರಲು ಸಿಂಡಿಕೇಟ್ ಸಭೆ ಸರ್ವಾನುಮತದಿಂದ ಅನುಮೋದನೆ ನೀಡಿತು.*

*ಪರಿನಿಯಮಗಳ ನಿಯಮ 28.10 ಪ್ರಕಾರ ಸಂಬಂಧಿಸಿದ ಸಿಬ್ಬಂದಿಯ ವಿರುದ್ಧ ಉದ್ದೇಶಿಸಿರುವ ಶಿಸ್ತು ಕ್ರಮದ ಕುರಿತು ಲಿಖಿತ ಸೂಚನೆ ನೀಡಿ ಅಗತ್ಯ ಕ್ರಮ ಕೈಗೊಳ್ಳಬೇಕೆಂದು ತೀರ್ಮಾನಿಸಲಾಯಿತು".*

ಸಿಂಡಿಕೇಟ್ ಸಭೆಯ ತೀರ್ಮಾನದಂತೆ, ವಿಶ್ವವಿದ್ಯಾನಿಲಯದ (C.C.A) ಪರಿನಿಯಮಗಳ ಅನುಸಾರ ಡಾ॥ ಎಂ.ಮುನಿನಾರಾಯಣಪ್ಪ, ಪ್ರಾಧ್ಯಾಪಕರು, ವಾಣಿಜ್ಯ ವಿಭಾಗರವರ ವರಿಗೆ ಒಂದು ವಾರ್ಷಿಕ ವೇತನ ಬಡ್ತಿಯನ್ನು ಸಂಚಿತ ಪರಿಣಾಮ ರಹಿತವಾಗಿ (Without Cumulative Effect) ತಡೆಹಿಡಿದು ಆದೇಶ ಹೊರಡಿಸಲಾಗಿದೆ. (ಉಲ್ಲೇಖ: ಬೆ.ನ.ವಿ/ ಸಿಬ್ಬಂದಿ/ಸೂ.ಪ/2022-23/04, ದಿನಾಂಕ: 03.04.2023).

*ಸದರಿ ಪ್ರಾಧ್ಯಾಪಕರ ವಿರುದ್ಧ ICC ವಿಚಾರಣೆ ಬಾಕಿ ಇರುವುದರಿಂದ, ಸಿಂಡಿಕೇಟ್ ತೀರ್ಮಾನದ ಪ್ರಕಾರ ಯಾವುದೇ ಜವಾಬ್ದಾರಿ ಸ್ಥಾನಗಳನ್ನು ನೀಡಿರುವುದಿಲ್ಲ. ICC ಪ್ರಕರಣದಲ್ಲಿ* ದೂರುದಾರರಾಗಿರುವ ಮಹಿಳಾ ಸಂಶೋಧನಾ ವಿದ್ಯಾರ್ಥಿನಿ ಸದರಿ ಪ್ರಾಧ್ಯಾಪಕರು ತಮ್ಮೊಂದಿಗೆ ಅನುಚಿತವಾಗಿ ವರ್ತಿಸಿದ್ದಾರೆ ಎಂದು ದಿನಾಂಕ: 15.11.2021 ಮತ್ತು 18.11.2021ರಂದು ಸಲ್ಲಿಸಿರುವ ಅರ್ಜಿಯಲ್ಲಿ ಮಾಡಿರುವ ಆರೋಪಗಳ ಬಗ್ಗೆ ಪ್ರತ್ಯೇಕವಾಗಿ ವಿಚಾರಣೆ ನಡೆಸಿ ವರದಿ ಸಲ್ಲಿಸಲು ಆಂತರಿಕ ದೂರು ಸಮಿತಿಯ (ICC) ಅಧ್ಯಕ್ಷರಾದ ಡಾ.ಪಿ.ಆರ್.ಚೇತನ, ಪ್ರಾಧ್ಯಾಪಕರು, ರಸಾಯನಶಾಸ್ತ್ರ ವಿಭಾಗ ಅವರಿಗೆ ತಿಳಿಸಲಾಗಿತ್ತು.

ಅದರಂತೆ, ICC ಸಮಿತಿಯು, ದೂರುದಾರರೊಂದಿಗೆ ಜರುಗಿರಬಹುದಾದ ಲೈಂಗಿಕ ಕಿರುಕುಳ ಆಪಾದನೆಗಳ ಕುರಿತು ಕೂಲಂಕುಷವಾಗಿ ಮತ್ತು ಸುದೀರ್ಘವಾಗಿ ವಿಚಾರಣೆ ನಡೆಸಿ, ಸಮಿತಿಯ ಅಧ್ಯಕ್ಷರು ದಿನಾಂಕ: 21.08.2023ರಂದು ಮುಚ್ಚಿದ ಲಕೋಟೆಯಲ್ಲಿ ವಿಶ್ವವಿದ್ಯಾನಿಲಯಕ್ಕೆ ವರದಿ ಸಲ್ಲಿಸಿರುತ್ತಾರೆ.

ಆಂತರಿಕ ದೂರುಗಳ ಸಮಿತಿ ಸದರಿ ಸಂಶೋಧನಾ ವಿದ್ಯಾರ್ಥಿನಿ ಶ್ರೀಮತಿ ದೀಕ್ಷಾರವರು ದಿನಾಂಕ: 15.11.2021ಮತ್ತು 18.11.2021 ರಲ್ಲಿ ಸಲ್ಲಿಸಿರುವ ಆರೋಪಗಳನ್ನು The Sexual Harassment of Women at Workplace (Prevention, Prohibition and Redressal) Act, 2013 ರ ಮತ್ತು UGC (Prevention, Prohibition and Redressal of Sexual Harassment of Women Employees and Students in Higher Educational Institutions) Regulations, 2015 ನಿಯಮಾನುಸಾರ ವಿಧಿವತ್ತಾಗಿ ವಿಚಾರಣೆ ನಡೆಸಿ, ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸಿದ ವರದಿಯನ್ನು ದಿನಾಕ 27.09.2023 ರಂದುಜರುಗಿದ ಸಿಂಡಿಕೇಟ್ ಸಭೆ ಪರಿಗಣಿಸಿ ಕೆಳಗಿನಂತೆ ತೀರ್ಮಾನಿಸಿರುತ್ತದೆ.

ಸಿಂಡಿಕೇಟ್ ತೀರ್ಮಾನ:

*"ವರದಿಯ ಗೌಪ್ಯತೆಯನ್ನು ಕಾಪಾಡಿಕೊಳ್ಳಲು ತಿಳಿಸಿ ಉಪಸ್ಥಿತರಿದ್ದ ಎಲ್ಲ ಸದಸ್ಯರಿಗೆ ವರದಿಯ ಪ್ರತಿಯನ್ನು ನೀಡಿ, ವಿಚಾರಣಾ ವರದಿಯ ಮೇಲೆ ಕಾನೂನು ತಜ್ಞರ ಅಭಿಪ್ರಾಯ ಪಡೆದು ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಬೇಕೆಂದು ಸೂಚಿಸಿ ವಿಷಯವನ್ನು ಮುಂದೂಡಲಾಯಿತು".*

*ಸಿಂಡಿಕೇಟ್ ತೀರ್ಮಾನದ ಪ್ರಕಾರ ನಡತೆ ನಿಯಮಗಳ ಉಲ್ಲಂಘನೆಕುರಿತಂತೆ ವಿಚಾರಣಾಧಿಕಾರಿಗಳು ಸಲ್ಲಿಸಿದ ವರದಿ ಎರಡೂ ಪ್ರಕರಣದಲ್ಲಿ ವಿಚಾರಣಾಧಿಕಾರಿಗಳು ಮತ್ತು ICC ಸಮಿತಿ ನೀಡಿದ ವರದಿ*

ಪ್ರತಿಗಳನ್ನು ಕಾನೂನು ಸಲಹೆಗಾರರಿಗೆ ಕಳುಹಿಸಿ.ವರದಿಯ ಶಿಫಾರಸ್ಸಿನ ಹಿನ್ನೆಲೆಯಲ್ಲಿ ಮೇಲೆ ಕಾನೂನು ಅಭಿಪ್ರಾಯ ನೀಡಲು ವಿಶ್ವವಿದ್ಯಾನಿಲಯದ ನ್ಯಾಯವಾದಿಗಳಿಗೆ ಉಲ್ಲೇಖ (4) ರ ಪತ್ರದಲ್ಲಿ ಕೋರಲಾಗಿತ್ತು. ಕಾನೂನು ಸಲಹೆಗಾರರು ಈ ಕುರಿತು ಕೂಲಂಕುಶವಾಗಿ ಪರಿಶೀಲಿಸಿ ದಿನಾಂಕ: 27-12-2023ರ ಪತ್ರದಲ್ಲಿ ಕೆಳಗಿನಂತೆ ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ.

*Though the disciplinary proceedings initiated by the University under the relevant provisions of CCA Rules and the Enquiry conducted by ICC are against the same person i.e. Dr. M. Muninarayanappa, Professor, Department of Commerce, Bengaluru City University, Bengaluru, the charges levelled in the Department Enquiry and also complaint before the ICC are totally separate and distinct and the charges levelled against him in both the enquiries/proceedings have been proved, as can be seen from the Reports submitted by the Departmental Enquiry and also Internal Complaints Committee (ICC).The penalty imposed on the Dr. M. Muninarayanappa, based on the Report submitted by the Departmental Enquiry would not come in the way of university to take action based on the ICC report in which the allegations of sexual harassment against him has been proved and therefore, in my considered opinion there is no legal impediment whatsoever for the Authorities of the University to consider the recommendations/reports of Internal Complaints Committee and to take a suitable action against Dr. M. Muninarayanappa.*

*ICC ಸಮಿತಿಯು ಡಾ: ಎಂ. ಮುನಿನಾರಾಯಣಪ್ಪ, ಪ್ರಾಧ್ಯಾಪಕರು, ವಾಣಿಜ್ಯ ವಿಭಾಗ ಅವರ ವಿರುದ್ಧ ಕೈಗೊಳ್ಳಲು ಶಿಫಾರಸ್ಸು ಮಾಡಿರುವ ಕ್ರಮಗಳು ಕೆಳಗಿನಂತಿರುತ್ತದೆ.*

*a) Withholding of promotion to the Respondent.*
*b) Withholding of pay rise or increments until Respondents superannuation.*
*c) No female research scholars/project guidance should be allotted to the Respondent.*
*d) No statutory positions of authority such as the Chairman of the Department, Dean, etc should be given to the Respondent till his superannuation*
*e) Compensation to be paid by the Respondent to be fixed by this University, to the Complainant for an adverse impact on her academic career and severe mental harassment.*

ಸಿಂಡಿಕೇಟ್ ತೀರ್ಮಾನ ಹಾಗೂ ಕಾನೂನು ಸಲಹೆಗಾರರು ನೀಡಿದ ಅಭಿಪ್ರಾಯದ ಹಿನ್ನೆಲೆಯಲ್ಲಿ ICC ಸಮಿತಿ ಶಿಫಾರಸ್ಸು ಮಾಡಿರುವ ಶಿಸ್ತು ಕ್ರಮಗಳ ಕುರಿತು ಪರಿಶೀಲನೆ ಹಾಗೂ ತೀರ್ಮಾನಕ್ಕಾಗಿ ಸಿಂಡಿಕೇಟ್ ಸಭೆಗೆ ಪ್ರಸ್ತಾವನೆಯನ್ನು ಮಂಡಿಸಲಾಗಿದೆ.

***ವಿವರಣೆ:***

ಕುಲಸಚಿವರು ಪ್ರಸ್ತಾವನೆ ಹಾಗೂ ಕಾನೂನು ಸಲಹೆಯನ್ನು ಸಭೆಯಲ್ಲಿ ಮಂಡಿಸಿದರು. ಕಾನೂನು ಸಲಹೆಯ ಪ್ರಕಾರ ಪ್ರಥಮ ಹಂತದ ಇಲಾಖಾ ವಿಚಾರಣೆ ಹಾಗೂ ಪ್ರಸ್ತುತ ಲೈಂಗಿಕ ದೌರ್ಜನ್ಯ ಕುರಿತ ICC

ವಿಚಾರಣೆ ಎರಡೂ ಪ್ರಕರಣಗಳು ವಿಭಿನ್ನವಾಗಿದ್ದು, ದುರ್ನಡತೆಗಾಗಿ ಸಿಸಿಎ ನಿಯಮಗಳ ಪ್ರಕಾರ ಇಲಾಖಾ ವಿಚಾರಣಾ ವರದಿಯ ಆಧಾರದ ಮೇಲೆ ಶಿಕ್ಷೆ ವಿಧಿಸಿದ್ದು, ಪ್ರಸ್ತುತ ICC ವಿಚಾರಣಾ ಸಮಿತಿ ನೀಡಿರುವ ವರದಿಯನ್ನು ಪರಿಗಣಿಸಿ ಶಿಕ್ಷೆ ವಿಧಿಸಲು ಕಾನೂನಾತ್ಮಕವಾಗಿ ಯಾವುದೇ ತೊಡಕಗಳು ಇಲ್ಲವೆಂದು ಅಭಿಪ್ರಾಯ ವ್ಯಕ್ತಪಡಿಸಿರುವುದನ್ನು ಸಭೆಯ ಗಮನಕ್ಕೆ ತರಲಾಯಿತು. ಮಾನ್ಯ ಕುಲಪತಿಗಳು ಸಹ ಪ್ರಕರಣದ ಸೂಕ್ಷ್ಮತೆ ಹಾಗೂ ಗಂಭೀರತೆಯನ್ನು ಸಭೆಗೆ ಮನವರಿಕೆ ಮಾಡಿಕೊಟ್ಟು ವರದಿಯನ್ನು ಜವಾಬ್ದಾರಿಯುತವಾಗಿ ಪರಿಗಣಿಸಿ ತೀರ್ಮಾನ ಕೈಗೊಳ್ಳುವ ಅಗತ್ಯವನ್ನು ವಿವರಿಸಿದರು.

ಸದಸ್ಯರಾದ ಪ್ರೊ. ಹರಿಪ್ರಸಾದ್‌ರವರು ಆಪಾದಿತ ಪ್ರಾಧ್ಯಾಪಕರ ಸೇವೆ ಹಾಗೂ ಕೆಲವು ತಿಂಗಳಲ್ಲಿ ನಿವೃತ್ತಿ ಹೊಂದುತ್ತಿರುವುದನ್ನು ಗಮನದಲ್ಲಿಟ್ಟುಕೊಂಡು ಇಲಾಖಾ ವಿಚಾರಣೆಯಲ್ಲಿ ನೀಡಿರುವ ಶಿಕ್ಷೆಯನ್ನು ಈ ಪ್ರಕರಣದ ಅನ್ವಯಿಸಬೇಕೆಂದು ಹೆಚ್ಚಿನ ಶಿಕ್ಷೆ ವಿಧಿಸಬಾರದೆಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಸದಸ್ಯರಾದ ಶ್ರೀ ಸಮರ್ಥ ಮುನಿರಾಜುರವರು ಸಮಿತಿಯ ಸದಸ್ಯರಾದ ಡಾ. ರಮೇಶ್ ಕುಡೇನೆಟ್ಟಿಯವರ ಅಸಮ್ಮತಿ ಪತ್ರಕ್ಕೆ ಒಪ್ಪಿಗೆ ನೀಡಿ ICC ವಿಚಾರಣಾ ಸಮಿತಿಯ ಶಿಫಾರಸ್ಸುಗಳನ್ನು ಪರಿಹಾರಧನ ಮಂಜೂರು ಮಾಡುವ ಶಿಫಾರಸ್ಸನ್ನು ಹೊರತುಪಡಿಸಿ ಒಪ್ಪಿಕೊಳ್ಳಬೇಕೆಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಇನ್ನೊಬ್ಬ ಸದ್ಯಸರು ಶ್ರೀ ಎಂ.ವಿ. ರಂಗಪ್ಪನವರು ಈಗಾಗಲೇ ಸದರಿ ಪ್ರಾಧ್ಯಾಪಕರಿಗೆ ಇಲಾಖಾ ವಿಚಾರಣೆಯಲ್ಲಿ ಶಿಕ್ಷೆ ನೀಡಲಾಗಿದ್ದು ಶಿಕ್ಷಕರ ಮತ್ತು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಹಾಗೂ ಈ ಕುರಿತು ಒಂದು ಸಂದೇಶ ನೀಡುವ ದಿಸೆಯಲ್ಲಿ ತೀರ್ಮಾನ ಕೈಗೊಳ್ಳಬೇಕಾಗಿದೆ. ಈಗಾಗಲೇ ನೀಡಿರುವ ಶಿಕ್ಷೆಯ ಹಿನ್ನೆಲೆಯಲ್ಲಿ ಮಾನವೀಯತೆಯ ದೃಷ್ಟಿಯಿಂದ ಈ ಪ್ರಕರಣ ಪರಿಗಣಿಸಬೇಕೆಂದು ತಿಳಿಸಿದರು.

*ಸಿಂಡಿಕೇಟ್ ತೀರ್ಮಾನ:*

1. **ಸದಸ್ಯರಾದ ಡಾ. ಚೇತನಾ ಪಿ.ಆರ್ ರವರು ತಾವು ICC ಸಮಿತಿಯ ಅಧ್ಯಕ್ಷರಾಗಿ ಕರ್ತವ್ಯ ನಿರ್ವಹಿಸಿರುವುದರಿಂದ ಅದರ ವರದಿಯ ಮೇಲೆ ತೀರ್ಮಾನ ತೆಗೆದುಕೊಳ್ಳುವ ಸಂದರ್ಭದಲ್ಲಿ ಸಭೆಯಲ್ಲಿ ಉಪಸ್ಥಿತರಿರುವುದು ಸಮಂಜಸವಲ್ಲವೆಂದು ತಿಳಿಸಿ ಅಧ್ಯಕ್ಷರ ಅನುಮತಿ ಪಡೆದು ಸಭೆಯಿಂದ ಹೊರಗೆ ಉಳಿದರು.**
2. **ICC ಸಮಿತಿ ನೀಡಿರುವ ವರದಿಯನ್ನು ಕೂಲಂಕಷವಾಗಿ ಪರಿಶೀಲಿಸಿ, ಸಮಿತಿ ಮಾಡಿದ (a) (b) (c) ಮತ್ತು (d) ಶಿಫಾರಸ್ಸುಗಳನ್ನು ಸರ್ವಾನುಮತದಿಂದ ಒಪ್ಪಿಕೊಳ್ಳಲು ತೀರ್ಮಾನಿಸಿತು.**
3. **ಪರಿಹಾರಧನ ನೀಡುವ ಕುರಿತು ಮಾಡಿರುವ ಶಿಫಾರಸ್ಸು (e) ಪ್ರತ್ಯೇಕವಾಗಿ ಪರಿಗಣಿಸಲು ಹಾಗೂ ಸಮಿತಿ ಸದಸ್ಯರಾದ ಡಾ. ರಮೇಶ ಕುಡೇನಟ್ಟಿಯವರು ನೀಡಿದ ಅಸಮ್ಮತಿ ಪತ್ರ ನಿರಾಕರಿಸಲು ಸಿಂಡಿಕೇಟ್ ಸಭೆ ತೀರ್ಮಾನಿಸಿತು.**

ವಿಷಯ ಸಂಖ್ಯೆ: 22

ವಿಷಯ : ದಿನಾಂಕ. 22.02.2024 ರಂದು ಜರುಗಿದ ಕೇಂದ್ರೀಯ ಖರೀದಿ ಸಮಿತಿ ಸಭೆಯ ನಡವಳಿಗಳು ಅನುಮೋದನೆ ಕುರಿತು.

*ಪರಮಾರ್ಶಕ ಟಿಪ್ಪಣಿ:*

ವಿಶ್ವವಿದ್ಯಾಲಯದ ಕೇಂದ್ರೀಯ ಖರೀದಿ ಸಮಿತಿ ಸಭೆಯನ್ನು ದಿನಾಂಕ 22.02.2024 ರಂದು ಜರುಗಿಸಲಾಗಿದೆ. ಸದರಿ ಸಭೆಯಲ್ಲಿ ಭೌತಶಾಸ್ತ್ರ, ಪ್ರಾಣಿಶಾಸ್ತ್ರ ಮತ್ತು ಸಸ್ಯಶಾಸ್ತ್ರ ವಿಭಾಗಗಳಿಗೆ ಅಗತ್ಯವಾಗಿ ಬೇಕಾದ ಪ್ರಯೋಗಾಲಯ ಉಪಕರಣಗಳನ್ನು ಮತ್ತು ವಾಣಿಜ್ಯ, ಭೌತಶಾಸ್ತ್ರ ವಿಭಾಗಕ್ಕೆ ಗಣಕ ಯಂತ್ರ ಪ್ರಯೋಗಾಲಯ ಹಾಗೂ ವಿವಿಧ ವಿಭಾಗಗಳಿಗೆ ಅಗತ್ಯವಿರುವ ಗಣಕ ಯಂತ್ರಗಳು ಹಾಗೂ ಇತರ ಪರಿಕರಗಳ ಖರೀದಿಯ ಕುರಿತಂತೆ ಕೇಂದ್ರೀಯ ಖರೀದಿ ಸಮಿತಿ ಸಭೆಯ ನಡವಳಿಗಳನ್ನು ಸಿಂಡಿಕೇಟ್ ಸಭೆಯ ಪರಿಶೀಲನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ

*ಸಿಂಡಿಕೇಟ್ ತೀರ್ಮಾನ:*

ಸುದೀರ್ಘ ಚರ್ಚೆಯ ನಂತರ, ಕೇಂದ್ರೀಯ ಖರೀದಿ ಸಮಿತಿಯ ನಡವಳಿಗಳಿಗೆ ಒಪ್ಪಿಗೆ ನೀಡಲು ಸಿಂಡಿಕೇಟ್ ಸಭೆ ತೀರ್ಮಾನಿಸಿತು.

ಸದಸ್ಯರಾದ ಶ್ರೀ ಎಂ. ವಿ ರಂಗಪ್ಪನವರು ಎಲ್ಲ ವಿಭಾಗಗಳಿಂದ ಅಗತ್ಯವಾದ ಉಪಕರಣ, ಪೀಠೋಪಕರಣ, ಲೇಖನ ಸಾಮಾಗ್ರಿಗಳ ವಿವರಗಳನ್ನು ಮುಂಚಿತವಾಗಿ ಪಡೆದು ಖರೀದಿಗೆ ಕ್ರಮವಹಿಸಬೇಕೆಂದು ತಿಳಿಸಿದರು. ಕುಲಪತಿಗಳು ಹೊಸದಾಗಿ ಪ್ರಾರಂಭಿಸಿರುವ ವಿಭಾಗ / ಕೋರ್ಸುಗಳಿಗೆ ತುರ್ತಾಗಿ ಅಗತ್ಯವಾಗಿರುವ ವಸ್ತುಗಳನ್ನು ಮಾತ್ರ ಪ್ರಸ್ತುತ ಪ್ರಸ್ತಾವನೆ ಒಳಗೊಂಡಿದೆ ಎಂದು ಹೇಳಿ, ವಿದ್ಯಾರ್ಥಿಗಳ ಹಿತದೃಷ್ಠಿಯಿಂದ ಇದು ಅತ್ಯಂತ ಅಗತ್ಯವಿದೆ ಎಂದು ಹೇಳಿದರು. ಉಳಿದಂತೆ ವಾರ್ಷಿಕ ಅಗತ್ಯಗಳ ಪಟ್ಟಿಯನ್ನು ಪಡೆದು ಖರೀದಿಸಲು ಕ್ರಮವಹಿಸಲಾಗುತ್ತದೆ ಎಂದು ಹೇಳಿದರು.

ವಿಷಯ ಸಂಖ್ಯೆ:23

ವಿಷಯ : ಬೆಂಗಳೂರು ನಗರ ವಿಶ್ವವಿದ್ಯಾನಿಲಯದಲ್ಲಿ Examination Process Management ಮತ್ತು E-Governance in Examination Management ಸೇವೆಗಳನ್ನು ಹೊರಗುತ್ತಿಗೆ ಆಧಾರದಲ್ಲಿ ಕಾರ್ಯ ನಿರ್ವಹಿಸುತ್ತಿರುವ M/s Logisys ಮತ್ತು M/s Uniclare ಸಂಸ್ಥೆಗಳು ಹೊಸದಾಗಿ ಸೇವಾ ಶುಲ್ಕವನ್ನು ಹೆಚ್ಚಳ ಮಾಡುವಂತೆ ಕೋರಿ ಸಲ್ಲಿಸಿದ್ದ ಮನವಿ ಪತ್ರಗಳ ಬಗ್ಗೆ ಚರ್ಚಿಸುವ ಕುರಿತು ದಿನಾಂಕ 01.01.2024 ರಂದು ನಡೆದ ಸಭೆಯ ನಡಾವಳಿಯನ್ನು ಅನುಮೋದಿಸುವ ಬಗ್ಗೆ

ಉಲ್ಲೇಖ:
1. BCU/LS/11-01-23-24 , dated:29.11.2023
2. BCU/UC/11-01/23-24, dated:29.11.2023
3. ಸಂಖ್ಯೆ:ದಾವಿ/ಪವಿ:ಎಂಪಿ.ಐ.ಸಿ:2323-24/5008, ದಿನಾಂಕ: 03.01.2024.
4. ಸಂಖ್ಯೆ:ದಾವಿ:ಪವಿ:ಎಂಪಿ.ಐ.ಸಿ/2023-24/5009, ದಿನಾಂಕ: 03.01.2024.

*ಪರಮಾರ್ಶಕ ಟಿಪ್ಪಣಿ:*

ಬೆಂಗಳೂರು ನಗರ ವಿಶ್ವವಿದ್ಯಾನಿಲಯ ಪ್ರಾರಂಭಗೊಂಡಾಗ ಪರೀಕ್ಷಾ ಕಾರ್ಯಗಳ ನಿರ್ವಹಣೆಗೆ ಹೊರಗುತ್ತಿಗೆ ಸಂಸ್ಥೆಯ ಸೇವೆಯನ್ನು ಪಡೆಯಲು ತೀರ್ಮಾನಿಸಿ ಟೆಂಡರ್ ಕರೆಯಲಾಗಿತ್ತು. ಟೆಂಡರಿನಲ್ಲಿ

ಮೆ//ಲಾಜಿಸಿಸ್ ಮತ್ತು ಮೆ//ಯುನಿಕ್ಲೇರ್ ಸಂಸ್ಥೆಗಳು ಯಶಸ್ವಿಯಾಗಿ 05 ವರ್ಷಗಳ ಕಾಲ ಸೇವೆಯನ್ನು ಒದಗಿಸಲು 2018 ರಲ್ಲಿ ಒಪ್ಪಂದ ಮಾಡಿಕೊಂಡಿದ್ದು, ಈ ಒಪ್ಪಂದ 2023ರ ಅಕ್ಟೋಬರ್‌ನಲ್ಲಿ ಮುಕ್ತಾಯಗೊಂಡಿರುತ್ತದೆ. UUCMS ಪದ್ಧತಿಯಲ್ಲಿ ಪರೀಕ್ಷೆ ನಡೆಸಲು ಸರ್ಕಾರ ಸೂಚಿಸಿದ ಹಿನ್ನಲೆಯಲ್ಲಿ ಸರ್ಕಾರ ಅಭಿವೃದ್ಧಿಪಡಿಸಿ, ನಿರ್ವಹಿಸುತ್ತಿರುವ ತಂತ್ರಾಂಶವನ್ನು ಉಪಯೋಗಿಸಿಕೊಂಡು ಪರೀಕ್ಷೆಗಳನ್ನು NEP ವಿದ್ಯಾರ್ಥಿಗಳಿಗೆ ನಡೆಸಲಾಗುತ್ತಿದೆ.

UUCMS ಪದ್ಧತಿಯನ್ನು ಅಳವಡಿಸಿಕೊಳ್ಳುವ ಮೊದಲು ವ್ಯಾಸಂಗ ಮಾಡಿರುವ ಕೆಲವು ವಿದ್ಯಾರ್ಥಿಗಳು ಕೆಲವು ವಿಷಯಗಳಲ್ಲಿ ಉತ್ತೀರ್ಣರಾಗದೇ ಕೋರ್ಸುಗಳನ್ನು ಮುಗಿಸಿರುತ್ತಾರೆ. ಇವರಿಗೆ ಸಪ್ಲಿಮೆಂಟರಿ ಪರೀಕ್ಷೆಗಳನ್ನು ನಡೆಸಬೇಕಾಗಿದೆ. ಈ ವಿದ್ಯಾರ್ಥಿಗಳ ಅಂಕಿ ಅಂಶಗಳು ಹೊರಗುತ್ತಿಗೆ ಸಂಸ್ಥೆಗಳಾದ ಮೆ//ಲಾಜಿಸಿಸ್ ಮತ್ತು ಮೆ//ಯುನಿಕ್ಲೇರ್ ಅವರಲ್ಲಿ ಇದ್ದು ಒಂದು ವರ್ಷದ ಅವಧಿಗೆ ಹೊರಗುತ್ತಿಗೆ ಸಂಸ್ಥೆಗಳ ಸೇವೆಯನ್ನು ಮುಂದುವರೆಸಿ, ಪರೀಕ್ಷೆಗಳನ್ನು ನಡೆಸಲು ವಿಶ್ವವಿದ್ಯಾನಿಲಯದ ಆಡಳಿತ ವರ್ಗ ತೀರ್ಮಾನಿಸಿದ್ದು, ಈ ಬಗ್ಗೆ ಆ ಸಂಸ್ಥೆಗಳನ್ನು ಸಂಪರ್ಕಿಸಿದಾಗ ಈ ಹಿಂದಿನ ದರದಲ್ಲಿ (ಮೆ//ಲಾಜಿಸಿಸ್ ಸಂಸ್ಥೆಯವರು ರೂ.206/- ಹಾಗೂ ಮೆ//ಯುನಿಕ್ಲೇರ್ ಸಂಸ್ಥೆಯವರು ರೂ.133/- ರಂತೆ) ಸೇವೆ ನೀಡಲು ಸಿದ್ಧವಿಲ್ಲವೆಂದು ತಿಳಿಸಿದ ಹಿನ್ನಲೆಯಲ್ಲಿ ಉಲ್ಲೇಖ (1) ಮತ್ತು (2) ರಲ್ಲಿ M/s Logisys ಮತ್ತು M/s Uniclare ಸಂಸ್ಥೆಗಳು ನೀಡಿರುವ ಮನವಿ ಪತ್ರದಂತೆ ಸೇವಾ ಶುಲ್ಕವನ್ನು ಹೆಚ್ಚಳ ಮಾಡುವ ಕುರಿತು ಚರ್ಚಿಸಲು ವಿಶ್ವವಿದ್ಯಾನಿಲಯದಿಂದ ನೇಮಿಸಲಾಗಿದ್ದ ಸಮಿತಿಯು ದಿನಾಂಕ 01.01.2024 ರಂದು ನಡೆದ ಸಭೆಯಲ್ಲಿ ಇತರೆ ವಿಶ್ವವಿದ್ಯಾಲಯಗಳಲ್ಲಿ ಸೇವಾ ಶುಲ್ಕವನ್ನು ಹೆಚ್ಚಳ ಮಾಡಿ ಪಾವತಿಸಲು ಒಪ್ಪಿಗೆ ನೀಡಿರುವ ವಿಚಾರಕ್ಕೆ ಸಂಬಂಧಿಸಿದಂತೆ ಚರ್ಚಿಸಿರುತ್ತಾರೆ.

ಉಲ್ಲೇಖ (3) ಮತ್ತು (4) ರಲ್ಲಿನ ವಿವರಗಳಂತೆ ಸದರಿ ಎರಡು ಸಂಸ್ಥೆಗಳಿಗೆ ನೀಡಲಾಗಿರುವ ಕಾರ್ಯಾದೇಶದಲ್ಲಿ ದಾವಣಗೆರೆ ವಿಶ್ವವಿದ್ಯಾನಿಲಯವು ಮೆ//ಲಾಜಿಸಿಸ್ ಸಂಸ್ಥೆಯ ಜೊತೆಗೆ ಒಬ್ಬ ವಿದ್ಯಾರ್ಥಿಗೆ ರೂ.365/-ರಂತೆ ಹಾಗೂ ಮೆ//ಯುನಿಕ್ಲೇರ್ ಸಂಸ್ಥೆಯ ಜೊತೆಗೆ ಒಬ್ಬ ವಿದ್ಯಾರ್ಥಿಗೆ ರೂ.235/- ರಂತೆ ಹೊಸದಾಗಿ ಸೇವಾ ಶುಲ್ಕವನ್ನು ಪರಿಷ್ಕರಿಸಿ ಒಂದು ವರ್ಷದವರೆಗೆ ಕರಾರು ಒಪ್ಪಂದವನ್ನು ಮಾಡಿಕೊಂಡಿರುತ್ತಾರೆ.

ದಿನಾಂಕ 01.01.2024 ರಂದು ನಡೆದ ಸಭೆಯ ನಡಾವಳಿಯನ್ನು ಸಿಂಡಿಕೇಟ್ ಸಭೆಯ ಪರಿಶೀಲನೆ ಮತ್ತು ಅನುಮೋದನೆಗಾಗಿ ಮಂಡಿಸಲಾಗಿದೆ.

***ವಿವರಣೆ:***

2021-22 ಕ್ಕಿಂತ ಮೊದಲು ನೊಂದಣಿಗೊಂಡು ಅನುತ್ತೀರ್ಣರಾಗಿರುವ ವಿದ್ಯಾರ್ಥಿಗಳ ಪರೀಕ್ಷಾ ಪ್ರಕ್ರಿಯೆಗಳನ್ನು ಹಿಂದಿನ ತತ್ರಾಂಶ ಬಳಸಿಕೊಳ್ಳುವ ಕುರಿತು ದಿನಾಂಕ 27.02.2024 ಸರ್ಕಾರ ಹೊರಡಿಸಿದ ಪತ್ರವನ್ನು ಸಭೆಯಲ್ಲಿ ಮಂಡಿಸಲಾಯಿತು. ಸದರಿ ಪತ್ರದ ಪ್ರಕಾರ ಹಳೆಯ ತತ್ರಾಂಶ ಬಳಕೆಯಲ್ಲಿ ನೊಂದಣಿಗೊಂಡು ಅನುತ್ತೀರ್ಣರಾಗಿರುವ ವಿದ್ಯಾರ್ಥಿಗಳಿಗೆ ಮುಂದಿನ 6 ತಿಂಗಳ ಅವಧಿಗೆ ಈ ಹಿಂದಿನಂತೆ ತತ್ರಾಂಶ ಬಳಕೆಯನ್ನು ಮುಂದುವರೆಸಿಕೊಳ್ಳಲು ಸರ್ಕಾರ ಅನುಮತಿ ನೀಡಿರುವುದನ್ನು ಸಭೆಯ ಗಮನಕ್ಕೆ ತರಲಾಯಿತು.

*ಸಿಂಡಿಕೇಟ್ ತೀರ್ಮಾನ*

ಪ್ರಸ್ತಾವನೆಯಲ್ಲಿ ಸೂಚಿಸಿದಂತೆ M/s Logisys ಮತ್ತು M/s Uniclare ಹೊರಗುತ್ತಿಗೆ ಸಂಸ್ಥೆಗಳಿಗೆ ಹಿಂದಿನ ಸಿಂಡಿಕೇಟ್ ಸಭೆಯ ತೀರ್ಮಾನದಂತೆ ಒಂದು ವರ್ಷದ ಅವಧಿಗೆ ಸೇವೆಯನ್ನು ಮುಂದುವರೆಸಲು ಸದರಿ ಸಂಸ್ಥೆಗಳು ಕ್ರಮವಾಗಿ ಪ್ರತಿ ವಿದ್ಯಾರ್ಥಿಗೆ ರೂ. 400/- ಮತ್ತು ರೂ. 270/- ಗಳನ್ನು ಪಾವತಿಸಲು ಸಲ್ಲಿಸಿರುವ ಮನವಿಯನ್ನು ಪರಿಶೀಲಿಸಿ ವರದಿ ಸಲ್ಲಿಸಲು ಕುಲಸಚಿವರ (ಮೌಲ್ಯಮಾಪನ) ರವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ರಚಿಸಲು ಸಿಂಡಿಕೇಟ್ ಸಭೆ ಕುಲಪತಿಗಳಿಗೆ ಅಧೀಕರಿಸಿತು.

ಪರೀಕ್ಷೆಗಳನ್ನು ಅತ್ಯಂತ ಜರೂರಾಗಿ ನಡೆಸಬೇಕಾಗಿರುವುದರಿಂದ ಸದರಿ ಸಮಿತಿಯ ಸಭೆ ಕರೆದು ಅದರ ಶಿಫಾರಸ್ಸುಗಳ ಆಧಾರದ ಮೇಲೆ ದರ ನಿಗದಿಪಡಿಸಲು, ಪರೀಕ್ಷೆಗಳನ್ನು ನಡೆಸಲು ಹಾಗೂ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಸ್ವೀಕರಿಸಲು ಅಧಿಸೂಚನೆ ಹೊರಡಿಸಬೇಕೆಂದು ಸಭೆ ತೀರ್ಮಾನಿಸಿತು.

ವಿಷಯ ಸಂಖ್ಯೆ:24

ವಿಷಯ : ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಮೂರನೇ ವಾರ್ಷಿಕ ಘಟಿಕೋತ್ಸವದಲ್ಲಿ ವಿದ್ಯಾರ್ಥಿಗಳಿಗೆ ವಿತರಿಸಲು ಬೇಕಾಗಿರುವ ಪದವಿ ಪ್ರಮಾಣ ಪತ್ರಗಳನ್ನು MSIL ಅಥವಾ ಟೆಂಡರ್ ಮುಖಾಂತರ ಖರೀದಿಸುವ ಬಗ್ಗೆ

*ಪರಾಮರ್ಶಕ ಟಿಪ್ಪಣಿ:*

ಬೆಂಗಳೂರು ನಗರ ವಿಶ್ವವಿದ್ಯಾಲಯದ ಮೂರನೇ ಘಟಿಕೋತ್ಸವವು ಸದ್ಯದಲ್ಲೇ ನಡೆಯಲಿದ್ದು, ಅದಕ್ಕೆ ಸಿದ್ಧತೆ ಮಾಡಿಕೊಳ್ಳಬೇಕಾಗಿದೆ. ಮೂರನೇ ಘಟಿಕೋತ್ಸವದಲ್ಲಿ ಪದವಿಗಳನ್ನು ಪಡೆಯಲು ವಿವಿದ ಸ್ನಾತಕ, ಸ್ನಾತಕೋತರ ಮತ್ತು ಬಿ.ಎಡ್., ಬಿ.ಪಿ.ಎಡ್., ಹಾಗೂ ಎಂ.ಎಡ್. ಕೋರ್ಸುಗಳಲ್ಲಿ ವಿಶ್ವವಿದ್ಯಾಲಯದ ಸ್ನಾತಕೋತರ ವಿಭಾಗಗಳಲ್ಲಿ, ಸಂಯೋಜನೆಗೊಂಡಿರುವ ಕಾಲೇಜುಗಳಲ್ಲಿ ಹಾಗೂ ಸ್ವಾಯತ್ತ ಕಾಲೇಜುಗಳಲ್ಲಿ ವ್ಯಾಸಂಗ ಮಾಡಿ ಅರ್ಹರಾದ ಸುಮಾರು 40 ಸಾವಿರ ವಿದ್ಯಾರ್ಥಿಗಳಿಗೆ ಪದವಿ ಪ್ರಮಾಣ ಪತ್ರಗಳನ್ನು ವಿತರಿಸಬೇಕಾಗುತ್ತದೆ. ಕಳೆದ ವರ್ಷ ದಿನಾಂಕ 15.03.2023ರಂದು ಜರುಗಿದ ಸಿಂಡಿಕೇಟ್ ಸಭೆಯ ಅನುಮೋದನೆ ಪಡೆದು 45 ಸಾವಿರ ಖಾಲಿ ಪದವಿ ಪ್ರಮಾಣ ಪತ್ರಗಳನ್ನು KTTP ಕಾಯ್ದೆಯ ಪ್ರಕಾರ 4G ವಿನಾಯಿತಿ ಪಡೆದ ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ (MSIL) ಸಂಸ್ಥೆಯ ಮೂಲಕ ಖರೀದಿಸಲಾಗಿತ್ತು.

ಆದ ಕಾರಣ ಮುಂಬರುವ ಮೂರನೇ ವಾರ್ಷಿಕ ಘಟಿಕೋತ್ಸವದಲ್ಲಿ 2020-23ನೇ ಶೈಕ್ಷಣಿಕ ವರ್ಷದ ಸ್ನಾತಕ ಹಾಗೂ 2021-23ನೇ ಶೈಕ್ಷಣಿಕ ವರ್ಷದ ಸ್ನಾತಕೋತರ ವಿವಿದ ಪದವಿಗಳಲ್ಲಿ

ಉತ್ತೀರ್ಣರಾಗುವ ಸುಮಾರು 40 ಸಾವಿರ ವಿದ್ಯಾರ್ಥಿಗಳಿಗೆ ವಿತರಿಸಲು ಅಗತ್ಯವಾದ 40 ಸಾವಿರ ಪದವಿ ಪ್ರಮಾಣ ಪತ್ರಗಳನ್ನು KTTP ಕಾಯ್ದೆಯ ಪ್ರಕಾರ ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ (MSIL) ಸಂಸ್ಥೆಯ ಮೂಲಕ ಅಥವಾ ಟೆಂಡರ್ ಕರೆಯುವ ಮೂಲಕ ಖರೀದಿಸುವುದರ ಕುರಿತು ತೀರ್ಮಾನಕ್ಕಾಗಿ ಸಿಂಡಿಕೇಟ್ ಸಭೆಯ ಪರಿಗಣನೆ ಮತ್ತು ಅನುಮೋದನೆಗಾಗಿ ಮಂಡಿಸಿದೆ.

*ಸಿಂಡಿಕೇಟ್ ತೀರ್ಮಾನ*

**ಅಗತ್ಯವಾದ 40,000 ಖಾಲಿ ಪದವಿ ಪ್ರಮಾಣ ಪತ್ರಗಳನ್ನು MSIL ಸಂಸ್ಥೆಯ ಮುಖಾಂತರ (4G ವಿನಾಯಿತಿ ಪಡೆದಿದ್ದಲ್ಲಿ) ಅಥವಾ KTPP Act ಪ್ರಕಾರ ಟೆಂಡರ್ ಪ್ರಕ್ರಿಯೆ ಜರುಗಿಸಿ ಮುದ್ರಿಸಲು/ ಖರೀದಿಸಲು ಕ್ರಮವಹಿಸಲು ಸಿಂಡಿಕೇಟ್ ಸಭೆ ಅನುಮೋದನೆ ನೀಡಲು ತೀರ್ಮಾನಿಸಿತು.**

**ವಿಷಯ ಸಂಖ್ಯೆ:25**

ವಿಷಯ : ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ವಿತ್ತಾಧಿಕಾರಿಗಳಿಗೆ ಒಂದು Designated Vehicle ಒದಗಿಸುವ ಕುರಿತು

*ಪರಾಮರ್ಶಕ ಟಿಪ್ಪಣಿ:*

ಬೆಂಗಳೂರು ನಗರ ವಿಶ್ವವಿದ್ಯಾನಿಲಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ 4 Statutory officers ಪೈಕಿ ವಿತ್ತಧಿಕಾರಿಗಳಿಗೆ Designated vehicle ಇರುವುದಿಲ್ಲ. ಸದರಿ ಹುದ್ದೆಯು ಲೆಕ್ಕ ಪರಿಶೋಧನಾ ಹಾಗೂ ಲೆಕ್ಕ ಪತ್ರ ಇಲಾಖೆ ಜಂಟಿ ನಿರ್ದೇಶಕರು/ ಅಪರ ನಿರ್ದೇಶಕರ ಹುದ್ದೆಯಾಗಿದ್ದು, ಸದರಿ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಇತರೆ ಸರ್ಕಾರಿ/ ಸರ್ಕಾರಿ ಸಾಮ್ಯಾದ ಕಛೇರಿಗಳಲ್ಲಿ ಇಲಾಖೆಗಳಲ್ಲಿ Designated vehicle ಸೌಲಭ್ಯವನ್ನು ಒದಗಿಸಿರುತ್ತಾರೆ. ಆದ್ದರಿಂದ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ವಿತ್ತಾಧಿಕಾರಿಗಳ ಹುದ್ದೆಗೆ ಒಂದು Designated vehicle ಸೌಕರ್ಯವನ್ನು ಒದಗಿಸುವ ಕುರಿತು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ.

*ಸಿಂಡಿಕೇಟ್ ತೀರ್ಮಾನ*

**ಹಣಕಾಸು ಅಧಿಕಾರಿಗಳ ಉಪಯೋಗಕ್ಕೆ ಒಂದು ಸೂಕ್ತ ವಾಹನವನ್ನು ನಿಯಮಾನುಸಾರ ಖರೀದಿಸಲು ಸಿಂಡಿಕೇಟ್ ಸಭೆ ಒಪ್ಪಿಗೆ ನೀಡಿತು.**

ಕುಲಸಚಿವರು (ಮೌಲ್ಯಮಾಪನ) ರವರಿಂದ ವಂದನಾರ್ಪಣೆ ಹಾಗೂ ರಾಷ್ಟ್ರಗೀತೆಯೊಂದಿಗೆ ಸಭೆ ಮುಕ್ತಾಯವಾಯಿತು.

ಸಹಿ/-
ಕುಲಸಚಿವರು
ಸದಸ್ಯಕಾರ್ಯದರ್ಶಿಗಳು

ಸಹಿ/-
ಕುಲಪತಿಗಳು
ಸಭಾಧ್ಯಕ್ಷರು

ಕುಲಸಚಿವರು
ಬೆಂಗಳೂರು ನಗರ ವಿಶ್ವವಿದ್ಯಾನಿಲಯ
ಬೆಂಗಳೂರು